ಅಕ್ಕಿ ೧ ಕೆ. ಜಿ, ಹೆಸರುಕಾಳು ೧೦೦ ಗ್ರಾಂ, ಹಚ್ಚಿದೆಲೆ ೪, ದೊನ್ನೆ ೮, ವಸ್ತ್ರ ೧, ಪಂಚಪಾತ್ರೆ ಅಥವಾ ಲೋಟ ೧, ಸುವಾಸಿನಿಯಾದರೆ ಮರದಜೊತೆ-೧, ಅರಿಶಿನ ಕುಂಕುಮ, ಹೂವು, ತೆಂಗಿನಕಾಯಿ೧, ಚಿಲ್ಲರೆ ದಕ್ಷಿಣೆ, ಪುರೋಹಿತರ ಸಂಭಾವನೆ.

ನಿತ್ಯವಿಧಿ ಮೊದಲನೇ ದಿನ ಆದರೆ

ಅಕ್ಕಿ ೧ ಕೆ.ಜಿ., ಸೇರಕ್ಕಿ ಬೇಯುವ ತಪ್ಪಲೆ ೧, ಕರಿಎಳ್ಳು ೨೦೦ ಗ್ರಾಂ, ತುಪ್ಪ ೧೦೦ ಗ್ರಾಂ, ಊಟದ ಎಲೆ ೨, ಹೆಸರುಕಾಳು ೨೦೦ ಗ್ರಾಂ, ದೊನ್ನೆ ೪, ವಸ್ತ್ರ ೨, ಪಂಚಪಾತ್ರೆ ೨, ಚಿಲ್ಲರೆ ಹಾಗೂ ಆಚಾರ್ಯರ ಸಂಭಾವನೆ.

ಎರಡನೆಯ ದಿನಕ್ಕೆ

ಅಕ್ಕಿ ೧ ಕೆ. ಜಿ., ದೊನ್ನೆ ೮, ಹೆಸರುಕಾಳು ೨೦೦ ಗ್ರಾಂ, ಎಳ್ಳು ೨೦೦ ಗ್ರಾಂ, ಬದನೆಕಾಯಿ ೧, ವಿಳ್ಳೆದಲೆ ೫, ಬಟ್ಲಡಿಕೆ ೫, ಬಾಳೆಹಣ್ಣು ೫, ಅಕ್ಕಿಹಿಟ್ಟು ೧/೨ ಪಾವು, ಹಳೇ ಬಟ್ಟೆ ೧ ಗೇಣುದ್ದ, ಎಳೆನೀರು ೧, ತುಪ್ಪ ೨೦೦ ಗ್ರಾಂ, ತೆಂಗಿನಕಾಯಿ ೧, ತೆಂಗು ಅಥವಾ ಅಡಿಕೆಯ ಹೊಂಬಾಳೆ ೧ ಅಡಿ, ಬಾಳೇಕಾಯಿ ೧.

೨, ೩, ೪, ೫, ೬, ೭, ೮, ೯ನೇ ದಿನಗಳಿಗೆ

ಊಟದೆಲೆ ೬, ದೊನ್ನೆ ೮, ಭತ್ತದರಳು ೧/೪ ಲೀಟರ್, ೧/೨ ಕೆ. ಜಿ. ಬೇಯುವ ಮಡಿಕೆ ೧, ಮುಚ್ಚಳ ೧, ಮತ್ತೊಂದು ಮಡಿಕೆ ಮುಚ್ಚಳ. ವಿಭೂತಿ, ಹಾಲು, ಮೊಸರು, ತುಪ್ಪ, ಗಂಜಲ, ಸಗಣಿ, ಸ್ವಲ್ಪ ಜೇನುತುಪ್ಪ, ಬೆಲ್ಲ ೧/೨ ಅಚ್ಚು, ಪಂಚಪಾತ್ರೆ ೧, ಸುಣ್ಣ, ಮಾವಿನಸೊಪ್ಪು, ಚಿಲ್ಲರೆ, ಆಚಾರ್ಯರ ಸಂಭಾವನೆ. ಬಾಳೆಹಣ್ಣು ೫.

ಪ್ರತಿದಿನ ನಿತ್ಯವಿಧಿಗೆ

ಅಕ್ಕಿ ೧/೨ ಕೆ. ಜಿ., ತುಪ್ಪ ೧೦೦ ಗ್ರಾಂ, ಎಳ್ಳು ೧೦೦ ಗ್ರಾಂ, ಹಚ್ಚಿದೆಲೆ ೨, ಹೆಸರು ೧೫೦ ಗ್ರಾಂ, ದೊನ್ನೆ ೨, ೧/೨ ಕೆ. ಜಿ. ಬೇಯುವ ತಪ್ಪಲೆ ೧.

ಹುಣಿಸೇಹಣ್ಣು ನಿತ್ಯವೂ ಇರಬೇಕು (ಪಾತ್ರೆಗಳನ್ನು ತೊಳೆಯಲು)

ನವಶ್ರಾದ್ಧಕ್ಕೆ ೧, ೩, ೫, ೭, ೯, ದಿನಗಳು ದಿನವೊಂದಕ್ಕೆ ೧/೨ ಕೆ. ಜಿ ಅಕ್ಕಿ, ಎಳ್ಳು ೧೦೦ ಗ್ರಾಂ, ಹೆಸರು ೧೫೦ ಗ್ರಾಂ, ಲೋಟಗಳು ೫, ವಸ್ತ್ರ ೫, ತುಪ್ಪ ೧೦೦ ಗ್ರಾಮಿನಂತೆ.

ದಶಮೇಽಹನಿ (೧೦ನೇ ದಿನ)

೨ನೇ ದಿನದ ಸಾಮಾನುಗಳು ಮತ್ತು ದಾನಕ್ಕೆ ಛತ್ರಿ, ಬೀಸಣಿಗೆ, ಪಾದರಕ್ಷೆ, ಹಿರಣ್ಯ, ಚಾಪೆ.

ವಾರುಣ ಕಲಶಕ್ಕೆ: ಪಂಚಪಾತ್ರೆ ೧, ವಸ್ತ್ರ, ತೆಂಗಿನಕಾಯಿ ೧, ನೆಲ್ಲಿಚೆಟ್ಟು ೨.

ಏಕಾಹಕ್ಕೆ (ಹನ್ನೊಂದನೆಯ ದಿನಕ್ಕೆ)

೧ ಕೆ. ಜಿ. ಬೇಯುವ ಮಡಿಕೆ ೧, ಮುಚ್ಚಳ ೧, ಅಕ್ಕಿ ೩ ಕೆ.ಜಿ., ಎಳ್ಳು ೧/೨ ಪಾವು, ಅಕ್ಕಿಹಿಟ್ಟು ೧/೨ ಪಾವು, ದೊನ್ನೆಗಳು ೮, ಎಲೆಗಳು ೮ (ಹಚ್ಚಿದ್ದು), ವಿಳ್ಯೇದೆಲೆ ೧೨, ಅಡಿಕೆ ೧೨, ಪಂಚೆ ೧ ಜೊತೆ, ಬೆಲ್ಲದ ಚೂರು ೬, ಹೋರಿಗರು (ಕರು) ೧, ಇದಕ್ಕೆ ಹೊದಿಸಲು ವಸ್ತ್ರ ೧, ರುದ್ರಕಲಶಕ್ಕೆ ಪಾತ್ರೆ ೧, ಚರುವಿಗೆ ಹಿತ್ತಾಳೆ ಬಟ್ಟಲು ೧ (ಸಣ್ಣದು), ತುಪ್ಪ ೧/೪ ಕೆ. ಜಿ., ವತ್ಸೀವತ್ಸಪೂಜೆಗೆ ವಸ್ತ್ರ ೧, ಅರಿಶಿನ, ಕುಂಕುಮ ಹೂವು, ತೆಂಗಿನಕಾಯಿ ೫, ಮಾವಿನಸೊಪ್ಪು ೧ ಕೊನೆ, ಬಾಳೆಕಾಯಿ ೧, ಬದನೇಕಾಯಿ ೧.

ತಿಲಪಾತ್ರದಾನಕ್ಕೆ ಪಾತ್ರೆ ೧, ಉದಕುಂಭದಾನಕ್ಕೆ ಚಂಬು ೧, ವಾಸೋದಾನಕ್ಕೆ ೧ ಜೊತೆ ಪಂಚೆ.

ಗೋದಾನಾದಿ ದಶದಾನಗಳಿಗೆಲ್ಲಾ ಚಿಲ್ಲರೆ.

ಷೋಡಶ ಶ್ರಾದ್ಧಕ್ಕೆ

೨೦ ಜನ ಬ್ರಾಹ್ಮಣರಿಗೆ ಷೋಡಶೀ ಎಡೆಗಳ ಸಿದ್ಧತೆ.

ಅಕ್ಕಿ ೨೦ ಕೆ.ಜಿ, ಹೆಸರುಕಾಳು ೫ ಕೆ.ಜಿ., ಬೆಲ್ಲದ ಅಚ್ಚು ೨೦, ತರಕಾರಿಗಳು, ವಿಳ್ಳೇದೆಲೆ ಅಡಿಕೆ, ಎಲೆಗಳು ೨೪, ದೊನ್ನೆಗಳು ೨೦, ಪಂಚಪಾತ್ರೆಗಳು ೨೦, ಉದ್ಧರಣೆಗಳು ೨೦, ಎಳ್ಳು ೨೦೦ ಗ್ರಾಂ, ತುಪ್ಪ ೨೦೦ ಗ್ರಾಂ, ದಕ್ಷಿಣೆ, ಸಂಭಾವನೆ, ಪಂಚೆಗಳು ೨೦.

ಸೋದಕುಂಭ ಶ್ರಾದ್ಧಕ್ಕೆ

ಅಕ್ಕಿ ೨೦ ಕೆ. ಜಿ.ಗೆ ಕಡಿಮೆಯಿರಬಾರದು. ಇದಕ್ಕೆ ತಕ್ಕಂತೆ ಬೇಳೆಗಳು, ಉಪ್ಪು ಹುಣಿಸೇಹಣ್ಣು, ತರಕಾರಿಗಳು, ಸಾಸಿವೆ ಮೊದಲಾದ ಸಮಸ್ತ ಸಾಮಾನುಗಳ ಸಿದ್ಧತೆ, ಪಂಚೆ ೧ ಜೊತೆ, ಬಿಂದಿಗೆ ೧, ಹಾಲು, ಮೊಸರು, ತುಪ್ಪ, ಎಣ್ಣೆಗಳು, ಪಾತ್ರೆ ಸಮೇತ.

ಈ ಮೇಲ್ಕಂಡ ಸಾಮಾನುಗಳು ಮೃತನಿಗೆ ವರ್ಷ ಅಥವಾ ೩೬೫ ದಿನಗಳಿಗಾಗಬೇಕು. ಇದೇ ಕಡಿಮೆ. ಅವರವರ ಶಕ್ತ್ಯಾನುಸಾರ ನಡೆಸಬೇಕು.

ವೈಕುಂಠಸಮಾರಾಧನೆಯ ದಿನದ ದಾನಗಳು

ಉದಕುಂಭ, ವಸ್ತ್ರ ೧ ಜೊತೆ, ಛತ್ರಿ, ಪಾದರಕ್ಷೆ, ಚಾಪೆ, ಬೆತ್ತ, ತಾಂಬೂಲದ ತಟ್ಟೆ,. ದಧ್ಯಾನ್ನದ ತಟ್ಟೆ, ಪರಮಾನ್ನ, ಕ್ಷಿರ, ತಾಂಬೂಲದ ತಟ್ಟೆ, ಹಣ್ಣುಗಳ ತಟ್ಟೆ ಆಜ್ಯದಾನ ಪಾತ್ರೆ, ಗೃಹದಾನ, ಸಾಣೇಕಲ್ಲು, ಗಂಧದ ಚಕ್ಕೆ, ಸಾಲಿಗ್ರಾಮಾದಿ ದಾನಗಳು, ಶಂಖ, ಘಂಟೆ, ಪುಸ್ತಕ, ಸುವರ್ಣ, ರಜತ (ಬೆಳ್ಳಿ), ಗುಡದ ತಟ್ಟೆ (ಬೆಲ್ಲ), ಉಪ್ಪಿನ ಪಾತ್ರೆ ೧, ಗೋದಾನ, ಭೂದಾನ, ತಿಲಪಾತ್ರ, ಧಾನ್ಯದಾನ.

ಅಂತ್ಯೇಷ್ಟಿಕರ್ಮದಲ್ಲಿ ಮೊದಲನೆಯ ದಿನದಿಂದ ಹನ್ನೆರಡನೆಯ ದಿನದವರೆಗೆ ನಡೆಯಬೇಕಾದ ಕಾರ್ಯಗಳು

ಮೊದಲನೇ ದಿನದಿಂದ ಹನ್ನೊಂದನೇ ದಿನದ ಕರ್ಮ ಪೂರ್ತಿ ಪರ್ಯಂತ **ಏಕದರ್ಭ** ಪವಿತ್ರಧಾರಣೆ. ಸೋದಕುಂಭ ಶ್ರಾದ್ಧಕ್ಕೂ ಸಹ.

ಹನ್ನೆರಡನೆಯ ದಿನದ ಸಪಿಂಡೀಕರಣ ಶ್ರಾದ್ಧದಲ್ಲಿ ಮಾತ್ರ ಮೂರು ದರ್ಭದ ಪವಿತ್ರ ಮತ್ತು ಏಕದರ್ಭದ ಪವಿತ್ರಧಾರಣೆ.

ಯತಿ ವ್ರತ್ಯೋಃ ಕಪಾಲಾಗ್ನಿಃ ತುಷಾಗ್ನಿರ್ಬಾಲ ಕನ್ಯಯೋಃ।
ವಿಧುರಂ ವಿಧಾವಾಂ ಚೈವ ದಹೇದುತ್ತಪನಾಗ್ನಿನಾ ॥

ದಂಪತಿಗಳಲ್ಲಿ ಯಾರೊಬ್ಬರು ಮೃತರಾದರೂ ಮೊದಲು ಮೃತರಾದವರಿಗೆ ಔಪಾಸನಾಗ್ನಿಯಿಂದ ದಹನ.

ವಿಧುರ ಮತ್ತು ವಿಧವೆಯರಿಗೆ ಉತ್ತಪನಾಗ್ನಿಯಿಂದಲೇ ದಹನ. ಬಾಲಕ ಬಾಲಕಿಯರಿಗೆ ತುಷಾಗ್ನಿಯಿಂದ ದಹನ (ಹೊಟ್ಟು).

ಪ್ರಥಮದಿನ ಕೃತ್ಯಂ

ಪದಾರ್ಥಗಳೆಲ್ಲವೂ ಸಿದ್ಧವಾದ ನಂತರ ಕರ್ತನು ಸ್ನಾನ ಮಾಡಿ ನೂತನ ವಸ್ತ್ರಗಳನ್ನು ನೆನಸಿ ಆ ಒದ್ದೆಯಾದ ವಸ್ತ್ರಗಳನ್ನೇ ಧರಿಸಿ ಅರ್ಘ್ಯ ಪ್ರದಾನಾಂತ ಸಂಧ್ಯಾವಂದನೆಯನ್ನು (ತತ್ಕಾಲದ) ಮಾಡಬೇಕು. ಮರಣಾತ್ಪೂರ್ವ ಸಂಧ್ಯಾವಂದನಾದಿಗಳು ಆಗಿದ್ದ ಪಕ್ಷದಲ್ಲಿ ಕೇವಲ ಅಚಮನವನ್ನು ಮಾತ್ರ ಮಾಡಿದರೆ ಸಾಕು. ಪುರೋಹಿತನಿಂದ ಪವಿತ್ರವನ್ನು ತೆಗೆದುಕೊಂಡು ತನ್ನ ಬಲಗೈಯಿನ ಅನಾಮಿಕಾ ಬೆರಳಿಗೆ ಇಟ್ಟುಕೊಂಡು ಪ್ರಾಣಾಯಾಮ ಸಂಕಲ್ಪಾದಿಗಳನ್ನು ಮಾಡುವುದು.

ಯಜಮಾನಸ್ಯ ಮಾತುಃ ......ದಕ್ಷಿಣಾ ದಾನಾನಿ ಕರಿಷ್ಯೇ। ಎಂದು ಹೇಳಿ ಹಿರಣ್ಯ ಗರ್ಭ....ಪ್ರಯಚ್ಛಮೇ ಪ್ರಿಯತಾಮ್ ॥ ಎಂದು ದಕ್ಷಿಣಾ ದಾನವನ್ನು ಮಾಡುವುದು.

ಪುನಃ ಪ್ರಾಣಾನಾಯಮ್ಯ ಮಂತ್ರ ಪಠನಂ ಕರಿಷ್ಯೇ। ಎಂದು ಸಂಕಲ್ಪ.

ಮಾಪ್ರಗಾಮ ಯತ್ತೇಯಮಂ ಪ್ರತಾರ್ಯಾಯುಃ ಆಜನಂ ತ್ವೇಷ ಸಂದೃಶಂ, ಇತ್ಯಾದಿ, ಸೂಕ್ತಾನಿ ಪಠಿತ್ವಾ। ನಾರಾಯಣ ಸ್ಮರಣಂ ಚ ಕೃತ್ವಾ। ನಂತರ,

ದಕ್ಷಿಣಾಗ್ರವಾಗಿ ದರ್ಭೆಯನ್ನು ಹರಡಿ ದಕ್ಷಿಣ ಶಿರಸ್ಸಾಗಿ ಶವವನ್ನು ಮಲಗಿಸಿ ಸ್ನಾನ ಮಾಡಿಸಿ ಹಣೆಗೆ ಕುಂಕುಮ ಅರಿಶಿನಾದಿ (ಪುರುಷನಿಗೆ ವಿಭೂತಿ) ಗಳನ್ನು ಹಚ್ಚಬೇಕು.

ಪ್ರಾಣಾನಾಯಮ್ಯ। ಸಂಕಲ್ಪ್ಯ। ಮಾತುಃ....ಪ್ರಯಚ್ಛತ ಇತಿ ದಕ್ಷಿಣಾಂ ದತ್ವಾ ದಂಡವತ್ಪ್ರಣಮೇತ್।

ಪ್ರಾಣಾನಾಯಮ್ಯ। ಸಂಕಲ್ಪ್ಯ। ಪಂಚಗವ್ಯಮೇಳನ ಮತ್ತು ಶವಕ್ಕೆ ಪ್ರಾಶನೆ. (ಕೇಚಿತ್ಪಕ್ಷ)

ಪುನಃ ಪ್ರಾಣಾನಾಯಮ್ಯ। ಸಂಕಲ್ಪ್ಯ। ಉತ್ಕ್ರಾಂತಿ ಗೋದಾನಾದಿಗಳು ತಿಲಪಾತ್ರದಾನ.

ಪುನಃ ಪ್ರಾಣಾನಾಯಮ್ಯ। ಸಂಕಲ್ಪ್ಯ। ದಶದಾನ ಪ್ರತ್ಯಾಮ್ನಾಯ ಹಿರಣ್ಯದಾನ.

ಪುನಃ ಪ್ರಾಣಾನಾಯಮ್ಯ....ಶವಸ್ಯ ದಕ್ಷಿಣ ಕರ್ಣೇ ನಾರಾಯಣ ಸೂಕ್ತ ಪಠನ. ನಾರಾಯಣ ಮಂತ್ರಂ. ಶ್ರೀರಾಮ ಮಂತ್ರಗಳ ಪಠನ. ನಾರಾಯಣ ಸೂಕ್ತ (ಕರ್ಣಸೂಕ್ತ) ನಾನಾನಂ ವೈ ಶರ್ಯಣಾವತಿ ಇಂದೋಃ ಪವಮಾನಸ್ಯ। ಉಪನಿಷದಾದಿ ಸ್ತೋತ್ರಾದೀನಿ ಚ ಪಠೇತ್।

ಕರ್ತನು ಸ್ನಾನಾಚಮನಗಳನ್ನು ಮಾಡಿ ಬ್ರಹ್ಮದಂಡವನ್ನಿಟ್ಟು ವಪನಾಧಿಕಾರಕ್ಕೆ ಅನುಜ್ಞೆ, ವಪನ.

ಸ್ನಾತ್ವಾ, ಆಚಮ್ಯ, ಶವಕ್ಕೆ ವಸ್ತ್ರಧಾರಣೆ ಮತ್ತು ಆ ಹೊದಿಸಿದ ವಸ್ತ್ರದಲ್ಲೇ ಸ್ವಲ್ಪ ಭಾಗ ವಾಸಸ್ಸಿಗಾಗಿ ಛೇದನೆ. ಈ ವಾಸಸ್ಸು ೧೦ನೇ ದಿನ ಪರ್ಯಂತ ಉಪಯೋಗಿಸುತ್ತಿದ್ದು ೧೦ ನೇ ದಿನ ಆ ವಾಸಸ್ಸನ್ನು ವಿಸರ್ಜಿಸುವುದು. ಆ ವಾಸಸ್ಸಿನ ಛೇದನೆಗೆ ಪುಷಾತ್ವೇತಃ ಮಂತ್ರ. ವಾಸಸ್ಸಿನ ಕೊನೆಗೆ ಹಿರಣ್ಯ, ತಿಲ, ದರ್ಭೆಗಳನ್ನು ಕಟ್ಟಬೇಕು.

ವಾಸೋಧಾರಣೆ, ಬ್ರಹ್ಮದಂಡ.

ಪ್ರಾಚೀನಾವೀತೀ। ಮಾತುಃ....ಹಿರಣ್ಯದಾನಂ ಕರಿಷ್ಯೇ।

ಕರ್ತಾ, ಏತೋನ್ವಿಂದ್ರಮಿತಿ ಪ್ರೋಕ್ಷಣೆ.

ಪ್ರೇತೌಪಾಸನ. ಪ್ರಾಯಶ್ಚಿತ್ತಹೋಮ.

ವಾಹಕಾವರಣ. ವಾಹಕಾದಿಗಳಿಗೆ ವಸ್ತ್ರಾಭರಣಾದಿಗಳು. ಶ್ಮಶಾನಕ್ಕೆ ಪ್ರಯಾಣ.

ಯುವಕರಲ್ಲದವರೂ ಶಿಖಾಕೇಶಗಳನ್ನು ಬಿಚ್ಚಿದವರೂ ಆದ ಬ್ರಾಹ್ಮಣರು ಪೂರ್ವಕ್ಕೆ ಶಿರಸ್ಸಿರುವಂತೆಯೂ ಊರ್ಧ್ವಮುಖವಾಗಿರುವಂತೆಯೂ ಶವವನ್ನು ಚಟ್ಟಕ್ಕೆ ಕಟ್ಟಿ ಶ್ಮಶಾನಕ್ಕೆ ಎತ್ತಿಕೊಂಡು ಹೋಗುವುದು. "ಅಗ್ನಿಯನ್ನು ತೆಗೆದುಕೊಂಡು ಹೋಗುತ್ತಿರುವ ಕರ್ತನ ಮತ್ತು ಶವದ ಮಧ್ಯೆ ಯಾರೂ ಓಡಾಡಬಾರದು". ಶ್ಮಶಾನಕ್ಕೆ ಹೋಗಿ ಶವವನ್ನು ದಕ್ಷಿಣ ಶಿರಸ್ಸಾಗಿಟ್ಟು ಪಶ್ಚಿಮದಲ್ಲಿ ಅಗ್ನಿಯನ್ನಿಡಬೇಕು.

ಪ್ರಾಣಹೋಗುವುದಕ್ಕೆ ಮುಂಚೆ ಕರ್ತನಾದವನು ಸಂಧ್ಯಾದಿಗಳನ್ನು ಮಾಡದಿದ್ದರೆ ಈಗ ಇಲ್ಲಿ ಸ್ನಾನ ಮಾಡಿ ಅರ್ಘ್ಯಾಂತ ಸಂಧ್ಯಾವಂದನೆಯನ್ನು ಮಾಡಬೇಕು.

ಕರ್ಮಾಂಗ ಆಚಮನ ಮಾಡಿ ಏಕದರ್ಭ ಪವಿತ್ರವನ್ನು ಧರಿಸಿ ಕರ್ಮಾರಂಭ ಮಾಡಬೇಕು. (ಪೈತೃಮೇಧಿಕ ಕರ್ಮ)

ಪ್ರಥಮತಃ ಕಂಟಕಾದ್ಯುದ್ವಾಸನೆ (ಮುಳ್ಳುಗಿಡಗಳನ್ನು ತೆಗೆದುಹಾಕುವುದು) (ಉಪಸರ್ಪ ಮಾತರಂ ಎಂಬ ಮಂತ್ರದಿಂದ).

ಭೂ ಪ್ರಾರ್ಥನೆ. ಪ್ರೋಕ್ಷಣೆ. ಗರ್ತತ್ರಯಂ (ಹಳ್ಳ) ಕೃತ್ವಾ। ತಿಲೋದಕವನ್ನು ಬಿಡುವುದು. (ಅಪೇತವೀತ ಎಂಬ ಮಂತ್ರದಿಂದಲೂ ಮೃತ್ಯೋಃ ಪದಂ ಎಂಬ ಮಂತ್ರದಿಂದಲೂ) ಗಾಯತ್ರೀ ಮಂತ್ರದಿಂದ ಕಾಷ್ಠಗಳನ್ನು ಪ್ರೋಕ್ಷಿಸಿ ದಹನ ಸ್ಥಳದಲ್ಲಿ ಜೋಡಿಸುವುದು.

ಆರೋಹತಾಯುರಿತಿ ಮಂತ್ರೇಣ ಚಿತೆಯ ಮೇಲೆ ಶವನಿಕ್ಷೇಪ. ದಕ್ಷಿಣ ಶಿರಸ್ಸು ಧನುರ್ಹಸ್ತಾದಿತಿ ಮಂತ್ರೇಣ ಪ್ರೇತ ಖಟ್ವಚ್ಛೇದನ ವಿಸರ್ಜನ.

ಪೃಷದಾಜ್ಯ ದ್ರವ್ಯದಿಂದ ಪ್ರಾಯಶ್ಚಿತ್ತಾಹುತಿಗಳು.

ಅಂತ್ಯೇಷ್ಟಿಹೋಮ—ಅನ್ವಾಧಾನ—ಪಾತ್ರಸಾಧನೆ.

"ಇಮಮಗ್ನೇಚಮಸಂ" ಎಂಬ ಮಂತ್ರದಿಂದ ಚಮಸಪಾತ್ರಾಭಿಮಂತ್ರಣ. ಹೋಮ. ಪ್ರೇತದ ಬಾಯಲ್ಲಿ ಹಿರಣ್ಯ ಶಕಲ ಮತ್ತು ತಂಡುಲ ನಿಕ್ಷೇಪ. ಶವಕ್ಕೆ ಹೊದಿಸಿದ್ದ ಬಟ್ಟೆಯನ್ನು ತೆಗೆದುಹಾಕಿ ಮತ್ತೆ ಕಾಷ್ಠಗಳನ್ನು ಜೋಡಿಸುವುದು.

ಪಂಚಮೀ ಮುರಸಿ ಪ್ರೇತಸ್ಯ....ಮತ್ತೆ ಹೋಮ.

ಔಪಾಸನಾಗ್ನಿಯನ್ನು ತೆಗೆದುಕೊಂಡು "ಯೋ ಅಗ್ನಿಃ" ಕ್ರವ್ಯಾದಮಗ್ನಿಂ ಎಂಬ ಮಂತ್ರದಿಂದ ಅಗ್ನಿಪ್ರದಾನ (ಚಿತೆ ಪ್ರಜ್ವಲನ)

ಚಮಸಪಾತ್ರವನ್ನು ಬಲಹೆಗಲಿನ ಮೇಲಿಟ್ಟುಕೊಂಡು ಕರ್ತನು ಮೂರಾವರ್ತಿ ಚಿತೆಗೆ ಅಪ್ರದಕ್ಷಿಣೆ ಮಾಡುವುದು. ಪ್ರತಿ ಪ್ರದಕ್ಷಿಣೆ ಮಾಡುವಾಗಲೂ ಕರ್ತನ ಹಿಂದೆ ಯಾರಾದರೂ ಬಂದು ಅವನ ಚಮಸ ಪಾತ್ರೆಗೆ ಒಂದು ಬಿಳಿಕಲ್ಲಿನಿಂದ ಕುಟ್ಟಿ ರಂಧ್ರ ಮಾಡುವುದು. "ವಾತಾ ಸ್ತೇ" ಎಂಬ ಮಂತ್ರದಿಂದ.

ನಂತರ ಪ್ರೇತ ಶಿರೋಭಾಗದಲ್ಲಿ ಆ ಜಲಪಾತ್ರೆಯನ್ನು ಎತ್ತಿಹಾಕುವುದು. ಇಮೇ ಜೀವಾ ಎಂಬ ಮಂತ್ರದಿಂದ ರಂಧ್ರ ಮಾಡುವ ಶಿಲೆಯು ದೊಡ್ಡ ನೆಲ್ಲಿಕಾಯಿಗಾತ್ರದ್ದಾಗಿರಬೇಕು. ಒಡೆದ ಕಪಾಲವೊಂದನ್ನು ತೆಗೆದುಕೊಂಡು ಅದರಲ್ಲಿರುವ ನೀರಿಗೆ ತಿಲವನ್ನು ಹಾಕಿ ಕಪಾಲೋದಕವೆಂದು ಹೇಳಿ ಬಿಡುವುದು. ಮತ್ತು ಪರ್ವತ ದರ್ಶನ. (ಈ ಕಪಾಲೋದಕವನ್ನು ಬಿಡುವುದೂ ಸಹ ಕೇಚಿತ್ಪಕ್ಷ)

ಸೂರ್ಯಂಚಕ್ಷುಃ ಎಂಬ ಮಂತ್ರದಿಂದ ಸೂರ್ಯದರ್ಶನ.

ನಂತರ ಚಿತೆಯನ್ನು ನೋಡದೇ ಹಿಂದೆ ದೂರಕ್ಕೆ ಬಂದು ಸರ್ವರೂ ಅಳುವುದು. ಎಂದರೆ ತಮ್ಮ ದುಃಖವನ್ನು ತೋರಿಸಿಕೊಳ್ಳುವುದು. ತಲೆಯು ಸೀಳುವವರೆಗೂ ಅಲ್ಲಿಯೇ ಇದ್ದು ಆ ಶಬ್ದವು ಕೇಳಿದ ನಂತರ ಸರ್ವರೂ ಸ್ನಾನ ಮಾಡಿ ತಮ್ಮ ತಮ್ಮ ಮನೆಗಳಿಗೆ ಬರುವುದು.

ರಾತ್ರೆ ಮರಣವಾದರೆ ದಹನ ಪರ್ಯಂತವಾದ ಕರ್ಮಗಳನ್ನು ಮಾತ್ರ ಮಾಡಬೇಕು. ಮಾರನೇ ದಿನ ಪ್ರಾತಃ ವಪನ ಮತ್ತು ನಗ್ನಪ್ರಚ್ಛಾದನ ಶ್ರಾದ್ಧಗಳನ್ನು ಮುಂದುವರೆಸುವುದು.

ಇಲ್ಲಿಗೆ ಪ್ರಥಮ ದಿನ ದಹನ ಕರ್ಮವು ಸಮಾಪ್ತಿ.

ಸ್ನಾತ್ವಾಽಚಮ್ಯ ಪವಿತ್ರಪಾಣಿಃ ನಗ್ನಪ್ರಚ್ಛಾದನ ಶ್ರಾದ್ಧದಲ್ಲಿ ಅಂಧತ್ವ ಬುಧಿರತ್ವ, ನಗ್ನತ್ವ, ಮೂಕತ್ವ, ಪಂಗುತ್ವ ನಿವಾರಣೆಗಾಗಿಯೂ ಪ್ರೇತತ್ವ ವಿಮುಕ್ತಿ ಸಾಧನೆಗಾಗಿಯೂ ತಿಲೋದಕ ಆಮಪಿಂಡ ಪ್ರದಾನ ಪೂರ್ವಕ ನಡೆಯಬೇಕಾದ ಕರ್ಮ. ಕರ್ಮಾಂತೇ ಸ್ನಾನ.

ಮೇಲ್ಕಂಡ ವಪನವು ಸೂರ್ಯಾಸ್ತದೊಳಗೇ ನಡೆಯಬೇಕು.

ನಗ್ನ ಪ್ರಚ್ಛಾದನ ಶ್ರಾದ್ಧವೂ ಅಷ್ಟೇ. ಮೃತದಿನ ಅಸ್ತಮಯಾನಂತರ ಕರ್ಮಾದಿಗಳು ನಡೆಯುವುದಾದರೆ ಮೇಲ್ಕಂಡ ಎರಡೂ ನಿಷಿದ್ಧವು.

ನಿತ್ಯವಿಧಿ ದಹನದಿಂದ ಉಂಟಾದ ಬಿಸಿ, ತಾಪ, ಹಸಿವು, ಬಾಯಾರಿಕೆಗಳ ನಿವಾರಣೆಗಾಗಿಯೂ ಪ್ರೇತ ಶರೀರೋತ್ಪತ್ತಿಗಾಗಿಯೂ ಕಪಾಲವನ್ನು ಒಡೆದ ಪ್ರೇತಶಿಲೆಗೆ ಸಂಸ್ಕಾರಾದಿಗಳನ್ನು ಮಾಡುವುದು. ಪ್ರೇತ ಶಿಲಾಸ್ನಾನ, ಮೃದಾಸ್ನಾನ, ವಾಸೋದಕ, ತಿಲೋದಕ, ಪಿಂಡಪ್ರದಾನ, ಇತ್ಯಾದಿ ನವಮದಿನಪರ್ಯಂತ.

ನವಶ್ರಾದ್ಧ ಏಕೋದ್ದಿಷ್ಟ ವಿಧಾನ, ಪ್ರೇತೋದ್ದೇಶ ಆಮಾದಿ ದ್ರವ್ಯ ಪ್ರೇತ ವಿಮುಕ್ತಿ ಸಾಧನೆ.

"ನವ ಶ್ರಾದ್ಧಾನಿ ಪಂಚಾಹುರಾಶ್ವಲಾಯನ ಶಾಖಿನಾಂ" ಎಂಬಂತೆ ಒಂದು, ಮೂರು, ಐದು, ಏಳು, ಒಂಬತ್ತು ಈ ಐದು ದಿನಗಳಲ್ಲಿ ನವ ಶ್ರಾದ್ಧಗಳನ್ನು ಮಾಡಬೇಕು.

ಎರಡನೆಯ ದಿನ ಅಸ್ಥಿ ಸಂಚಯನ/ಮೂರನೆಯ ದಿನ (ಕೇಚಿತ್ಪಕ್ಷೇ) ....ದಹನ ದಿನ ಸೂರ್ಯಾಸ್ತದೊಳಗಾದರೆ ಕ್ಷೌರ, ನಗ್ನಪ್ರಚ್ಛಾದನ, ಶ್ರಾದ್ಧ. (ಇಲ್ಲವಾದರೆ ೨ನೇ ದಿನ ನಡೆಯಬೇಕು). ಮೊದಲನೆಯ ದಿನವೇ ನಿತ್ಯವಿಧಿಯನ್ನು ನಡೆಸಬಹುದು.

ನಿತ್ಯವಿಧಿ (೨ನೇ ದಿನವೇ) ಕರ್ತಾ ಆಚಮ್ಯ, ಪವಿತ್ರಂ ಧೃತ್ವಾ, ಬ್ರಹ್ಮದಂಡ ವಾಸೋಧಾರಣೆ, ಕುಂಭವನ್ನು ಛಿದ್ರಮಾಡಿದ್ದ ಶಿಲೆಗೆ ಆವಾಹನೆ—ಅಧಿಕಾರ ಸ್ವೀಕಾರ,

ಪುನಃ ಸಂಕಲ್ಪ, ಅಂಜನಾಭ್ಯಂಜನ, ಮೃದಾಸ್ನಾನ, ಸೂರ್ಯದರ್ಶನ, ಉದುತ್ಯ ಮಿತಿ ಮಂತ್ರೇಣ, ಉದ್ಧೃತಾಸೀತಿ ಮಂತ್ರೇಣ, ಸಹಸ್ರ ಶೀರ್ಷೇತಿ ಮಂತ್ರೇಣ ಚ ಮೃದಾ ಶಿರಸಿ, ಅಕ್ಷೀಭ್ಯಾಮಿತಿ ಸೂಕ್ತೇನ ಸರ್ವಾಂಗ ಲೇಪನ. ಮೃದಾಸ್ನಾನ, ಸಂಕಲ್ಪ್ಯ. ವಾಸೋದಕ, ಪುನಃ ಸಂಕಲ್ಪ್ಯ, ತಿಲೋದಕಂತು ದಿನೇ ದಿನೇ ದಶವಾರಂ ದದ್ಯಾತ್।

ಪ್ರಥಮ ದಿನದಿಂದ ದಶದಿನ ಪರ್ಯಂತಕ್ಕೆ ೧೦೦ ಒಟ್ಟು ಶತಾಂಜಲಿ.

ನಿತ್ಯಪಿಂಡಪ್ರದಾನ ಸಂಕಲ್ಪ್ಯ, ದರ್ಭಾಸನ, ತಿಲೋದಕ, ಪಿಂಡಪ್ರದಾನ, ಅಂಜನಾಭ್ಯಂಜನ, ದಕ್ಷಿಣೆ ಪ್ರೇತಾಪ್ಯಾಯನ.

ನವಶ್ರಾದ್ಧ....ಆಚಮ್ಯ, ಬ್ರಹ್ಮದಂಡ, ಪುನಃ ಸಂಕಲ್ಪ್ಯ.

ಕ್ಷಣ, ಪಾದ್ಯ, ಸಂಕಲ್ಪ್ಯ. ಅಪ್ಸದಿಕ್ಷು ತಿಲವಿಕಿರಣ. ಆಮಪ್ರೋಕ್ಷಣ, ಬ್ರಾಹ್ಮಣಸ್ಯ....ಹಸ್ತೋದಕ, ಕ್ಷಣ, ಅರ್ಘ್ಯಪಾತ್ರ ಆಸಾಧನ, ಗಂಧ, ತಿಲ, ಅರ್ಘ್ಯ, ಗಂಧ, ಆಭರಣಾನಿ, ವಸ್ತ್ರಂ, ದರ್ಭ, ಆಮಪ್ರೋಕ್ಷಣ, ಪ್ರೇತತ್ವ ವಿಮುಕ್ತಿ ಸಾಧನಮಸ್ತ್ವಿತಿ ಸಂಕಲ್ಪ್ಯ. ಪ್ರಾಚೀನಾವೀತೀ. ತಿಲೋದಕ ಪಿಂಡ ಪ್ರದಾನ.

ದ್ವಿತೀಯ/ತೃತೀಯ ದಿನೇ ಕರ್ತಾ ಸ್ನಾತ್ವಾऽಚಮ್ಯ, ಪವಿತ್ರಪಾಣಿಃ, ಬ್ರಹ್ಮದಂಡ, ವಾಸೋಧಾರಣ. ಸಂಕಲ್ಪ್ಯ. ಅಸ್ಥಿಸಂಚಯನಕ್ಕೆ ಅಧಿಕಾರ. ಸಂಕಲ್ಪ್ಯ. ಅಸ್ಥಿಸಂಚಯನಕ್ಕೆ ಸಂಕಲ್ಪ್ಯ. ತದಂಗ ಕೃಛ್ರಾಚರಣೆ. ಊರ್ಣಾಸೂತ್ರೇಣ ದಕ್ಷಿಣಾಂಗುಷ್ಠಂ ಬಧ್ವಾ ಉಪಸರ್ಪಮಾತರಮಿತಿ. (ಊರ್ಣಾಸೂಕ್ತವೂ ಕೇಚಿತ್ಪಕ್ಷ)

ಶೀತಿಕೇಶೀತಿಕಾವತೀತಿ ಮಂತ್ರೇಣ ಭಸ್ಮಾಸ್ಥಿ ಪ್ರೋಕ್ಷಣೆ.

"ಇದಂತ ಏಕಂ" ಎಂದು ತಲೆಯ ಅಸ್ಥಿಯನ್ನೂ, "ಪರ ಊತ ಏಕಂ" ಎಂದು ದಂತಾಸ್ಥಿಗಳನ್ನೂ "ತೃತೀಯೇನ ಜ್ಯೋತಿಷಾ ಸಂವಿಶಸ್ವ" ಎಂದು ಹೃದಯಾಸ್ಥಿಗಳನ್ನೂ, "ಸಂವೇಶನೇತನ್ವಗ್ಗ್ಂ ಶ್ಚಾರುರೇಧಿ ಜನಿತ್ರೇ" ಎಂದು ಸರ್ವಾಂಗದ ಅಸ್ಥಿಗಳನ್ನು ಶಬ್ದಮಾಡದೇ ಮೆಲ್ಲನೆ ಕುಂಭದೊಳಗಿಡಬೇಕು. ಮರದಿಂದ ಉಳಿದ ಭಸ್ಮಾದಿಗಳನ್ನೆಲ್ಲಾ ಜಲದಲ್ಲಿ ಹಾಕಬೇಕು. ದಹನ ಸ್ಥಳದಲ್ಲಿ ಪುರುಷಾಕಾರವನ್ನು ಬರೆದು ಶಿರೋಭಾಗದಲ್ಲಿ ಭಸ್ಮವೇದಿಕೆಯನ್ನು ಮಾಡಿ ಮೂರು ಬಿಳಿ ಕಲ್ಲುಗಳನ್ನು ತೆಗೆದಿಡಬೇಕು. ನಂತರ ಬ್ರಹ್ಮದಂಡ, ಪ್ರಾಚೀನಾವೀತೀಯಿಂದ ಭಸ್ಮವೇದಿಕಾರಾಧನೆ. ಶಿಲಾಸ್ಥಾಪನೆ ಅಂಜನಾಭ್ಯಂಜನ, ಸ್ನಾನ, ವಸ್ತ್ರಗಂಧ ಅಕ್ಷತ ರಕ್ತ ಪುಷ್ಪ, ಪಾದುಕಾರ್ಪಣ ಧ್ವಜ, ಛತ್ರ ವ್ಯಜನ, ಕದಲೀಫಲಂ ನಾರಿಕೇಳಫಲಂ ಪನಸಾಮ್ರಾಪೋಪಸಮರ್ಪಣ ಉದಕುಂಭಂ ಛಿದ್ರಂ ಕೃತ್ವಾ ಜಲಪಾನ ಸವ್ಯ ಸಂಕಲ್ಪ್ಯ ಪಿಂಡದಾನ. ಈ ಪಿಂಡದಾನಕ್ಕೆ ದರ್ಭಾಸನ ತಿಲೋದಕ, ಪಿಂಡಪ್ರದಾನ ತಿಲೋದಕ, ಅಂಜನಾಭ್ಯಂಜನ ದಕ್ಷಿಣೆ ಮಹಾಬಲಿ ದಿಗ್ಬಲಿ ಪ್ರೇತತ್ವ ವಿಮುಕ್ತಿ ಸಾಧನ ಮಸ್ತ್ವಿತಿ ಏತತ್ಕರ್ಮ ಸಾದ್ಗುಣ್ಯಾರ್ಥಂ ಗೋದಾನ ದಶದಾನ ಅಸ್ತಿನಿಕ್ಷೇಪಣಾರ್ಥಂ ಜಲಾಶಯಂ ಗಚ್ಛೇತ್ ॥

ಅಸ್ಥಿ ನಿಕ್ಷೇಪಣ

ಆಚಮ್ಯ, ಪವಿತ್ರಪಾಣಿಃ, ಬ್ರಹ್ಮದಂಡಂ, ಪ್ರಾಚೀನಾವೀತೀ, ಅಧಿಕಾರ ಸಂಪತ್ತಿಗೆ ಅನುಜ್ಞೆ (ಅಸ್ಥಿನಿಕ್ಷೇಪಣಕ್ಕೆ) ಸಂಕಲ್ಪ್ಯ, ಅಸ್ಥಿನಿಕ್ಷೇಪಣಕ್ಕೆ ಉಪಸರ್ಪ ಮಾತರಂ ಎಂಬ ಮಂತ್ರದಿಂದ ಭೂ ಪ್ರಾರ್ಥನೆ.

ಉಚ್ಛ್ವಂಸ್ವವರ್ಗದಿಂದ ಪಾಂಸುಪೂರ್ಣ.

ಸದ್ಯಃ ಗಂಗಾಂಭಸಿಯಲ್ಲಿ ಅಸ್ಥಿ ನಿಕ್ಷೇಪ.

ಸ್ನಾನ, ಆಚಮ್ಯ, ಪವಿತ್ರಪಾಣಿಃ, ಬ್ರಹ್ಮದಂಡ, ಅಸ್ಥಿನಿಕ್ಷೇಪಕ್ಕೆ ಸಂಕಲ್ಪ ಪಂಚಗವ್ಯದಿಂದ ಅಸ್ಥಿಗಳಿಗೆ ಸ್ನಾನ.

ಅಕ್ಷೀಭ್ಯಾಂ ವರ್ಗದಿಂದ ಮೃದಾಸ್ನಾನ ಅಗ್ನಿರಿತಿ ಭಸ್ಮವಾಯುರಿತಿ ಭಸ್ಮವ್ಯೋಮೇತಿ ಭಸ್ಮಜಲಮಿತಿ ಭಸ್ಮಸ್ಥಲಮಿತಿ ಭಸ್ಮ ಇವುಗಳಿಂದ ಭಸ್ಮಸ್ನಾನ. ಆಪೋ ಹಿಷ್ಠಾ, ವಿಷ್ಣುಸೂಕ್ತ, ರುದ್ರಸೂಕ್ತ ಸ್ನಾನ. ಹರಿದ್ರ ಕುಂಕುಮಾದಿಗಳಿಂದ ಶ್ರೀಸೂಕ್ತದಿಂದ ಸ್ನಾನ.

ಶುದ್ಧವಾದ ಮಣ್ಣಿನಿಂದ ತಟ್ಟೆಯನ್ನು ಮಾಡಿ ಅದರಲ್ಲಿ ಅಸ್ಥಿಗಳನ್ನಿಡಬೇಕು. ಮತ್ತೊಂದು ತಟ್ಟೆಯನ್ನು ಮಾಡಿ ಅದರಲ್ಲಿ ಮೂರು ಮಣ್ಣಿನ ಉಂಡೆ ಮಾಡಿಡಬೇಕು.

ನಂತರ ಬ್ರಹ್ಮದಂಡ, ಅಸ್ಥಿನಿಕ್ಷೇಪಕ್ಕೆ ಸಂಕಲ್ಪ್ಯ ತದಂಗವಾಗಿ ಗೋದಾನ, ದಶದಾನಗಳನ್ನು ಮಾಡಬೇಕು. ಮೇಲಿನ ಒಂದನ್ನು (ಮಣ್ಣಿನ ಉಂಡೆ) ಮಂಡಿ ಮುಳುಗುವವರೆಗೆ ಜಲದಲ್ಲಿ ನಿಂತು ಪೃಥಿವೀಂ ಗಚ್ಛ ಎಂಬ ಮಂತ್ರವನ್ನೂ ಯಾವದಸ್ಥಿ ಎಂಬ ಮಂತ್ರವನ್ನೂ ಹೇಳಿ ಜಲದಲ್ಲಿ ಬಿಡುವುದು. ಮತ್ತು ಸ್ನಾನ ಮಾಡುವುದು.

ಇದೇ ರೀತಿ ಮತ್ತೆರಡು (ಮಣ್ಣಿನುಂಡೆ) ಪಿಂಡಗಳನ್ನೂ ಬಿಟ್ಟು ಸ್ನಾನ ಮಾಡುವುದು.

ನಂತರ ಅಸ್ಥಿಯ ಕುಂಭವನ್ನು ತೆಗೆದುಕೊಂಡು ಜಲದಲ್ಲಿ ವಿಸರ್ಜನೆ ಮಾಡಿ ಸ್ನಾನ ಮಾಡಬೇಕು. ಮಹಾನದಿ ಪ್ರಾರ್ಥನೆ. ಮನೆಗೆ ಬಂದು ಪುನಃ ಸ್ನಾನ ಮಾಡಿ ಭೋಜನ ಮಾಡಬೇಕು. ಮನೆಗೆ ಬರುವ ವೇಳೆಗೆ ಸೂರ್ಯಾಸ್ತವಾಗಿದ್ದರೆ ರಾತ್ರೆ ಭೋಜನ ನಿಷೇಧ.

ಸಂಚಯನ ವಿಧಿಃ ಸಮಾಪ್ತಾ

ಪ್ರತಿದಿನ ಕೃತ್ಯಂ

ಕರ್ತನು ಎರಡನೇ (೨) ದಿನ ಕರ್ಮಸ್ಥಳಕ್ಕೆ ಬಂದು ಸ್ನಾನಾಽಚಮನಗಳನ್ನು ಮಾಡಿ ಪವಿತ್ರಧಾರಿಯಾಗಿ ಬ್ರಹ್ಮದಂಡವನ್ನಿಟ್ಟು ವಾಸೋಧಾರಣೆ ಮಾಡಬೇಕು. ಪೂರ್ವಸ್ಥಳದಲ್ಲಿ ದರ್ಭೆಯಿಂದ ಶಿಲೆಯನ್ನು ಸುತ್ತಿಡಬೇಕು. ಪಿಂಡಾರ್ಥವಾಗಿ ಹವಿಸ್ಸನ್ನು ಮಾಡಿಟ್ಟಿರಬೇಕು. ಪ್ರಾಚೀನಾವೀತಿಯಿಂದ ಪ್ರೇತಶಿಲಾಸ್ನಾನ, ಮೃದಾಸ್ನಾನ, ವಾಸೋದಕ, ತಿಲೋದಕ, ನಿತ್ಯಪಿಂಡಪ್ರದಾನಗಳನ್ನು ಮಾಡುವುದಕ್ಕೆ ಅನುಜ್ಞೆಯನ್ನು ಪಡೆಯಬೇಕು.

ಸಂಕಲ್ಪ್ಯ. ಪ್ರಾಚೀನಾವೀತಿ ದಹನ ಜನಿತ, ತಾಪ, ತೃಷ್ಣಾ, ಪಿಪಾಸಾ, ಕ್ಷುದುಪಶಮನಾರ್ಥವಾಗಿ ಪ್ರೇತ ಶಿಲಾಸ್ನಾನ, ಮೃದಾಸ್ನಾನ, ವಾಸೋದಕ, ತಿಲೋದಕ ನಿತ್ಯಪಿಂಡಪ್ರದಾನಂ ಕರಿಷ್ಯೇ ಎಂದು ಸಂಕಲ್ಪ ಮಾಡಬೇಕು.

ಶಿಲಾಸ್ನಾನ ಮೃದಾಸ್ನಾನ, ವಾಸೋದಕ ತಿಲೋದಕಗಳನ್ನು ಕೊಟ್ಟು ಪಿಂಡಪ್ರದಾನ ಕಾಲದಲ್ಲಿ ಎರಡನೇ ದಿನವಾದ ಇಂದು ಚಕ್ಷುಸ್ಸು ಶ್ರೋತ್ರ, ನಾಸಾವಯವ ನಿಷ್ಪತ್ತಿ ಗಾಗಿಯೂ ಕ್ಷುದುಪ ಶಮನಾರ್ಥವಾಗಿಯೂ ಈ ಪಿಂಡಪ್ರದಾನ ಮಾಡುತ್ತಿದ್ದೇನೆಂದು ಪಿಂಡವನ್ನಿಡಬೇಕು. ಪಿಂಡವನ್ನು ವಾಯಸಗಳಿಗಿಟ್ಟು ಮನೆಗೆ ಬಂದು ಸ್ನಾನಾದಿಗಳನ್ನು ಮಾಡುವುದು.

ತೃತೀಯ ದಿನ ಕೃತ್ಯಂ

ಕರ್ತನು ಸ್ನಾನಾದಿಗಳನ್ನು ಮಾಡಿ ಕರ್ಮಾರಂಭ ಮಾಡಬೇಕು. ಮೂರನೇ ದಿನವಾದ ಇಂದು ಕಂಠ, ಭುಜ, ಮುಖ, ವಕ್ಷೋವಯವ ನಿಷ್ಪತ್ತಿಗಾಗಿಯೂ ಕ್ಷುದಪಶಮನಾರ್ಥವಾಗಿಯೂ ಈ ಪಿಂಡವನ್ನು ಕೊಡುತ್ತಿದ್ದೇನೆಂದು ಪಿಂಡಪ್ರದಾನ ಮಾಡಿ ಅದನ್ನು ವಾಯಸಾದಿಗಳಿಗಿಟ್ಟು ಮನೆಗೆ ಬರುವುದು. ಈ ನಿತ್ಯಕರ್ಮವು ಮುಗಿಯುತ್ತಲೇ ನವ ಶ್ರಾದ್ಧವನ್ನು ಮಾಡಬೇಕು.

ಚತುರ್ಥ, ಪಂಚಮ, ಷಷ್ಠ ಸಪ್ತಮ, ಅಷ್ಟಮ, ನವಮ ದಿನಗಳಲ್ಲಿ ಚತುರ್ಥ ದಿನದಲ್ಲಿ ಪಾರ್ಷ್ಣಿ, ಕುಕ್ಷಿ, ನಾಭಿ, ಗುದ, ಲಿಂಗಾವಯವ ನಿಷ್ಪತ್ತಿಯೂ **ಪಂಚಮದಿನದಲ್ಲಿ** ಊರೂ ಜಾನು, ಜಂಘಾವಯವ ನಿಷ್ಪತ್ತಿಯೂ (ನವಶ್ರಾದ್ಧವೂ ಆಗಬೇಕು). **ಷಷ್ಠದಿನದಲ್ಲಿ** ಗುಲ್ಫ, ಪಾದಾಂಗುಲೀ ಚರ್ಮಾದ್ಯವಯವ ನಿಷ್ಪತ್ತಿ, **ಸಪ್ತಮದಿನದಲ್ಲಿ** ಅಸ್ಥಿ, ಮಜ್ಜಾ, ಶಿರೋವಯವ ನಿಷ್ಪತ್ತಿ, (ನವಶ್ರಾದ್ಧ).

ಅಷ್ಟಮೇಽಹನಿ ನಖ, ರೋಮಾದ್ಯವಯವ ನಿಷ್ಪತ್ತಿ, **ನವಮದಿನೇ** ಮರ್ಮ, ವೀರ್ಯಾದಿ ಸರ್ವಾವಯವ ನಿಷ್ಪತ್ತಿ (ನವಶ್ರಾದ್ಧ).

ಒಟ್ಟಿನಲ್ಲಿ ಎರಡನೇ ದಿನದಿಂದ ಸಮದಿನಗಳಲ್ಲಿ ತತ್ತದವಯವ ನಿಷ್ಪತ್ತಿಗೂ ಕ್ಷುದಪಶಮನಾರ್ಥವಾಗಿಯೂ ಕರ್ಮವನ್ನು ಮುಗಿಸಿ ಪಿಂಡಪ್ರದಾನ ಮಾಡಬೇಕು.

ಮೂರನೇ ದಿನದಿಂದ ವಿಷಮದಿನಗಳಲ್ಲಿ (ನಿತ್ಯವಿಧಿ) ಮತ್ತು ನವಶ್ರಾದ್ಧವೂ ನಡೆಯಬೇಕು. **ನಿತ್ಯವಿಧಿಯು ಪ್ರತಿದಿನ ಕರ್ಮ.**

ಹತ್ತನೇ ದಿನವೂ ಸಹ ಕ್ಷುತ್ಪಿಪಾಸಾನಿವೃತ್ತಿಗಾಗಿ ನಿತ್ಯವಿಧಿ ಅಂಗವಾಗಿ ಪಿಂಡಪ್ರದಾನ ಮಾಡಬೇಕು.

ದಶಾಹವಿಧಿ

ಕರ್ತನು ನಿತ್ಯವಿಧಿಯಾದ ನಂತರ ಸ್ನಾನಾಚಮನಗಳನ್ನು ಮಾಡಿ, ಶುದ್ಧ ಸ್ಥಳದಲ್ಲಿ ತ್ರಿಕೋಣ, ವರ್ತುಳ, ಚತುರಶ್ರ ಮಂಡಲಗಳನ್ನು ಮಾಡಿ, ಬ್ರಹ್ಮದಂಡವನ್ನಿಟ್ಟು, ವಾಸೋಧಾರಣೆ ಮಾಡಿ, ದಶಮೇಽಹನಿ ಕರ್ತವ್ಯ ವೇದಿಕಾರಾಧನ, ಶಿಲಾಸ್ಥಾಪನ, ಬಲಿಪ್ರದಾನ, ಪಿಂಡಪ್ರದಾನಗಳನ್ನು ಮಾಡುವುದಕ್ಕಾಗಿ ಸಂಕಲ್ಪಮಾಡಬೇಕು.

ನಂತರ ವೇದಿಕಾರಾಧನೆಯನ್ನು ಮಾಡಬೇಕು.

ವೇದಿಕಾರಾಧನೆಯೆಂದರೆ ಶಿಲಾಸ್ಥಾಪನ, ಅಂಜನಾಭ್ಯಂಜನ ಸ್ನಾನ, ವಸ್ತ್ರ, ಗಂಧ, ತಿಲಾಕ್ಷತೆ, ರಕ್ತಪುಷ್ಪ, ಧ್ವಜ, ಛತ್ರ, ವ್ಯಜನ, ಪತಾಕ, ಪಾದುಕಾದಿಗಳನ್ನು ಸಮರ್ಪಿಸುವುದು.

ಅನ್ನವನ್ನು ಮೂರು ಭಾಗ ಮಾಡಬೇಕು.

ನೈವೇದ್ಯಕ್ಕೆ ಒಂದು ಭಾಗ, ಪಿಂಡಾರ್ಥವಾಗಿ ಎರಡನೆಯ ಭಾಗ. ಬಲ್ಯರ್ಥವಾಗಿ ಮೂರನೇ ಭಾಗ.

ಒಂದು ಭಾಗದ ಅನ್ನ, ಕದಲೀಫಲ, ನಾರಿಕೇಳಫಲ, ಪನಸಾಮ್ರಫಲ, ಅಪೂಪಗಳನ್ನು ಶಿಲಾರೂಪಿಗಳಾದ ಪ್ರೇತರಾಜ, ಯಮ ಮತ್ತು ರುದ್ರರಿಗೆ ಒಪ್ಪಿಸುವುದು. ಶಿಲೆಗಳ ಮೇಲೆ ಎಳ್ಳನ್ನು ಹಾಕಿ ತಾಂಬೂಲ ದಕ್ಷಿಣೆಗಳನ್ನೊಪ್ಪಿಸುವುದು.

ಅಮೃತಪಾನ ಸಿದ್ಧ್ಯರ್ಥವಾಗಿ ಉದಕುಂಭದಿಂದ ಜಲವನ್ನು ಬಿಡುವುದು. ಇದಕ್ಕೆ 'ಸಮುದ್ರೇ ಅಂತಃ' ಎಂಬ ಮಂತ್ರವನ್ನು ಜಪಿಸುವುದು.

ಸವ್ಯ। ಸಂಕಲ್ಪ್ಯ, ಪಿಂಡಪ್ರದಾನಕ್ಕೆ ಪ್ರಾಣಾಯಾಮಾನಂತರ ಪ್ರಾಚೀನಾವೀತಿಯಿಂದ ಮೂವರಿಗೂ ಏಕದರ್ಭಾಸನ ತಿಲೋದಕ ಪಿಂಡಪ್ರದಾನ ತಿಲೋದಕ ಅಂಜನಾಭ್ಯಂಜನ ದಕ್ಷಿಣೆ ಪ್ರಾರ್ಥನೆ.

ಸವ್ಯ। ಸಂಕಲ್ಪ್ಯ ಪ್ರಾಚೀನಾವೀತೀಯಿಂದ ಜಲಾಧಿವಾಸಿಗಳಿಗೆ ವೇದಿಕಾ ಪೂಜಾ ಬಲಿಪ್ರದಾನ, ಪಿಂಡಪ್ರದಾನಗಳನ್ನು ಮಾಡಿದ್ದರಿಂದ ಪ್ರೇತಕ್ಕೆ ಪ್ರೇತವಿಮುಕ್ತಿ ಸಾಧನೆಯಾಗಲೆಂದು ತಿಲೋದಕವನ್ನು ಬಿಡುವುದು. ಕುಂಭಕ್ಕೆ ಛಿದ್ರವನ್ನು ಮಾಡಿ ಅಮೃತಪಾನವಾಗಲೆಂದು ಬೇಡಿಕೆ.

ಮೇಲ್ಕಂಡ ದಶಾಹಕರ್ಮ ಸಾಂಗತಾ ಫಲಸಿದ್ಧಿಗಾಗಿ ಗೋದಾನ ದಶದಾನಾದಿಗಳನ್ನು ಮಾಡುವುದು. ಪತ್ನಿಯಿದ್ದಲ್ಲಿ ಪ್ರೇತ ಶಿಲೆಯ ಮೇಲೆ ಕಂಠಸೂತ್ರವನ್ನು ಇಡುವುದು.

ದಶಾಹ ವಿಧಿಯು ಮುಗಿದುದು

ಶಿಲಾಪಾತ್ರೋದ್ವಾಸನೆ

ಕರ್ತನು ಬ್ರಹ್ಮದಂಡವನ್ನಿಟ್ಟು, ವಾಸೋಧಾರಣೆ ಮಾಡಿ, ಪ್ರಾಚೀನಾವೀತಿಯಿಂದ ಶಿಲಾಪಾತ್ರೋದ್ವಾಸನೆ ಮಾಡಲು ಅಧಿಕಾರವನ್ನು ಪಡೆದು, ಸವ್ಯದಿಂದ ಸಂಕಲ್ಪ ಮಾಡಿ, ಪ್ರಾಚೀನಾವೀತೀಯಿಂದ ಶಿಲಾಪಾತ್ರೋದ್ವಾಸನಂ ಕರಿಷ್ಯೇ ಎಂದು ಸಂಕಲ್ಪ ಮಾಡಿ, ಕೃಛ್ರಾಚರಣೆಯನ್ನು ಮಾಡಿ ಪಿಂಡಪಾತ್ರೆಯನ್ನೂ ಪ್ರೇತಶಿಲೆಯನ್ನೂ ವಾಸಸ್ಸನ್ನೂ ಸಹ ತೆಗೆದುಕೊಂಡು ಜಲಾಶಯದಲ್ಲಿ ನಾಭಿಪರ್ಯಂತ ಜಲದಲ್ಲಿ ನಿಂತು, ದಕ್ಷಿಣಾಭಿಮುಖ ನಾಗಿ "ಸೂರ್ಯಂ ಚಕ್ಷುಃ" ಎಂಬ ಮಂತ್ರವನ್ನು ಹೇಳಿ ಜಲದಲ್ಲಿ ಹಿಂಭಾಗಕ್ಕೆ ಎಸೆಯುವುದು. ಪಿಂಡಾರ್ಥ ಪಾತ್ರೆಯನ್ನು ಪುರೋಹಿತನಿಗೆ ಕೊಡುವುದು ಮತ್ತು ಸ್ನಾನ ಮಾಡಿ, "ಇಮಂ ಜೀವೇಭ್ಯಃ" ಎಂಬ ಮಂತ್ರದಿಂದ ಪರ್ವತವನ್ನು ನೋಡಿ "ಉದುತ್ಯಃ" ಎಂಬ ಮಂತ್ರದಿಂದ ಸೂರ್ಯನನ್ನು ನೋಡಿ ಸಂಕಲ್ಪಪೂರ್ವಕವಾಗಿ ಗೋದಾನ, ದಶದಾನಾದಿಗಳನ್ನು ಕೊಟ್ಟು, ಸವ್ಯದಿಂದ ಧರ್ಮೋದಕಕ್ಕಾಗಿ ಸಂಕಲ್ಪ ಮಾಡುವುದು.

"ಉದಕ ತೀರದಲ್ಲಿ ಒಂದು ದರ್ಭೆಯ ಕೂರ್ಚೆಯನ್ನಿಡಬೇಕು.

"ಧರ್ಮೋದಕಕ್ಕಾಗಿ ಬಂದಿರುವವರೆಲ್ಲರೂ ಸ್ನಾನ ಮಾಡಿ ಮೈಕೈಗಳನ್ನು ಒರೆಸಿಕೊಳ್ಳದೇ ಹಾಗೆಯೇ ಮೂರು ದರ್ಭೆ ಪವಿತ್ರಧಾರಿಗಳಾಗಿ ಪ್ರಾಣಾಯಾಮವನ್ನು ಮಾಡಿ ಪ್ರಾಚೀನಾವೀತೀಯಿಂದ ತಮ್ಮ ತಮ್ಮ (ಮೃತನ) ಸಂಬಂಧವನ್ನು ಹೇಳಿಕೊಂಡು ಆ ಕೂರ್ಚೆಯ ಮೇಲೆ ಮೂರಾವರ್ತಿ ತಮ್ಮ ಬೊಗಸೆಗಳಿಂದ ನೀರು ದಕ್ಷಿಣಗಳೊಂದಿಗೆ ಧರ್ಮೋದಕವನ್ನು ಈ ಲೋಕದ ಋಣಾನುಬಂಧ ನಿವೃತ್ತಿಗಾಗಿ ಕೊಡುತ್ತೇನೆಂದು ಹೇಳುತ್ತಾ ಕೊಡುವುದು. ನಂತರ ನೆಂದ ನೆಲ್ಲಿಚೆಟ್ಟನ್ನು ಚೂರು ತಮ್ಮ ತಲೆಗೆ ಹಚ್ಚಿಕೊಂಡು ಮತ್ತೆ ಸ್ನಾನ ಮಾಡಿ ವಸ್ತ್ರಧಾರಿಗಳಾಗಿ ತಮ್ಮ ಮನೆಗೆ ಹಿಂತಿರುಗುವುದು.

ಕರ್ತನು ಮಾತ್ರ ಎರಡನೇ ಸ್ನಾನ ಮಾಡುವಾಗ ಕಡಲೆಕಾಳೊಂದನ್ನು ಬಾಯಲ್ಲಿ ಅಗಿದು ಉಗುಳಬೇಕು.

"ಬಂದವರೆಲ್ಲರೂ ಧರ್ಮೋದಕವನ್ನು ಕೊಟ್ಟ ನಂತರ ಕೊನೆಗೆ ಕರ್ತನು ಕನಿಷ್ಠ ಪೂರ್ವಕವಾಗಿ ಕೊಡಬೇಕು. ಕರ್ತರು ಮಾತ್ರ ಆ ಕರ್ಮ ಮಾಡುವ ಜಾಗದಲ್ಲಿಯಾಗಲೀ ಅಥವಾ ಧರ್ಮೋದಕವನ್ನು ಕೊಟ್ಟ ಮಾತ್ರಕ್ಕೆ ಯಾರೂ ಯಜ್ಞೋಪವೀತವನ್ನು ಹಾಕಿಕೊಳ್ಳಬೇಕಾಗಿಲ್ಲ."

ಒಂದು ದಿನ ಆಶೌಚಾನುಷ್ಠಾನ ಮಾಡಿದ್ದಾಗಲೀ ಅಥವಾ ಶವವನ್ನು ಮುಟ್ಟಿದ್ದಾಗಲೀ ಆದರೆ ಮಾತ್ರ ಯಜ್ಞೋಪವೀತವನ್ನು ಹಾಕಿಕೊಳ್ಳಬೇಕು. ಬಹಿಷ್ಠೆಯನ್ನು ಮುಟ್ಟಿದರೂ, ಬಾಣಂತಿಯನ್ನು ಹತ್ತುದಿನದೊಳಗೆ ಮುಟ್ಟಿದರೂ ಯಜ್ಞೋಪವೀತವನ್ನು ಹಾಕಿಕೊಳ್ಳಬೇಕು.

ವಾರುಣ ಕಲಶ ಪೂಜೆ

ಸ್ನಾತ್ವಾಽಚಮ್ಯ. ಸವ್ಯ. ಪ್ರಾಣಾನಾಯಮ್ಯ. ಸಂಕಲ್ಪ್ಯ

ಪ್ರಾಚೀನಾವೀತೀ ಅಶುಚಿಪರಿಹಾರಾರ್ಥವಾಗಿಯೂ ಉಳಿದವರಿಗೆಲ್ಲಾ ಆಯುಷ್ಯಾಭಿವೃದ್ಧಿಗಾಗಿಯೂ ವಾರುಣ ಕಲಶ ಪೂಜೆಯನ್ನು ಮಾಡುತ್ತೇನೆಂದು ಸಂಕಲ್ಪಿಸಿ, ಪುನಃ ಸಂಕಲ್ಪ್ಯ। ಶುಭತಿಥೌ....ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಎಂದು ವಾರುಣ ಕಲಶ ದೇವತಾಭ್ಯೋ ನಮಃ ಎಂದು ಷೋಡಶೋಪಚಾರ ಪೂಜೆಯನ್ನು ಮಾಡಿ, ಮೃತನ ಸ್ಥಳದಲ್ಲಿ "ನಿವರ್ತಧ್ವಂ" ಎಂಬ ಸೂಕ್ತವನ್ನು ಹೇಳುತ್ತಾ ಕರ್ತನಿಗೆ ಮಾರ್ಜನೆ ಮಾಡಬೇಕು. ಮನೆಯಲ್ಲಿ "ಜನಿಷ್ಠಾ ಉಗ್ರಃ" ಎಂಬ ಸೂಕ್ತದಿಂದ ಮಾರ್ಜನೆ. ತೀರ್ಥಪ್ರಸಾದಗಳಾವುದನ್ನೂ ಉಪಯೋಗಿಸಬಾರದು.

ಇತಿ ದಶಾವಿಧಿಃ

ಏಕಾದಶೇಹನಿ – ವೃಷೋತ್ಸರ್ಗ

ಈ ಹನ್ನೊಂದನೇ ದಿನ ಕರ್ತನ ವಿನಾ ಉಳಿದವರೆಲ್ಲರೂ ಹತ್ತು ದಿನಗಳಿಂದಲೂ ತಾವು ಮುಟ್ಟಿಕೊಂಡಿದ್ದ ಬಟ್ಟೆಗಳನ್ನೂ, ಪಾತ್ರಾದಿಗಳನ್ನೂ ಸಹ ಸ್ನಾನಾನಂತರ ಶುದ್ಧಿಪಡಿಸಿ ಕೊಳ್ಳಬೇಕು.

ಈ ದಿನ ಕರ್ಮಸ್ಥಳಕ್ಕೆ ಹೋಗಿ ವೃಷೋತ್ಸರ್ಗ ಕರ್ಮವನ್ನು ನಡೆಸಿ ಮುಂದಿನ ಕರ್ಮಗಳನ್ನೂ ಕರ್ಮಮಾಡುವ ಸ್ಥಳದಲ್ಲೇ ಮಾಡಬೇಕು. ಈ ವೃಷೋತ್ಸರ್ಗ ಕರ್ಮವು ಮುಗಿದು ಕರ್ತನು ಹೊರಗೆ ಹೋಗುವವರೆಗೂ ಮನೆಯವರೆಲ್ಲಾ ಹಾಗೇ ಇದ್ದು, ಕರ್ತನು ಹೊರಗೆ ಹೋದ ನಂತರ ಮನೆಯನ್ನು ಶುದ್ಧಿಪಡಿಸಿ ಭಾಂಡಭಾಜನಾದಿಗಳನ್ನು ಸ್ನಾನಮಾಡಿ ಶುದ್ಧಿಪಡಿಸಿಕೊಳ್ಳುವುದು. ಮನೆಗೆ ಪುಣ್ಯಾಹವಾಗಿ ನಂತರ ಪಾಕಾದಿಗಳನ್ನು ಮಾಡಬಹುದು. ಮನೆಯಲ್ಲಿ ಕರ್ಮವು ನಡೆಯದಿದ್ದರೆ ಪುಣ್ಯಾಹ ಮಾಡಿಸಿ ನಂತರ ಪಾಕಾದಿಗಳನ್ನು ಮಾಡಬೇಕು.

ಕರ್ತನು ಸ್ನಾನಾದಿಗಳನ್ನು ಮಾಡದೇ ಹಾಗೆಯೇ ತನ್ನ ಪದಾರ್ಥಗಳ ಸಮೇತ ಹೊರಗೆ ಹೋಗಿ ಅಲ್ಲಿ ಸ್ನಾನಾದಿ ಕರ್ಮಗಳನ್ನೆಲ್ಲಾ ಮುಗಿಸಿ, ಮನೆಗೆ ಬಂದು ಪುನಃ ಸ್ನಾನಮಾಡಿ ಉಪವೀತವನ್ನು ಧರಿಸಿ ಮಾಧ್ಯಾಹ್ನಿಕವನ್ನು ಪೂರ್ತಮಾಡಿ ಭೋಜನ ಮಾಡುವುದು.

ಆದರೆ ಕರ್ಮವು ಮನೆಯಲ್ಲಿ ನಡೆಯಲಿ ಅಥವಾ ನಡೆಯದಿರಲಿ ಕರ್ತನು ಹನ್ನೊಂದನೇ ದಿನದ ಕರ್ಮವು ಪೂರ್ತಿಯಾಗಿ ನಡೆಯುವವರೆಗೂ ನೂತನ ಉಪವೀತವನ್ನು ಧರಿಸಲೇಬಾರದು. ಏಕೆಂದರೆ ವೃಷೋತ್ಸರ್ಗಕರ್ಮವು ಅಶೌಚದಲ್ಲೇ ಮಾಡುವುದು. ಇದು ಖಂಡಿತ.

ಕರ್ತನು ಕರ್ಮಪ್ರದೇಶದಲ್ಲಿ ಸ್ನಾನ ಮಾಡಿ ಅರ್ಘ್ಯಪ್ರದಾನಾಂತ ಕ್ರಿಯೆಯನ್ನು ಮಾಡಿ, ಪುಣ್ಯಾಹವನ್ನಾರಂಭಿಸಿ, ಸಂಕಲ್ಪ ಮಾಡಿ ಮೃತಾऽಶೌಚ ಪೂರ್ವಕ ಅಶುಚಿಯು ಪರಿಹಾರವಾಗಿ ಉಳಿದವರಿಗೆಲ್ಲಾ ಆಯುಷ್ಯಾಭಿವೃದ್ಧಿಯಾಗಲೆಂದೂ ಅಪಮೃತ್ಯುಪೀಡಾ ಪರಿಹಾರವಾಗಲೆಂದೂ, ವೃಷೋತ್ಸರ್ಗಕರ್ಮವನ್ನೂ, ಅಗ್ನಾವೇಕೋದಿಷ್ಟ ಶ್ರಾದ್ಧವನ್ನೂ ಅದ್ಯಾದಿ ಷೋಡಶೈಕೋದಿಷ್ಟಶ್ರಾದ್ಧ, ವಸುಗಣ, ರುದ್ರಗಣ ಶ್ರಾದ್ಧಗಳನ್ನೂ, ಸೋದಕುಂಭ ಶ್ರಾದ್ಧವನ್ನೂ ಮಾರನೇ ದಿನ ಮತ್ತು ಸಪಿಂಡೀಕರಣ ಶ್ರಾದ್ಧವನ್ನೂ ಸಹ ಮಾಡುತ್ತೇನೆಂದು ಹೇಳಿ ಪುಣ್ಯಾಹವನ್ನು ಮುಗಿಸುವುದು.

ನಂತರ ಬ್ರಹ್ಮದಂಡ, ವೃಷೋತ್ಸರ್ಗಕರ್ಮ ಮಾಡಲು ಅಧಿಕಾರ ಸ್ವೀಕಾರ ಮತ್ತು ವೃಷೋತ್ಸರ್ಗ ಹೋಮಕ್ಕೆ ಸಂಕಲ್ಪ.

ಸ್ತ್ರೀಯಾಗಲೀ ಪುರುಷನಾಗಲೀ ಯಾರೇ ಮೃತರಾದರೂ ವೃಷೋತ್ಸರ್ಗವು ನಡೆಯಲೇ ಬೇಕು. ಬೇಡವೆಂಬುವುದು ಕೆಲವರ ಮತ.

ಸ್ಥಂಡಿಲದಲ್ಲಿ ಒಂದು ರೇಖೆಯನ್ನು ಮಾತ್ರ ಹಾಕಿ ಅಗ್ನ್ಯಾಹ್ವಾನ ಮತ್ತು ನಮಸ್ಕಾರಗಳೊಂದಿಗೆ ಅಗ್ನಿಯನ್ನು "ಅಗ್ನಿನಾಗ್ನಿಃ" ಎಂಬ ಮಂತ್ರದಿಂದ ಸ್ತುತಿಸಿ, ಮತ್ತೆ ಸಂಕಲ್ಪ ಮಾಡುವುದು. ಪ್ರಾಚೀನಾವೀತಿಯಿಂದ ವೃಷಭ ಪೂಜೆ.

ಶಿವಸ್ತ್ವಷ್ಟರಿಹಾಗಹಿ....ಈ ಮಂತ್ರದಿಂದ, ಷೋಡಶೋಪಚಾರ ಪೂಜೆಯಾದ ನಂತರ "ಋಷಭಂ ಮಾ" ಎಂಬ ವರ್ಗದಿಂದ ವೃಷಭೋಪಸ್ಥಾನ.

ಪ್ರಾಣಾನಾಯಮ್ಯ, ಪ್ರಾಚೀನಾವೀತಿಯಿಂದ ರುದ್ರಕಲಶ ಪೂಜೆ. "ಕದ್ರುದ್ರಾಯ" ಎಂಬ ಋಕ್ಕಿನಿಂದ ಉಪಸ್ಥಾನ.

ಸವ್ಯ-ಸಂಕಲ್ಪ್ಯ, ಪ್ರಾಚೀನಾವೀತಿಯಿಂದ ವೃಷೋತ್ಸರ್ಜನ ಹೋಮಕ್ಕೆ ಸಂಕಲ್ಪ, ಅನ್ವಾಧಾನ, ಪಾತ್ರಾಸಾಧನೆ, ಚರುಶ್ರಪಣಾಂತ ಚಕ್ಷುಷ್ಯಂತ ಮಾಡಿ, ಅವದಾನ ಧರ್ಮದಿಂದ ಕದ್ರುದ್ರಾಯ ಮಂತ್ರದಿಂದ ಚರುಹೋಮ.

ಆಪ್ಯಾಯಸ್ವ.....ಮಂತ್ರದಿಂದ ಪಾಯಸ ಹೋಮ.

ಇಂದ್ರ ವೋ ವಿಶ್ವತ....ಮಂತ್ರದಿಂದ ಯಾವಕ ಹೋಮ.

ವೃಷಭಕ್ಕೆ ಲಿಂಗದ ಗುರುತು, ವತ್ಸತರೀಭ್ಯಾಂ ನಮಃ ಎಂದು ಷೋಡಶೋಪಚಾರ ಪೂಜೆ.

ಪೂಜಾನಂತರ ಆ ವೃಷಭಕ್ಕೆ ಮಾರ್ಜನೆ, ವೃಷಭದ ದಕ್ಷಿಣಭಾಗದಲ್ಲಿ ಹರಿದ್ರಕ್ಕೆ ಹುತಶೇಷ ಆಜ್ಯವನ್ನು ಸೇರಿಸಿ ಲಿಂಗಾಕಾರವಾಗಿ ಬರೆಯುವುದು. ಮತ್ತು "ಋಷಭಂ ಮಾ" ಎಂಬ ಮಂತ್ರದಿಂದ ಉಪಸ್ಥಾನ.

ಆಮೇಲೆ ಕದ್ರುದ್ರಾಯ ಸೂಕ್ತದಿಂದ ಪೂರ್ವದಿಗುಪಸ್ಥಾನ.

ಇಮಾರುದ್ರಾಯ ಸೂಕ್ತದಿಂದ ದಕ್ಷಿಣದಿಗುಪಸ್ಥಾನ.

ಆತೇಪಿತರ್ಮರುತಾಂ ಸೂಕ್ತದಿಂದ ಪಶ್ಚಿಮದಿಗುಪಸ್ಥಾನ.

ಇಮಾರುದ್ರಾಯ ಸ್ಥಿರಧನ್ವನ ಸೂಕ್ತದಿಂದ ಉತ್ತರದಿಗುಪಸ್ಥಾನ.

ಏತಂ ಯುವಾನಂ ಮಂತ್ರಜಪ—

ವೃಷಭದ ಪೃಷ್ಠಭಾಗದಲ್ಲಿ ಜಲ ಪ್ರೋಕ್ಷಣೆ, ವೃಷಭ ವಿಸರ್ಜನೆ, ನಂತರ ಲಾಂಗೂಲ ತರ್ಪಣ.

ವೃಷಭದ ಚರ್ಮ, ಮಾಂಸಗಳ ದಹನದೋಷ ಪರಿಹಾರಾರ್ಥವಾಗಿ ತಿಲಪಾತ್ರೆ, ಉದಕುಂಭ, ವಸ್ತ್ರ, ಹಿರಣ್ಯಾದಿಗಳ ದಾನವಾಗಬೇಕು.

ವೃಷೋತ್ಸರ್ಗ ವಿಧಿಯು ಸಮಾಪ್ತಿಯಾಯಿತು.

ಅಗ್ನಾವೇಕೋದಿಷ್ಟಶ್ರಾದ್ಧ

ಲಾಂಗೂಲ ತರ್ಪಣಾನಂತರ ಕರ್ತನು ಸ್ನಾನಮಾಡಿ, ಆಚಮನಮಾಡಿ, ಬ್ರಹ್ಮದಂಡವನ್ನಿಡಬೇಕು.

ಪ್ರಾಚೀನಾವೀತಿಯಿಂದ ಅಗ್ನಾವೇಕೋದಿಷ್ಟ ಶ್ರಾದ್ಧಕ್ಕೆ ಅಧಿಕಾರ ಪ್ರಾಪ್ತಿ, ಶ್ರಾದ್ಧಕ್ಕೆ ಸಂಕಲ್ಪ. ಅಗ್ನಿ ಪ್ರತಿಷ್ಠೆ–ಅನ್ವಾಧಾನ, ಕ್ಷಣಪಾದ್ಯ, ಸ್ವಯಂ ಪಾದಪ್ರಕ್ಷಾಳನೆ, ಶ್ರಾದ್ಧಾರಂಭಕ್ಕೆ ಮತ್ತೆ ಸಂಕಲ್ಪ, ತಿಲವಿಕಿರಣ, ಎಂದರೆ ಎಳ್ಳನ್ನು ಶ್ರಾದ್ಧಸ್ಥಳದಲ್ಲೆಲ್ಲಾ ಎರಚುವುದು. ಪಾಕಪ್ರೋಕ್ಷಣೆ, ಆಸನ, ಪಾತ್ರೈಕಾಸಾಧನೆ, ಅರ್ಘ್ಯ ವಿನಿಯೋಗ. ಗಂಧ, ತಿಲ, ವಸ್ತ್ರ ಆಭರಣಾದಿಗಳು, ದಕ್ಷಿಣೆ, ಪವಿತ್ರ ಸವ್ಯ-ಸಂಕಲ್ಪ ಅಪಸವ್ಯದಿಂದ ಪ್ರೇತಾಹುತಿಗೆ ಸಂಕಲ್ಪ.

"ಪ್ರೇತಾಯಾಽಮುಷ್ಮೈಯ ಮಾಯ ಚ ಸ್ವಾಹಾ" ಎಂದು ಒಂದು ಹೋಮ, ಪರಿಷೇಚನ, ಪೃಥಿವೀತೇ ಪಾತ್ರಮಿತಿ ಅನ್ನದತ್ತ, ಆಪೋಶನ, ಪಂಚಪ್ರಾಣಾಹುತಿ. ಅನ್ನವನ್ನು ನಾಲ್ಕು ಭಾಗಮಾಡಿ ಒಂದಕ್ಕೆ ಕ್ಷೀರ, ಮತ್ತೊಂದಕ್ಕೆ ದಧಿ, ಮೂರನೆಯದಕ್ಕೆ ಘೃತ, ನಾಲ್ಕನೆಯದಕ್ಕೆ ಗುಡಗಳನ್ನು ಮಿಶ್ರಮಾಡಿ "ಉದೀರತಾಂ" ಎಂಬುದಾಗಿ ಎಂಟುಮಂತ್ರಗಳಿಂದ ನಾಲ್ಕು ಆವರ್ತಿ ಎಂದರೆ ಪ್ರತ್ಯೇಕ ಪ್ರತ್ಯೇಕವಾಗಿ ಅದೇ ಅಗ್ನಿಯಲ್ಲಿಯೇ ಹೋಮ ಮಾಡಬೇಕು. ಈ ಅಗ್ನಿಯೇ ಬ್ರಾಹ್ಮಣಸ್ಥಾನೀಯನು. ಬೇರೆ ಬ್ರಾಹ್ಮಣನಿಲ್ಲ. ಇದಕ್ಕೆ ಉಚ್ಛಿಷ್ಠ ಪಿಂಡವಿಲ್ಲ. ಉತ್ತರಾಪೋಶನ, ಸವ್ಯ, ಸಂಕಲ್ಪ, ಅಪಸವ್ಯದಿಂದ ತಿಲೋದಕ ಪಿಂಡ ಪ್ರದಾನಕ್ಕೆ ಸಂಕಲ್ಪ.

ಈ ಪಿಂಡಪ್ರದಾನಕ್ಕೆ ದರ್ಭಾಸನ. ತಿಲೋದಕ, ಪಿಂಡಪ್ರದಾನ.

ತಿಲೋದಕ, ಅಂಜನಾಭ್ಯಂಜನ, ದಕ್ಷಿಣೆ, ಶ್ರಾದ್ಧ ಸಮಾಪ್ತಿ.

ಇಲ್ಲಿ ಶ್ರಾದ್ಧ ಭೋಜನ ನಿಷೇಧ. ಕರ್ಮಾಂತೇ ಸರ್ವೇಷಾಂ ಕರ್ತೄಣಾಂ ಸ್ನಾನಂ.

ಅಗ್ನಾವೇಕೋದಿಷ್ಟಶ್ರಾದ್ಧವಿಧಿಃ ಸಮಾಪ್ತಾ

ಷೋಡಶೈಕೋದ್ದಿಷ್ಟ ಶ್ರಾದ್ಧ

ಕರ್ತನು ಸ್ನಾನಾಚಮನಗಳನ್ನು ಮಾಡುವದು. ಪವಿತ್ರಧಾರಣೆ. ಬ್ರಹ್ಮದಂಡ, ಅಧಿಕಾರ ಸ್ವೀಕಾರ. ಸವ್ಯೇನ ಪ್ರಾಣಾಯಾಮ, ಪುನಃ ಸಂಕಲ್ಪ, ಕ್ಷಣ, ಸವ್ಯ, ಪುನಃ ಸಂಕಲ್ಪ. ಷೋಡಶ ಮಾಸಿಕಗಳ ಬ್ರಾಹ್ಮಣಸ್ಥಾನೀಯರಿಗೂ ಪ್ರತ್ಯೇಕ ಕ್ಷಣ. ಗೋಮಯೇನ ವೃತ್ತಾಕಾರ ಮಂಡಲ. ಪ್ರತಿ ಮಾಸಿಕ ಸ್ಥಾನೀಯರಿಗೂ ಪಾದ್ಯ. ಸ್ವಯಂಪಾದ ಪ್ರಕ್ಷಾಳನೆ. ಬ್ರಾಹ್ಮಣಸ್ಥಾನೀಯರನ್ನು ಕ್ರಮವಾಗಿ ಕೂಡಿಸಬೇಕು.

ಸವ್ಯ. ಸಂಕಲ್ಪ್ಯ, ಶ್ರಾದ್ಧಕರ್ಮಾರಂಭ. ಶ್ರಾದ್ಧಸ್ಥಳದಲ್ಲಿ ಸರ್ವತ್ರ ತಿಲ ವಿಕಿರಣ. ಕುಶೋದಕದಿಂದ ಆಮಪ್ರೋಕ್ಷಣೆ.

ಅಪಸವ್ಯದಿಂದ ಆಸನ ಕ್ಷಣ.

ಬ್ರಾಹ್ಮಣರ ಮುಂದೆ ಭೂಪ್ರೋಕ್ಷಣೆ ಮಾಡಿ, ಹದಿನಾರು ದರ್ಭೆಗಳನ್ನು ಪ್ರೋಕ್ಷಿತ ಸ್ಥಳದಲ್ಲಿ ಪ್ರತ್ಯೇಕವಾಗಿ ಹರಡಿ, ಅವುಗಳ ಮೇಲೆ ಹದಿನಾರು ಪಾತ್ರೆ (ದೊನ್ನೆ) ಬೋರಲು ಹಾಕಿ, ಪ್ರೋಕ್ಷಣೆ, ಮತ್ತೆ ಎತ್ತಿಡುವುದು. ಅವುಗಳ ಮೇಲೆ ಒಂದೊಂದು ತುಂಡು ದರ್ಭೆಯನ್ನಿಡಬೇಕು. ಎಳ್ಳನ್ನು ಹಾಕುವುದು. ಜಲವನ್ನು ಹಾಕುವುದು. ತಿಲೋಸಿ ಮಂತ್ರದಿಂದ ತಿಲಮಂತ್ರ ಗಂಧಗಳನ್ನು ಹಾಕುವುದು. ಸರ್ವತ್ರ ಅರ್ಘ್ಯ. ಅರ್ಘ್ಯಾನಂತರ ಕರ್ತನು ತನ್ನ ಹಿಂಭಾಗದಲ್ಲಿ ದೊನ್ನೆಯನ್ನು ಹರಿದು ಹಾಕುವುದು.

ಸವ್ಯ. ಉದುತ್ಯಂ....ಮಂತ್ರದಿಂದ ಸೂರ್ಯ ದರ್ಶನ.

ಅಪಸವ್ಯದಿಂದ ಗಂಧದಾನ, ವಸ್ತ್ರ, ಅಂಗುಳ್ಯಾಭರಣಾದಿಗಳು. ಪವಿತ್ರ ಪ್ರೇತಾಹುತಿಗೆ ಸಂಕಲ್ಪ. ಸರ್ವತ್ರ ಪ್ರೇತಾಹುತಿ. ಇದನ್ನು ಮಾತ್ರ ಅಗ್ನಿಯಲ್ಲೇ ಹಾಕಬೇಕು.

ಭೋಜನಪಾತ್ರೆಗಳನ್ನು ಹಾಕಿ ಹುತಶಿಷ್ಟಾನ್ನ. ಪರಿವೇಷಣ–ಬ್ರಾಹ್ಮಣರ ಕೈಯಲ್ಲಿ ಮಾಡಿದ್ದ ಪ್ರೇತಾಹುತಿಯನ್ನು ಒಂದು ಪಾತ್ರೆಯಲ್ಲಿಟ್ಟುಕೊಂಡು ಲೌಕಿಕಾಗ್ನಿಯಲ್ಲಿ ಸಮರ್ಪಿಸಿ, ನಂತರ ಎಲೆಗೆ ಬಡಿಸಿದ ಪಾಕಾದಿಗಳನ್ನು ಗಾಯತ್ರಿಯಿಂದ ಪ್ರೋಕ್ಷಿಸಬೇಕು. ಮತ್ತು ಸರ್ವತ್ರ ಅನ್ನದತ್ತ. ಆಪೋಶನ. ಬ್ರಾಹ್ಮಣ ಭೋಜನ. ತದ ನಂತರ ತೃಪ್ತಿ ಪ್ರಶ್ನೆ. ಉತ್ತಾರಾಪೋಶನ. ಪಿಂಡ ಪ್ರದಾನ ಪ್ರತ್ಯೇಕ ಪ್ರತ್ಯೇಕ ಒಟ್ಟು ಹದಿನಾರು ಪಿಂಡಗಳ ಮೇಲೆ ತಿಲೋದಕ. ದಕ್ಷಿಣೆ, ತಿಲೋದಕ ಪ್ರದಾನ. ಪಿಂಡೋದ್ವಾಸನೆ ಮಾಡಿ ಗೃಧ್ರಾದಿಗಳಿಗೆ ಕೊಡುವುದು.

ಷೋಡಶಶ್ರಾದ್ಧ ವಿಧಿಃ ಸಮಾಪ್ತಾ

ವಸುಗಣ ಶ್ರಾದ್ಧ

ಪವಿತ್ರ ಧಾರಣೆ. ಬ್ರಹ್ಮದಂಡ, ಪ್ರಾಚೀನಾವೀತೀ. ಧರಾದಿ ಸಂಜ್ಞಕ ಅಷ್ಟವಸುಗಣ ಪ್ರೇತ ಶ್ರಾದ್ಧದಲ್ಲಿ ಬ್ರಾಹ್ಮಣಸ್ಥಾನೀಯನಿಗೆ ಕ್ಷಣ. ಪಾದ್ಯ, ಸ್ವಯಂ ಪಾದ ಪ್ರಕ್ಷಾಳನೆ. ಬ್ರಾಹ್ಮಣೋಪವೇಶನ. ಸವ್ಯ. ಏವಂ ಗುಣೇತ್ಯಾದಿ.... ಪುಣ್ಯತಿಥೌ. ಪ್ರಾಚೀನಾವೀತೀ. ಶ್ರಾದ್ಧ ಕರ್ಮಾರಂಭ. ಅಪಹತಾ ಸ್ಥಳದಲ್ಲಿ ತಿಲವಿಕಿರಣ, ಉದೀರತಾಂ ಅಪವಿತ್ರಃ ಶ್ರಾದ್ಧಕಾಲೇ (ಇತಿ ಮಂತ್ರೈಃ ಪಾಕಾದೀನ್ ಪ್ರೋಕ್ಷ್ಯ). ಮಂತ್ರಗಳಿಂದ ಪಾಕ ಪ್ರೋಕ್ಷಣೆ, ಆವಾಹನೆ, ಗಂಧ, ತಿಲ, ವಸ್ತ್ರ, ಸರ್ವಾಲಂಕರಣ ಮಂಡಲಾದಿಯಾಗಿ ಪಾಕ ಪರಿವೇಷಣ, ಗಾಯತ್ರಿಯಿಂದ ಪ್ರೋಕ್ಷಣೆ, ಪೃಥಿವೀತೇ ಪಾತ್ರಂ ಮಂತ್ರದಿಂದ ಅನ್ನದತ್ತ ಆಪೋಶನ, ಪಂಚಪ್ರಾಣಾಹುತಿ, ಭೋಜನಾ ನಂತರ ಪ್ರೇತ ತೃಪ್ತಿ ಪ್ರಶ್ನೆ. ಉತ್ತರಾಪೋಶನ 'ಅಭಿರ ಮ್ಯತಾಂ' ಎಂದು ವಿಸರ್ಜನೆ.

ವಸುಗಣ ಶ್ರಾದ್ಧವಿಧಿಃ ಸಮಾಪ್ತಾ

ರುದ್ರಗಣ ಶ್ರಾದ್ಧವಿಧಿಃ

ಕರ್ತನು ಸ್ನಾತ್ವಾಽಚಮ್ಯ. ಪವಿತ್ರಧಾರಣೆ ಬ್ರಹ್ಮದಂಡ, ಪ್ರಾಚೀನಾವೀತೀ. ಶ್ರಾದ್ಧಕ್ಕೆ ಅಧಿಕಾರ, ಸಂಕಲ್ಪ, ರುದ್ರಗಣ ಶ್ರಾದ್ಧಕ್ಕೆ ಸಂಕಲ್ಪ, ಅಜೈಕಪಾದಿ ರುದ್ರಗಣ ಪ್ರೇತ ಶ್ರಾದ್ಧೀಯ ಬ್ರಾಹ್ಮಣನಿಗೆ ಕ್ಷಣ, ಪಾದ್ಯ, ಸ್ವಯಂಪಾದ ಪ್ರಕ್ಷಾಳನೆ, ಬ್ರಾಹ್ಮಣೋಪವೇಶನ, ಸವ್ಯ ಅದ್ಯಮಯಾ ತಿಲವಿಕಿರಣ ಉದೀರತಾಂ ಅಪವಿತ್ರಃ ಮಂತ್ರಗಳಿಂದ ಪಾಕ ಪ್ರೋಕ್ಷಣೆ, ಆಸನ, ಕ್ಷಣ, ಆವಾಹನ, ಗಂಧ, ತಿಲ, ವಸ್ತ್ರ, ಸರ್ವಾಲಂಕರಣ, ಮಂಡಲಾದಿ ಯಾಗಿ ಪಾಕ ಪರಿವೇಷಣಾಂತ ಗಾಯತ್ರ್ಯಾ ಪ್ರೋಕ್ಷಣೆ, ಪೃಥಿವೀತೇತ್ಯಾದಿ ಅನ್ನ ದತ್ತ. ಆಪೋಶನ, ಪಂಚಪ್ರಾಣಾಹುತಿ. ಭೋಜನಾನಂತರ ಪ್ರೇತತೃಪ್ತಿ ಪ್ರಶ್ನೆ. ಉತ್ತಾರೋಪಶನ 'ಅಭಿರಮ್ಯತಾಂ' ಎಂದು ವಿಸರ್ಜನೆ.

ರುದ್ರಗಣ ಶ್ರಾದ್ಧವಿಧಿಯು ಸಂಪೂರ್ಣ

ಇಲ್ಲಿಗೆ ಹನ್ನೊಂದನೇ ದಿನ ಮಾಡುವ ವೃಷೋತ್ಸರ್ಗ ಅಗ್ನಾವೇಕೋದ್ದಿಷ್ಟ ಶ್ರಾದ್ಧ ಆದ್ಯಾದಿ ಷೋಡಶೈಕೋದ್ದಿಷ್ಟ ಶ್ರಾದ್ಧ ವಸುಗಣ ರುದ್ರಗಣ ಶ್ರಾದ್ಧ ಕರ್ಮಗಳು ಮುಗಿದವು.

ಹನ್ನೊಂದನೇ ದಿನದ ಸೋದಕುಂಭ ಶ್ರಾದ್ಧ

ಕರ್ತನು ಸ್ನಾನಾಚಮನಗಳನ್ನು ಮಾಡಿ ಪವಿತ್ರಧಾರಿಯಾಗಿ ಬ್ರಹ್ಮದಂಡ ವನ್ನಿಡುವುದು. ನಂತರ ಪ್ರಾಚೀನಾವೀತಿಯಿಂದ ಸೋದಕುಂಭ ಶ್ರಾದ್ಧ ಮಾಡುವುದಕ್ಕೆ ಅನುಜ್ಞೆ, ಸವ್ಯ, ಸಂಕಲ್ಪ, ಕ್ಷಣ. ಗೋಮಯದಿಂದ ವರ್ತುಲಾಕಾರ ಮಂಡಲ ಪಾದ್ಯ ಸ್ವಯಂ ಪಾದ ಪ್ರಕ್ಷಾಳನೆ. ಪುನಃ ಸಂಕಲ್ಪ. ಶ್ರಾದ್ಧ ಕರ್ಮಾರಂಭ. ಅಪಹತಾ ಮಂತ್ರದಿಂದ ತಿಲವಿಕಿರಣ. ಉದೀರತಾಂ ಮಂತ್ರ ಸಹಿತ.

ಅಪವಿತ್ರಃ, ಶ್ರಾದ್ಧಕಾಲೇ ಮಂತ್ರದಿಂದ ಆಮಪ್ರೋಕ್ಷಣೆ.

ಆಸನ, ಕ್ಷಣ, ಗಂಧ, ತಿಲ, ವಸ್ತ್ರ ಸರ್ವಾಲಂಕರಣ ಸೋಪಸ್ಕರ ದಾನಂ. ಕೂರ್ಚ ವಿಸರ್ಜನೆ.

ಸೋದಕುಂಭ ಶ್ರಾದ್ಧ ಸಮಾಪ್ತಿ

ಸಪಿಂಡೀಕರಣ ಶ್ರಾದ್ಧವಿಧಿಃ

ಕರ್ತನು ಸ್ನಾನ ಮಾಡಿ ದೀಕ್ಷಾ ವಸ್ತ್ರಗಳನ್ನುಟ್ಟು ಆಚಮನ ಮಾಡಿ ಪವಿತ್ರವನ್ನು "ಪವಿತ್ರ ವಂತಃ", ಎಂಬ ಮಂತ್ರದಿಂದ ಧಾರಣೆ ಮಾಡಬೇಕು. ಸಪಿಂಡೀ ಸಂಕಲ್ಪ, ಕಲಶಸ್ಥಾಪನೆ, ಸೂಕ್ತಪಠನ, ದಶಗಾಯತ್ರೀ ಜಪ ಶರೀರ ಶುದ್ಧಿಗೆ "ಶಾರೀರ ಮಂತಃ" ಮಂತ್ರಜಪ 'ಅಪವಿತ್ರಃ' ಮಂತ್ರದಿಂದ ಆತ್ಮಪ್ರೋಕ್ಷಣೆ ಅಗ್ನಿಃ ಶುಚಿ ವ್ರತತಮಃ ಏತೋನ್ವಿಂದ್ರಂ" ಮಂತ್ರಗಳಿಂದ ಶ್ರಾದ್ಧಸ್ಥಳ ಶುದ್ಧಿಗೆ ಪ್ರೋಕ್ಷಣೆ ಬ್ರಹ್ಮದಂಡ. ಬ್ರಾಹ್ಮಣರಿಗೆ ಪ್ರದಕ್ಷಿಣೆ, ಅಧಿಕಾರ ಸಂಪತ್ತಿಗೂ ಮುಖ್ಯಕಾಲಕ್ಕೂ ಬೇಡಿಕೆ. ಸಂಕಲ್ಪ. ಶ್ರಾದ್ಧಕರ್ಮ ಮಾಡುವುದಕ್ಕೆ ಬ್ರಾಹ್ಮಣರ ಅನುಜ್ಞೆ.

ಕಾಲಕಾಮಕವಿಶ್ವೇದೇವ ಬ್ರಾಹ್ಮಣನಿಗೆ ಕ್ಷಣ

ನಿಮಿತ್ತಸ್ಥಾನೀಯ (ಪ್ರೇತ) ಬ್ರಾಹ್ಮಣನಿಗೆ ಕ್ಷಣ ಸ್ವಾಗತ

ಪಿತಾಮಹ್ಯಾದಿ ತ್ರಯ ಬ್ರಾಹ್ಮಣರಿಗೆ ಕ್ಷಣ

ವಿಷ್ಣುವಿಗೂ ಆವಾಹನೆ ಮತ್ತು ಸ್ಥಾನವುಂಟು.

ಸರ್ವರಿಗೂ ಪಾದಪ್ರಕ್ಷಾಳನೆ ಆದರೆ ವಿಶ್ವೇದೇವ ಪಿತೃಸ್ಥಾನೀಯ ಬ್ರಾಹ್ಮಣರನ್ನು ಮಣೆಯ ಮೇಲೆ ಕೂಡಿಸಿ ಕಾಲುಗಳನ್ನು ಮುಟ್ಟಿ ತೊಳೆಯಬೇಕು.

ನಿಮಿತ್ತ ಸ್ಥಾನೀಯವನ್ನು ಪಶ್ಚಿಮಾಭಿಮುಖನನ್ನಾಗಿ ನಿಲ್ಲಿಸಿಯೇ ಕಾಲುಗಳನ್ನು ಮುಟ್ಟದೇ ಒಂದೇ ಸಲ ಅವರ ಕಾಲುಗಳ ಮೇಲೆ ನೀರನ್ನು ಹಾಕಿ ಬಿಡಬೇಕು.

ಸರ್ವರೂ ಎಂದರೆ ಮಂಡಲಕ್ಕೆ ಪೂರ್ವದಲ್ಲಿ ವಿಶ್ವೇದೇವರೂ ಪಿತೃ ಬ್ರಾಹ್ಮಣರೂ ಉತ್ತರದಲ್ಲೂ ಕರ್ತನು ಈಶಾನ್ಯದಲ್ಲೂ ಕುಳಿತು ಆಚಮನ ಮಾಡಬೇಕು. ಆದರೆ ಕರ್ತನು ಆಚಮನ ಮಾಡಿದನಂತರ ಬ್ರಾಹ್ಮಣರು ಆಚಮನ ಮಾಡಬೇಕು.

"ನಮ್ಮ ಋಗ್ವೇದಿಗಳಿಗೆ ಇದೇ ನಿಯಮ" ಯಜುರ್ವೇದಿ ಸಾಮವೇದಿಗಳಿಗೆ ಬ್ರಾಹ್ಮಣರ ಆಚಮನಾ ನಂತರ ಕರ್ತೃವು ಮಾಡಬೇಕು.

ಆಚಮನಾ ನಂತರ ಕರ್ತೃವು ಪವಿತ್ರವನ್ನು ಬಿಚ್ಚಿ ಹಾಕುವುದು.

ಪುನಃ ಪವಿತ್ರ ಧಾರಣೆ. ಓಂ ಓಂ ಅದ್ಯಮಯಾ .... ಕರಿಷ್ಯೇ ಎಂದು ಹೇಳಿ ಶ್ರಾದ್ಧಾರಂಭಕ್ಕೆ ಸಂಕಲ್ಪ.

"ಅಪಹತಾ" ಮಂತ್ರದಿಂದ ಶ್ರಾದ್ಧ ಸ್ಥಳಕ್ಕೆಲ್ಲಾ ಎಳ್ಳನ್ನು ಎರಚಬೇಕು. 'ಉದೀರತಾಂ' ಮಂತ್ರದಿಂದ ಪಿತೃಸ್ಥಾನ, ಪ್ರೇತಸ್ಥಾನ ಎಂದರೆ ಭೋಜನಸ್ಥಾನಗಳನ್ನು ಕೂರ್ಚೋದಕದಿಂದ ಶುದ್ಧಿಗೊಳಿಸುವುದು. ಮತ್ತು ವಿಶ್ವೇದೇವ ಸ್ಥಳವನ್ನು ಮಂತ್ರವಿಲ್ಲದೇ ಶುದ್ಧಿಗೊಳಿಸಿ ಮೂರು ತುಂಡು ದರ್ಭೆಗಳಿಂದ ಪಿತೃಸ್ಥಳವನ್ನು ಎರಡು ತುಂಡು ದರ್ಭೆಗಳಿಂದ ದೇವ ಸ್ಥಳವನ್ನೂ ಗುಡಿಸುವುದು.

ಪೈಶಾಚಿಕ ಬಾಧಾದಿಗಳಿಲ್ಲದಂತೆ ಬೀದಿ ಬಾಗಿಲ ಹೊಸ್ತಿಲ ಮೇಲೆ ಮೂರು ತುಂಡು ದರ್ಭೆ ಮತ್ತು ಎಳ್ಳನ್ನು ಇಡಬೇಕು.

ತಾನು ಹೊದೆಯುವ ಬಟ್ಟೆಯ ಕೊನೆಯಲ್ಲಿ ಸ್ವಲ್ಪ ಎಳ್ಳನ್ನು ಕಟ್ಟಿ ತನ್ನ ಉಪವೀತದೊಂದಿಗೆ ಆ ಹೊದೆಯುವ ವಸ್ತ್ರವನ್ನೂ ಸೇರಿಸಿ ಗಂಟು ಹಾಕಿಕೊಂಡಿರಬೇಕು.

ಶುಭಾಶುಭಕರ್ಮಗಳನ್ನು ಮಾಡುವಾಗ ಕರ್ತನು ಯಾವಾಗಲೂ ಸೊಂಟಕ್ಕೆ ಬಟ್ಟೆಯನ್ನು ಸುತ್ತಬಾರದು. ಹಾಗೆ ಸುತ್ತಿ ಕರ್ಮ ಮಾಡಿದರೆ ಮಾಡಿದ ಕರ್ಮವೆಲ್ಲವೂ ನಿಷ್ಫಲವಾಗುವುದೆಂದು ಶಾಸ್ತ್ರವು ಹೇಳುತ್ತದೆ.

"ಉದೀರತಾಂ ತತ್ಸವಿತುಃ ಅಪವಿತ್ರಃ" ಈ ಮಂತ್ರಗಳನ್ನುಚ್ಚರಿಸುತ್ತಾ ಪಾಕಗಳನ್ನು ಕೂರ್ಚದಿಂದ ಪ್ರೋಕ್ಷಿಸುವುದು.

ವಿಶ್ವೇದೇವಾರ್ಚನೆ. ಮಾತಾದಿಗಳ ಅರ್ಚನೆಗೆ ಆರಂಭ ಪ್ರಾಚೀನಾವೀತೀ ಪ್ರೇತ ಸ್ಥಾನೀಯನಿಗೆ ಆಸನ. ಕ್ಷಣ.

ಪಿತಾಮಹ್ಯಾದಿತ್ರಯರಿಗೆ ಆಸನ ಕ್ಷಣ.

ನಿಮಿತ್ತ ಸ್ಥಾನೀಯನ ಮುಂದೆ ಒಂದು ಎಲೆ ದೊನ್ನೆಯ ಪಾತ್ರಾ ಸಾಧನೆ. ಆ ದೊನ್ನೆಯ ಮೇಲೆ ನಾಲ್ಕು ತುಂಡು ದರ್ಭೆಗಳನ್ನಿಡುವುದು. ಆ ದೊನ್ನೆಗೆ ತಿಲ, ಉದಕ, ಗಂಧ, ಕುಶಪತ್ರ ಭೃಂಗರಾಜಗಳನ್ನು ಹಾಕುವುದು.

ಪಿತೃ (ಮಾತೃ) ಸ್ಥಾನೀಯ ಬ್ರಾಹ್ಮಣನ ಎಡಭಾಗದಲ್ಲಿ ಪಾತ್ರಾಸಾಧನೆ.

ವಾಯವ್ಯದಿಂದ ಆಗ್ನೇಯ. ಸಂಪನ್ನಂ ಸ್ವಧಾರ್ಘ್ಯಾಃ.

ಕುಶ ತಿಲಗಳನ್ನು ತೆಗೆದುಕೊಂಡು ಪ್ರೇತತ್ವ ಬ್ರಾಹ್ಮಣನಿಗೆ ಆವಾಹನೆ ಪಿತಾಮಹೀ, ಪ್ರಪಿತಾಮಹೀ, ವೃದ್ಧಪ್ರಪಿತಾಮಹೀಯರ ಆವಾಹನೆ, ಸವ್ಯ. ಸಂಕಲ್ಪ್ಯ, ಅರ್ಘ್ಯ, ಸಂಯೋಜನೆ, ಸವ್ಯ. ಸಂಕಲ್ಪ್ಯ. ಸಂಯೋಜನೆಗೆ ಮುಂಚೆ ಗೋ ಭೂ ಹಿರಣ್ಯ ವಸ್ತ್ರಾದಿದಾನ (ಶಕ್ತ್ಯನುಸಾರ) ಪ್ರೇತ ಪಾತ್ರೆಯ ಮೇಲಿಟ್ಟಿದ್ದ ದರ್ಭೆಗಳಲ್ಲಿ ಮೂರನ್ನು

ತೆಗೆದುಕೊಂಡು ಪ್ರೇತಪಾತ್ರೆಗೆ ಸ್ವಲ್ಪ ಮಧುವನ್ನು ಸೇರಿಸಿ, ಆ ಪ್ರೇತ ಪಾತ್ರೋದಕವನ್ನು ಉದ್ಧರಣೆಯಿಂದ ತುಂಬಿಕೊಂಡು ಮಂತ್ರಗಳನ್ನು ಹೇಳುತ್ತಾ ಪಿತಾಮಹಿಯ ಪಾತ್ರೆಗೆ ಹಾಕುವುದು.

ಇದೇ ರೀತಿ ಪ್ರಪಿತಾಮಹೀ ವೃದ್ಧ ಪ್ರಪಿತಾಮಹಿಯ ಪಾತ್ರೆಗಳಿಗೂ ಹಾಕುವುದು. ಮೂರು ಪಾತ್ರೆಗಳಿಗೂ ಅರ್ಘ್ಯ ಸಂಯೋಜನೆ ಮಾಡಿ ಕೃಷ್ಣ ಕೃಷ್ಣ ನಾರಾಯಣ ನಾರಾಯಣ ಎಂದು ದೇವತಾಧ್ಯಾನವನ್ನು ಮಾಡುವುದು.

ನಿಮಿತ್ತ ಸ್ಥಾನದಲ್ಲಿ ಹಸ್ತೋದಕ. ಅರ್ಘ್ಯ, ಪ್ರೇತ ಪಾತ್ರೆಯನ್ನು ಹಿಂದಕ್ಕೆ ಇಟ್ಟುಕೊಂಡು ಹರಿದುಹಾಕುವುದು.

ಪಿತಾಮಹ್ಯಾದಿಗಳಿಗೆ ಅರ್ಘ್ಯ.

ಪ್ರಾಚೀನಾವೀತೀ, ನಿಮಿತ್ತ ಸ್ಥಾನೀಯನಿಗೆ ಹಸ್ತೋದಕ, ಗಂಧ, ತಿಲ, ಧೂಪದೀಪಗಳಿಲ್ಲ.

ಪಿತಾಮಹ್ಯಾದಿಗಳಿಗೆ ಧೂಪ, ದೀಪ. ತದರ್ಥ ಆಪಃ
ಪ್ರೇತಸ್ಥಾನದಲ್ಲಿ ವಸ್ತ್ರಃ ಪಿತಾಮಹ್ಯಾದಿಗಳಿಗೆ ವಸ್ತ್ರ.
ಪ್ರೇತಸ್ಥಾನೀಯನಿಗೆ ಅಲಂಕಾರಗಳು.
ಪಿತಾಮಹ್ಯಾದಿಗಳಿಗೂ ಅಲಂಕಾರಗಳು.
ಪ್ರೇತನಿಗೆ ಪವಿತ್ರಾರ್ಥವಾಗಿ ಒಂದು ದರ್ಭೆ.
ಪಿತಾಮಹ್ಯಾದಿಗಳಿಗೆ ಪವಿತ್ರಾರ್ಥವಾಗಿ ಮೂರು ಮೂರು ದರ್ಭೆ.

ಸರ್ವತ್ರ ಮಂಡಲಕರಣ. ಪ್ರೇತಸ್ಥಾನದಲ್ಲಿ ತ್ರಿಕೋಣ ಮಂಡಲ ಮಾತ್ರ. ಪಾಣಿ ಹೋಮಕ್ಕಾಗಿ ಎರಡು ದೊನ್ನೆಗಳಲ್ಲಿ ಅನ್ನ ತುಪ್ಪಗಳನ್ನು ತಂದಿಟ್ಟುಕೊಳ್ಳುವುದು. ಸವ್ಯ. ಸಂಕಲ್ಪ್ಯ, ಪ್ರೇತನಿಗೆ ಪಾಣಿ ಹೋಮ. ಸವ್ಯ. ಪಿತಾಮಹ್ಯಾದಿಗಳಿಗೆ ಪಾಣಿ ಹೋಮ ಅಭಿವಾದನೆ.

ಪ್ರಾಚೀನಾವೀತೀ. ಪ್ರೇತ ಭೋಜನ ಪಾತ್ರೆಗೆ ಆ ಪ್ರೇತ ಪಾತ್ರೆಯಲ್ಲಿದ್ದ ಅನ್ನವನ್ನಿಡುವುದು.

ಪ್ರೇತ ಹಸ್ತದ ಪಾಣಿ ಹೋಮದ ಅನ್ನವನ್ನು ತತ್ಕಾಲಕ್ಕೆ ಅಗ್ನಿಯನ್ನು ಉತ್ಪತ್ತಿ ಮಾಡಿ ಆ ಅಗ್ನಿಯಲ್ಲಿ ಆ ಪ್ರೇತ ಬ್ರಾಹ್ಮಣನ ಕೈಯಿಂದಲೇ ಪಾಣಿ ಹೋಮಾನ್ನವನ್ನು ಹಾಕಿಸಬೇಕು. ಬೇರೆ ಯಾರೂ ಆ ಬ್ರಾಹ್ಮಣನಿಂದ ತೆಗೆದು ಅಗ್ನಿಯಲ್ಲಿ ಹಾಕಬಾರದು. ಅದು ದತ್ತಾಪಹಾರ ಅಂದರೆ ದಾನಕೊಟ್ಟು ಪುನಃ ಹಿಂದಕ್ಕೆ ತೆಗೆದುಕೊಳ್ಳುವುದು, ಅಪರಾಧ.

ಪಿತಾಮಹ್ಯಾದಿಗಳ ಪಾಣಿ ಹೋಮಾನ್ನವನ್ನು ತಮ್ಮ ತಮ್ಮ ಎಲೆಗಳಿಗೆ ಹಾಕಿಕೊಳ್ಳುವುದು.

ಹಸ್ತೇಹುತಂತು ನಾಶ್ನೀಯಾದಬ್ಧಂ ಮುಕ್ತ್ವಾಽನು ಮಾಸಿಕಮ್ ।
ಅಗ್ನೌಪ್ರಕ್ಷೇಪಣಂ ಕಾರ್ಯಂ ಸಪಿಂಡೀ ಪ್ರೇತ ಕರ್ಮಸು ॥

ಆಬ್ದಿಕ ಶ್ರಾದ್ಧಗಳಲ್ಲಿಯೂ ಮಾಸಾನು ಮಾಸಿಕ ಶ್ರಾದ್ಧಗಳಲ್ಲಿಯೂ ಪಾಣಿ ಹೋಮ ಮಾಡಿದ ಅನ್ನವನ್ನು ಬ್ರಾಹ್ಮಣರು ತಮ್ಮ ಎಲೆಗಳಲ್ಲಿಯೇ ಹಾಕಿಕೊಂಡು ಭೋಜನ ಮಾಡಬೇಕು.

ಅನ್ನಂ ಪಾಣಿತಲೇ ದತ್ತಂ ಯಚ್ಚಾನ್ನಮುಪಕಲ್ಪಿತಮ್ ।
ಏಕೀಭಾವೇನ ಭೋಕ್ತವ್ಯಂ ಪೃಥಗ್ಭಾವೋ ನ ವಿದ್ಯತೇ ॥

ಭೋಜನ ಪಾತ್ರೆಯಲ್ಲಿ ಬಡಿಸಿರುವ ಅನ್ನದ ಜೊತೆಗೆ ಪಾಣಿ ಹೋಮದ ಅನ್ನವನ್ನೂ ಸೇರಿಸಿಕೊಂಡು ಭೋಜನ ಮಾಡಬೇಕು.

ಅನ್ಯಥಾ ಭಾವಿಸದೇ ಒಂದೇ ಮನಸ್ಸಿನಿಂದ ಭೋಜನ ಮಾಡಬೇಕು.

ವಿಶ್ವೇ ದೇವಸ್ಥಾನೇ ಅನ್ನದತ್ತ, ಪ್ರೇತಸ್ಥಾನೇ ಅನ್ನದತ್ತ, ಪಿತಾಮಹ್ಯಾದಿ ಸ್ಥಾನೇ ಅನ್ನದತ್ತ, ಬ್ರಹ್ಮಾರ್ಪಣ. ಮಧು ಪರಿವೇಷಣ.

ಬ್ರಾಹ್ಮಣರಿಗೆ ಆಪೋಶನ. ಬ್ರಾಹ್ಮಣಭೋಜನ. ತೃಪ್ತಿ ಪ್ರಶ್ನೆ. ವಿಕಿರ. ಉಚ್ಛಿಷ್ಟ ಪಿಂಡ. ಉಚ್ಛಿಷ್ಟ ಶೇಷ ನಿಕ್ಷೇಪ. ಪಿಂಡಚತುಷ್ಟಯದಲ್ಲಿ ಒಂದು ಸಣ್ಣ ಸೌತೇಕಾಯಿ ಯಂತಿರಬೇಕು. ಇನ್ನು ಮೂರು ಮೂಸಂಬಿ ಗಾತ್ರ. ತಿಲೋದಕ. ಪಿಂಡಪ್ರದಾನಕ್ಕೆ ಸಂಕಲ್ಪ. ಅಪಸವ್ಯ. ಪಿಂಡಕ್ಕೆ ದರ್ಭಾಸನ. ತಿಲೋದಕ.

ಪ್ರೇತ ಪಿಂಡ, ತಿಲೋದಕ, ಅಜನಾಭ್ಯಂಜನ ದಕ್ಷಿಣೆ.

ಪಿತಾಮಹ್ಯಾದಿಗಳಿಗೆ ತಿಲೋದಕ ಪಿಂಡ ಪ್ರದಾನ ಸಂಕಲ್ಪ.

ಪಿಂಡಕ್ಕೆ ದರ್ಭಾಸ್ತರಣ ಪಿಂಡತ್ರಯ ನಿಕ್ಷೇಪ. ಸವ್ಯ. ಪಿಂಡಸಂಯೋಜನೆಗೆ ಸಂಕಲ್ಪ. ತದಂಗವಾಗಿ ಗೋದಾನ. ದಶದಾನಾದಿಗಳು, ಕುಶರಜ್ಜುವಿನಿಂದ ಅಥವಾ ಬೆಳ್ಳಿಕಡ್ಡಿಯಿಂದ ಪ್ರೇತ ಪಿಂಡವನ್ನು ಮೂರು ಭಾಗ ಮಾಡುವುದು. ಮೊದಲನೇ ಭಾಗವನ್ನು ತೆಗೆದುಕೊಂಡು ಮಂತ್ರಪುರಸ್ಸರವಾಗಿ ಪಿತಾಮಹಿಯ ಪಿಂಡದೊಳಗೆ ಸೇರಿಸಿಡುವದು.

ಎರಡನೆ ಭಾಗವನ್ನೂ ಪ್ರಪಿತಾಮಹಿಯ ಪಿಂಡದೊಳಗೆ ಸೇರಿಸುವುದು.

ಮೂರನೆಯ ಭಾಗವನ್ನೂ ವೃದ್ಧಪ್ರಪಿತಾಮಹಿಯ ಪಿಂಡದೊಳಗೆ ಸೇರಿಸಿಡುವುದು.

ಇಲ್ಲಿ ವಿಶೇಷವೇನೆಂದರೆ,

ಅರ್ಘ್ಯ ಸಂಯೋಜನೆಯಲ್ಲಿ ಪ್ರೇತ ಪಾತ್ರದ ಜಲವನ್ನು ಪಿತಾಮಹ್ಯಾದಿ ಪಾತ್ರೆಗಳಿಗೆ ಸೇರಿಸುತ್ತದೆ (ಸಂಯೋಜನೆ).

ಪಿಂಡ ಸಂಯೋಜನೆಯಲ್ಲಿ ಕೂಡ ಪ್ರೇತ ಪಿಂಡದ ಮೂರು ಭಾಗಗಳನ್ನೂ ಪಿತಾಮಹ್ಯಾದಿ ಮೂರು ಪಿಂಡಗಳಲ್ಲಿಯೇ ನ್ಯಾಯವಾಗಿ ಸೇರಿಸಬೇಕು. ಇದು ಶಾಸ್ತ್ರೀಯ ಕ್ರಮ.

ಆದರೆ ರೂಢಿಯಲ್ಲಿ ಪಿಂಡಗಳನ್ನು ಒಡೆಯಬಾರದೆಂದು ಹೇಳಿ ಪ್ರೇತಪಿಂಡಗಳಲ್ಲಿ ಪಿತಾಮಹ್ಯಾದಿ ಮೂರು ಪಿಂಡಗಳನ್ನೂ ಸೇರಿಸುವ ಸಂಪ್ರದಾಯವು ಕೆಲವರಲ್ಲಿ ಬಂದಿದೆ.

ಸವ್ಯದಿಂದ ದೇವ ಪಿತೃಪ್ರೇತ ಸ್ಥಾನೀಯ ಬ್ರಾಹ್ಮಣರಿಗೆ ಉತ್ತಾರಪೋಶನ. ಅಪಸವ್ಯದಿಂದ ಹಸ್ತಪ್ರಕ್ಷಾಳನಾನಂತರ ಪ್ರೇತಸ್ಥಾನೀಯರಿಗೆ ಮಂತ್ರವಿಲ್ಲದೇ ತಿಲೋದಕವನ್ನು ಕೊಡುವುದು. "ಅಕ್ಷಯ್ಯ....ಅಭಿರಮ್ಯತಾಂ" ಎಂದು ಪ್ರೇತ ವಿಪ್ರ ವಿಸರ್ಜನೆ. ಪ್ರೇತ ವಿಪ್ರನು ಕೂಡ ನಿಮ್ಮಲ್ಲಿಗೆ ಬಂದಿರುವ ಈ ಪ್ರೇತನೂ ಕೂಡ ಪ್ರೇತತ್ವವನ್ನು ಬಿಟ್ಟು ಪಿತೃಗಳಿಗೆ ಸಮನಾಗಿರುತ್ತಾನೆ. ಆದ್ದರಿಂದ ಇನ್ನು ಮುಂದೆ ನಿಮ್ಮ ಮನೆಯವರೆಲ್ಲರಿಗೂ ಚಿರಂಜೀವಿತ್ವವು ಪ್ರಾಪ್ತಿಯಾಗಿ ಶುಭ ಪರಂಪರೆಗಳುಂಟಾಗಲಿ ಎಂದು ಹೇಳುತ್ತಾ ಹಿಂತಿರುಗಿ ನೋಡದೇ ಮುಂದೆ ಹೊರಟು ಹೋಗುತ್ತಾನೆ.

ಒಂದೆಲೆಯ ದೊನ್ನೆ ಮತ್ತು ಒಂದು ದರ್ಭೆಯ ಪವಿತ್ರಗಳನ್ನು ಹಿಂದಿನಿಂದ ಬಿಚ್ಚಿ ಹರಿದು ಹಾಕಬೇಕು.

ಇಲ್ಲಿಂದ ಮುಂದೆ ಪ್ರೇತ ಶಬ್ದೋಚ್ಚಾರಣೆಯಿಲ್ಲ.

ಸವ್ಯ. ಪ್ರಾಣಾನಾಯಮ್ಯ. ಸಂಕಲ್ಪ್ಯ.

ಪ್ರೇತತ್ವವು ನಿವಾರಣೆಯಾದ ನಂತರ ಮೃತನು ಸುಖವಾಗಿ ವೈತರಣೀ ನದಿಯನ್ನು ದಾಟುವುದಕ್ಕಾಗಿ ಗೋದಾನವನ್ನಾಗಲೀ, ತತ್ಪ್ರತ್ಯಾಮ್ನಾಯ ದಕ್ಷಿಣೆಯನ್ನಾಗಲೀ ದಾನ ಮಾಡಬೇಕು. ನ್ಯಾಯವಾಗಿ ಗೋದಾನವನ್ನೇ ಮಾಡಬೇಕು. ಶಕ್ತಿ ಸಾಮರ್ಥ್ಯಗಳಿದ್ದವನು ಪ್ರತ್ಯಕ್ಷವಾಗಿ ಗೋದಾನವನ್ನೇ ಮಾಡಬೇಕು. ಶಕ್ತಿ ಇಲ್ಲದವನಾದರೆ ತತ್ಪ್ರತ್ಯಾಮ್ನಾಯ ಹಿರಣ್ಯ(ದಕ್ಷಿಣೆ)ವನ್ನಾದರೂ ಕೊಡಬೇಕು.

ಗೋಪೂಜೆ, ಷೋಡಶೋಪಚಾರ ಪೂಜೆ, ಗೋಸೂಕ್ತ ಪಠನ, ಬ್ರಾಹ್ಮಣ ಪೂಜೆ ನಂತರ ಗೋದಾನ.

ಗೋದಾನ ಅಥವಾ ಅದರ ದಕ್ಷಿಣೆಯನ್ನು ಆಗಲೇ ಪುರೋಹಿತರಿಗೆ ದಾನ ಮಾಡುವುದು.

ದಶದಾನಾದಿಗಳ ದಕ್ಷಿಣೆಯನ್ನು ಧಾರೆಯೆರೆದು ಆ ಜಲವನ್ನು ಪಿಂಡಗಳ ಮೇಲೆ ಬಿಟ್ಟು ತೆಗೆದಿಟ್ಟಿದ್ದು ಮಾರನೇ ದಿನ ವೈಕುಂಠ ಸಮಾರಾಧನೆ ದಿನ ದಾನಗಳೊಂದಿಗೆ ಸೇರಿಸಿಕೊಡುವುದು. ಇನ್ನು ಮುಂದೆ ಕಾಲ ಶ್ರಾದ್ಧದಂತೆ ಸಪಿಂಡೀಕರಣ ಶ್ರಾದ್ಧ ಮಾತೃ ಪಿತಾಮಹೀ ಪ್ರಪಿತಾಮಹೀ (ಪಿತೃಪಿತಾಮಹ ಪ್ರಪಿತಾಮಹ) ಎಂದು ಹೇಳಿ ಶ್ರಾದ್ಧವನ್ನು ಮುಗಿಸಬೇಕು.

ಇಲ್ಲಿಗೆ ಸಪಿಂಡೀಕರಣ ಶ್ರಾದ್ಧವು ಮುಗಿಯಿತು.

ಈ ಶ್ರಾದ್ಧಾನಂತರ ಕರ್ತನು ಪಿಂಡಗಳನ್ನು ಹೊರಗಡೆ ಜಲದಲ್ಲಿ ಬಿಟ್ಟು ಪಾತ್ರೆಗಳನ್ನು ತೊಳೆದು ತಾನೂ ಸ್ನಾನ ಮಾಡಿ ಮನೆಗೆ ಬಂದು ಬಾಗಿಲಲ್ಲಿಟ್ಟಿರುವ ಒನಕೆಯ ಮೇಲೆ ಕುಳಿತು ಸ್ವಲ್ಪ ಮಾತ್ರ ತೊವ್ವೆಯನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡಬೇಕು. ಮನೆಯ ಯಜಮಾನಿಯೂ ಆಗ ಪುನಃ ಸ್ನಾನವನ್ನು ಮಾಡಬೇಕು. ಶುದ್ಧವಸ್ತ್ರಗಳನ್ನು ಧರಿಸಿ ಆಚಮನ ಮಾಡಿ ನವ ಯಜ್ಞೋಪವೀತವನ್ನು ಧರಿಸಿ ಪುಣ್ಯಾಹ ಮಾಡಿ, ನಿರೀಕ್ಷಿತಾಜ್ಯ ದಾನ ಮಾಡಬೇಕು. ಮನೆಯ ಮುಂದಿನ ಬಾಗಿಲಿಗೆ ಮಾತ್ರ ತೋರಣ ಕಟ್ಟಿರಬೇಕು. ಬಾಗಿಲಿಗೆ ರಂಗೋಲಿಯನ್ನಿಟ್ಟಿರಬೇಕು. ಪುರೋಹಿತರೇ ಆರತಿ ಮಾಡುತ್ತಾರೆ. ಒಳಗಡೆ ಬರುವಾಗ ಮಡಿಕೋಲು ಮತ್ತು ಮಣಿಗಳನ್ನು ನೋಡಬೇಕು. ಬಂಧುಗಳು ವಸ್ತ್ರಗಳನ್ನು ಕೊಡುತ್ತಾರೆ. ಇದೇ ಶುಭಸ್ವೀಕಾರ. ನಂತರ ಭೋಜನಾದಿಗಳು.

ಸಪಿಂಡೀಕರಣ ಶ್ರಾದ್ಧದ ದಿನ ಶ್ರಾದ್ಧಕ್ಕೂ ಮನೆಯವರೆಲ್ಲರ ಭೋಜನಕ್ಕೂ ಒಂದೇ ಅಡಿಗೆಯಾಗಬೇಕು. ಅರ್ಧ ಸೇರಕ್ಕಿ ಅನ್ನ, ಪಾಯಸ, ಮತ್ತು ಭಕ್ಷ್ಯಗಳನ್ನು ಮಾತ್ರ ಶ್ರಾದ್ಧಕ್ಕೆ ಮಾಡಿಸಬೇಕು. ಇದೇ ಮುಖ್ಯ ಶ್ರಾದ್ಧ. ಉಳಿದ ಅಡಿಗೆಗಳನ್ನೆಲ್ಲಾ ಒಳಗೆ ಮಾಡಿಸಿ ಬ್ರಾಹ್ಮಣ ಭೋಜನಕ್ಕೆ ತಕ್ಕಷ್ಟು ಪಡೆದುಕೊಳ್ಳಬೇಕು. ಪಿತೃಶೇಷವೆಂದರೆ ಇಲ್ಲಿ ಶ್ರಾದ್ಧದಲ್ಲಿ ನೈವೇದ್ಯ ಮಾಡದಿದ್ದರೂ ಬ್ರಾಹ್ಮಣರು ಭೋಜನ ಮಾಡಿದ ಶೇಷವಾದ್ದರಿಂದ ಇದನ್ನೇ ಪಿತೃಶೇಷವೆಂದು ಭಾವಿಸಿ ಸರ್ವರೂ ಭೋಜನ ಮಾಡಬೇಕು.

ಆದರೆ ಈ ಸಂಪ್ರದಾಯವು ಬಹು ಜನರಲ್ಲಿಲ್ಲ. ಕೆಲವಾರು ಜನಗಳಲ್ಲಿ ಈಗಲೂ ನಡೆಯುತ್ತಿದೆ.

ಅಡಿಗೆಯೆಲ್ಲಾ ಆಗಿ ಶ್ರಾದ್ಧಾರಂಭ ಮಾಡುವುದೆಂದರೆ ಕಾಲವಿಳಂಬವಾಗುತ್ತದೆಂದು ಕ್ಲುಪ್ತವಾದ ಪಾಕವನ್ನು ಶ್ರಾದ್ಧಸ್ಥಳದಲ್ಲೇ ಮಾಡಿ ಮುಗಿಸುತ್ತಿರುತ್ತಾರೆ.

ದೇವಪಿತ್ರೋರ್ವಿವಾದಃ

ಸರ್ಗಾದೌ ಪಿತೃದೇವಾನಾಂ ಪರಸ್ಪರ ಮಭೂತ್ಕಿಲ। ವಿವಾದ ಸ್ಸುಮಹಾನುಗ್ರೋ ಹವ್ಯಕವ್ಯ ಜಿಘೃಕ್ಷಯಾ॥ ಸೃಷ್ಟ್ಯಗ್ರೇ ಪ್ರಾತರೇವ ದ್ವೇ ಕರ್ಮಣಾ ಪಿತೃದೈವಿಕೇ। ಕಲ್ಪಿತೇಽವರ್ತತಾಂ ತದ್ವತ್ ನರಲೋಕೇ ದ್ವಿಜಾತಿಭಿಃ। ತಾವದ್ದೇವಾಶ್ಚ ಪಿತರಃ ಪರಸ್ಪರ ಮುದಾಯುಧಾಃ। ವಯಮಗ್ರೇ ಗ್ರಹೀಷ್ಯಾಮೋ ಹವ್ಯಂ ಕವ್ಯಮಿತಿಸ್ಮಹ। ಅಸ್ಮಾಕಮಗ್ರೇ ವಾಽಸ್ಮಾಕಮಗ್ರೇ ಇತ್ಯಭ್ಯಸೂಯಿರೇ। ಅನ್ಯೋನ್ಯಂ ಪಿತರೋ ದೇವಾ ಶ್ಚಾನ್ವ ಧಾವಂತ ಮಾನವಾನ್॥ ತತೋ ಬ್ರಹ್ಮಾಣ ಮಾಜಗ್ಮುಃ ದೇವರ್ಷಿ ಪಿತೃಮಾನವಾಃ। ಮರ್ಯಾದಾ ಸ್ಥಾಪನಾರ್ಥಾಯ ಸರ್ಗಾದೌ ಹವ್ಯಕವ್ಯಯೋಃ। ಸಾಂತ್ವಯಿತ್ವಾ ಪಿತೄನ್ ಬ್ರಹ್ಮಾ ತೇಷಾಂ ಸಾಯಂ ದದೌ ಪ್ರಭುಃ। ಪ್ರಾತಃಕಾಲಃ ಸುರಾಣಾಂ ಚ ಮನುಷ್ಯಾಣಾಂ ಚ ಮಧ್ಯಮಮ್। ತತೋ ನ ಸಾಯಮೈಚ್ಛಂತಃ ಪಿತರಃ ಸಾಂತ್ವಿತಾ ಅಪಿ। ರಾಕ್ಷಸಾನಾಂ ತು ಕಾಲಂ ಚ ಪ್ರಾತರ್ದೈವಂ ವಿಸೃಜ್ಯತು॥ ತಂ ದೇವಾ ಅಪಿ ನೈಚ್ಛಂತ ಪ್ರಭುಣಾ ಭೃಶ ಚೋದಿತಾಃ।

ತತೋಽಧಿಕೃತ್ಯ ತಾನ್ ಬ್ರಹ್ಮಾ ಸಮತ್ವಮಿವ ಕಲ್ಪಯನ್ । ತಾನುವಾಚ ಪಿತೄನ್ ದೇವಾನ್ ಬ್ರಹ್ಮಾ ಪ್ರೀತಮನಾ ಇವ । ಭೋ ಭೋಃ ಶೃಣಧ್ವಂ ಹೇ ದೇವಾಃ ಪಿತರಶ್ಚ ವಚೋ ಮಮ । ಯಸ್ಯಾಮಿನೋಸ್ತಮಭ್ಯೇತಿ ತೇಚ ತಸ್ಯಾಂ ನಿರೋತ್ತಮಾಃ । ತಿಥ್ಯಾಂ ಕವ್ಯಂ ಪ್ರದಾಸ್ಯಂತಿ ಪಿತೄಣಾಂ ತೃಪ್ತಿಕಾರಕಮ್ । ತತ್ಕಾಲಸ್ಯಾಸುರತ್ವಾತ್ತು ತಸ್ಯಾಂ ಚೈವ ಪರಾಹ್ಣಿಕೇ । ಭೋಕ್ಷ್ಯಂತಿ ಪಿತರಃ ಕವ್ಯಂ ಪ್ರಾಕ್ಸಾಯಂ ಕುತುಪಾದಿಕಂ ॥ ಸಾಮಾನ್ಯಃ ಸರ್ವಭೂತಾನಾಂ ರುದ್ರಾತ್ಮಾ ಹುತ ಭುಕ್ಕವಿಃ । ಸಾಯಾದ್ಯರ್ಚ್ಯೋಽ ಮಹಾಪ್ರಜ್ಞೈಃ ಬ್ರಾಹ್ಮಣಾದೇರ್ಭವಿಷ್ಯತಿ ॥ ಸಹಾಯಾರ್ಥಂ ಪಿತೄಣಾಂ ಚ ವಿಶ್ವೇದೇವಾ ಮಹಾಬಲಾಃ । ಭೀತಾನಾಮಗ್ರ ಭೋಕ್ತಾರೋ ಭವಿಷ್ಯಂತ್ಯ ನಲಸ್ತತಃ ॥ ವಿಶ್ವೇದೇವೈರಗ್ನಿನಾ ಚ ಸಹಿತಾ ವಸುರಾನ್ ಪಿತೄನ್ । ದಾಕ್ಷ್ಯಂತಿ ? ನೇಕ್ಷಿತುಮಪಿ ಕಿಂ ಪುನಸ್ತೇ ಪ್ರಬಾಧಿತುಮ್ ॥

ಇದರ ತಾತ್ಪರ್ಯವು ಮುಂದಿನ ಪುಟದಲ್ಲಿ ವಿವೃತವಾಗಿದೆ.

ಪಿತೃಶ್ರಾದ್ಧ

ಯಜ್ಞಾಚರಣೆಯಿಂದ ದೇವತೆಗಳಿಗೆ ಹವಿಸ್ಸನ್ನರ್ಪಿಸಿ ಅವರ ಅನುಗ್ರಹಕ್ಕೆ ಪಾತ್ರರಾಗುವಂತೆ ಶ್ರಾದ್ಧಾದಿಗಳನ್ನಾಚರಿಸಿ ಪಿತೃಗಳಿಗೆ ತಿಲೋದಕ ಪಿಂಡಾದಿಗಳನ್ನರ್ಪಿಸಿ ಅವರ ಅನುಗ್ರಹಕ್ಕೆ ಪಾತ್ರರಾಗುವದೂ ಒಂದೇ ಆಗಿದೆ. ಐಹಿಕವಾದ ಸಂಪತ್ತುಗಳನ್ನು ಪಡೆಯಲು ದೇವತೆಗಳನ್ನು ಪ್ರಾರ್ಥಿಸುವಂತೆಯೇ ಪಿತೃಗಳನ್ನೂ ಪ್ರಾರ್ಥಿಸಬೇಕು. ಇಂತಹ ಪ್ರಾರ್ಥನೆಯು ಒಂದೊಂದು ಸಂದರ್ಭದಲ್ಲಿ ಒಂದೊಂದು ವಿಧವಾಗಿರುತ್ತದೆ. ಮರಣ ಕಾಲದಲ್ಲಿ ಆಚರಿಸತಕ್ಕ ಶ್ರಾದ್ಧಾದಿಕರ್ಮಗಳು ಪರ್ವಕಾಲಗಳಲ್ಲಿ ಅರ್ಪಿಸುವ ತರ್ಪಣಾದಿಗಳು ಉಳಿದ ವಿಶೇಷ ದಿವಸಗಳಲ್ಲಿ ಅರ್ಪಿಸುವ ಪೂಜೆಗಳು ಇವಲ್ಲದೇ ವಿವಾಹಾದಿ ಶುಭ ಕರ್ಮಗಳಲ್ಲಿಯೂ ಪಿತೃಪೂಜೆಯನ್ನು ನಡೆಸಲೇಬೇಕಾಗುತ್ತದೆ. ಆದರೆ ಕೆಲವು ಸನ್ನಿವೇಶಗಳಲ್ಲಿ ಅಂಗಿರಸ್ಸೇ ಮುಂತಾದ ಪೂರ್ವ ಪಿತೃಗಳೊಡನೆ ಪಿತೃಪಿತಾಮಹ ಪ್ರಪಿತಾಮಹರಿಗೆ ಆಹ್ವಾನವಿರುತ್ತದೆ. ಕಲ್ಯಾಣಕಾಲಗಳಲ್ಲಿ ಆಹ್ವಾನ ಮಾಡುವಾಗ ಪಿತೃಗಳನ್ನು ನಾಂದೀಮುಖರೆಂದು ಆಹ್ವಾನಿಸಲಾಗುತ್ತದೆ. (ಸಂತೋಷವಾದ ಮುಖವುಳ್ಳವರೆಂದರ್ಥ.) ಹೀಗೆ ಪಾರ್ವಣಶ್ರಾದ್ಧ ನಾಂದೀಶ್ರಾದ್ಧ ಪೂರ್ತಶ್ರಾದ್ಧ ಇತ್ಯಾದ್ಯನೇಕ ಕರ್ಮಗಳಿಂದ ಪಿತೃಗಳಿಗೆ ತೃಪ್ತಿಯುಂಟಾಗುತ್ತದೆಂದು ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಆದರೆ ಕೆಲವು ಕರ್ಮಗಳು ವೇದಗಳಲ್ಲಿಯೇ ಉಕ್ತವಾಗಿವೆ. ಇನ್ನು ಕೆಲವು ವೇದಗಳಲ್ಲಿ ಸೂಚಿತವಾಗಿ ಶ್ರೌತಸೂತ್ರಾದಿಗಳಲ್ಲಿ ನಿರ್ದಿಷ್ಟವಾಗಿವೆ.

ಶತಪಥ ಬ್ರಾಹ್ಮಣ ಮಂತ್ರ

ಪ್ರಜಾಪತಿಂ ವೈ ಭೂತಾನ್ಯುಪಾಸೀದನ್ । ಪ್ರಜಾ ವೈ ಭೂತಾನಿ ವಿ ನೋಧೇಹಿ ಯಥಾ ಜೀವಾಮೇತಿ ತತೋ ದೇವಾಯಜ್ಞೋಪವಿತಿನೋ ಭೂತ್ವಾ

ದಕ್ಷಿಣಂಜಾನ್ವಾಚ್ಯೋಪಾಸೀದಂಸ್ತಾನಬ್ರವೀದ್ಯಜ್ಞೋ ವೋऽನ್ನಮಮೃತತ್ವಂ ವ ಊರ್ಗ್ವಃ ಸೂರ್ಯೋ ವಾ ಜ್ಯೋತಿರಿತಿ ॥

ಒಂದು ಸಲ ಪ್ರಜಾಪತಿಯಿಂದ ಸೃಷ್ಟರಾದ ಸಕಲಭೂತಗಳೂ ಪ್ರಜಾಪತಿಯ ಹತ್ತಿರ ಬಂದು "ತಂದೆಯೇ ನಾವು ಜೀವಿಸುವ ಕ್ರಮವನ್ನು ತಿಳಿಸು" ಎಂದು ಪ್ರಾರ್ಥಿಸಿದರು. ಆ ಸಮಯದಲ್ಲಿ ದೇವತೆಗಳೂ, ಪಿತೃಗಳೂ, ಮಾನವರೂ ಉಳಿದ ಪ್ರಾಣಿಗಳೂ ಇದ್ದರು. ಅವರಲ್ಲಿ ದೇವತೆಗಳು ಮೊದಲು ಯಜ್ಞೋಪವೀತವನ್ನು ಧರಿಸಿ ತಮ್ಮ ಬಲಗಡೆಯ ಮೊಣಕಾಲನ್ನು ನೆಲಕ್ಕೂರಿದವರಾಗಿ ಪ್ರಜಾಪತಿಯನ್ನು ಸಮೀಪಿಸಿದರು. ಆಗ ಪ್ರಜಾಪತಿಯು ದೇವತೆಗಳನ್ನುದ್ದೇಶಿಸಿ, "ಯಜ್ಞವೇ ನಿಮ್ಮ ಅನ್ನವು, ಅಮೃತತ್ವವೇ ನಿಮ್ಮ ರಸ. ಸೂರ್ಯನೇ ನಿಮ್ಮ ತೇಜಸ್ಸು" ಎಂದು ತಿಳಿಸಿದನು.

ಪಿತೃಗಳು ಪ್ರಾಚೀನಾವೀತರಾಗಿ ತಮ್ಮ ಎಡಮೊಣಕಾಲನ್ನು ನೆಲಕ್ಕೂರಿಕೊಂಡು ಪ್ರಜಾಪತಿಯನ್ನು ಸಮೀಪಿಸಲು ಪ್ರಜಾಪತಿಯು "ನಿಮಗೆ ಪ್ರತಿ ಮಾಸವೂ ಅನ್ನವು ಲಭಿಸಲಿ, ನಿಮಗೆ ಅರ್ಪಿಸುವ ಸ್ವಧಾಸಂಜ್ಞಕವಾದ ಅನ್ನವೇ ನಿಮ್ಮ ಮನೋವೇಗದ ಮೂಲವಾಗಿರಲಿ. ಚಂದ್ರನೇ ನಿಮ್ಮ ಜ್ಯೋತಿಯು" ಎಂದು ಅನುಗ್ರಹಿಸಿದನು.

ಪಿತೃಯಜ್ಞವನ್ನಾಚರಿಸಲು ಎರಡು ಕಾರಣಗಳಿರುತ್ತವೆ. ಅಸುರರು ಯಜಮಾನನಿಗೆ ಸೇರಿದ ಯಾವ ಜನರನ್ನೂ ಹಿಂಸಿಸುವುದಿಲ್ಲ ಮತ್ತು ಎರಡನೆಯದಾಗಿ ದೇವತೆಗಳೂ ಸಹ ಈ ಯಜ್ಞವನ್ನಾಚರಿಸಿ ಪೂಜಿಸಿದ್ದಾರೆ. ಮತ್ತು ಈ ಯಜ್ಞವನ್ನಾಚರಿಸಿ ದೇವತೆಗಳು ಪಿತೃಗಳಿಗೆ ಯಾವ ಭಾಗವನ್ನು ನಿರ್ದೇಶಿಸಿ ಅರ್ಪಿಸಿದರೋ ಅದೇ ಭಾಗವನ್ನು ಯಜಮಾನನೂ ಅರ್ಪಿಸಬೇಕು. ಹೀಗೆ ಮಾಡುವುದರಿಂದ ದೇವತೆಗಳಿಂದ ಪುನಃ ಬದುಕಿಸಲ್ಪಟ್ಟ ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವುದೇ ಅಲ್ಲದೇ ಅವರಿಗೆ ಇನ್ನೂ ಉತ್ತಮವಾದ ಗತಿಯನ್ನು ಉಂಟುಮಾಡಿಕೊಟ್ಟಂತಾಗುತ್ತದೆ. ಮತ್ತು ತನ್ನ ಇತರ ಕರ್ಮಗಳಲ್ಲಿ ಯಾವ ಲೋಪ ದೋಷಗಳಿದ್ದರೂ ಸಹ ಈ ಕರ್ಮಾಚರಣೆಯಿಂದ ಅದು ಸರಿಹೋಗುತ್ತದೆ. ಈ ಎಲ್ಲಾ ಕಾರಣಗಳಿಂದಲೂ ಅವಶ್ಯವಾಗಿ ಪಿತೃಯಜ್ಞವನ್ನು ಆಚರಿಸಬೇಕು.

ಅಂಗಿರೋಭಿರಾಗಹಿ ಯಜ್ಞೇಯೇಭಿರ್ಯಮ ವೈ ರೂಪೈರಿಹ ಮಾದಯಸ್ವ ।

ವಿವಸ್ವಂತಂ ಹುವೇ ಯಃ ಪಿತಾ ತೇऽಸ್ಮಿನ್ ಯಜ್ಞೇ ಬರ್ಹಿಷ್ಯಾ ನಿಷದ್ಯ ॥

ಎಲೈ ಯಮರಾಜನೇ ನಾನಾರೂಪಗಳನ್ನು ಧರಿಸಿದರೂ ಶ್ರೇಷ್ಠವಾದ ಪೂಜೆಗೆ ಯೋಗ್ಯರಾದವರು ಅಂಗಿರಾಸಂಜ್ಞಕರೂ ಆದ ಪಿತೃಗಳೊಡನೆ ನಮ್ಮ ಈ ಪಿತೃಯಜ್ಞಕ್ಕೆ ದಯಮಾಡು. ನಿನ್ನ ತಂದೆಯಾದ ವಿವಸ್ವಂತನನ್ನೂ ಈ ಯಜ್ಞಕ್ಕೆ ದಯಮಾಡಬೇಕೆಂದೂ ಪ್ರಾರ್ಥಿಸುತ್ತೇನೆ.

ಮಾತಲೀ ಕವ್ಯೈರ್ಯಮೋ ಅಂಗಿರೋಭಿರ್ಬೃಹಸ್ಪತಿರ್ಋಕ್ವಭಿರ್ವಾ

ವೃಧಾನಃ। ಯಾಂಶ್ಚದೇವಾ ವಾವೃಧುರ್ಯೇ ಚ ದೇವಾನ್ ಸ್ವಾಹಾನ್ಯೇ ಸ್ವಧಯಾನ್ಯೇಮದಂತಿ ॥

ಮಾತಲಿಯಿಂದ ಕೂಡಿದ ಇಂದ್ರನು ಕವ್ಯಭಾಗಿಗಳಾದ ಪಿತೃಗಳೊಡನೆ ಪುಷ್ಟಿಯನ್ನು ಹೊಂದಲಿ. ಅಂಗಿರಸ್ಸುಗಳೊಡನೆ ಯಮನೂ, ಋಕ್ವರೊಡನೆ ಬೃಹಸ್ಪತಿಯೂ, ಪುಷ್ಟಿಯನ್ನು ಹೊಂದಲಿ. ಯಾವ ಇಂದ್ರಿಯಗಳನ್ನು ಪಿತೃಗಳು ಪುಷ್ಟರಾಗುವಂತೆ ಮಾಡುವರೋ ಆ ಇಂದ್ರಾದಿ ದೇವತೆಗಳು ಸ್ವಾಹಾಕಾರ ಪೂರ್ವಕವಾಗಿ ಅರ್ಪಿಸಿದ ಹವಿಸ್ಸುಗಳಿಂದ ತೃಪ್ತರಾಗುತ್ತಾರೆ. ಯಾವ ಪಿತೃಗಳನ್ನು ಇಂದ್ರಾದಿ ದೇವತೆಗಳು ಪುಷ್ಟಿಗೊಳಿಸುವರೋ ಅದೇ ಪಿತೃಗಳು ಸ್ವಧಾರೂಪವಾದ ಹವಿಸ್ಸುಗಳಿಂದ ತೃಪ್ತಿಯನ್ನು ಹೊಂದುತ್ತಾರೆ.

ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ ಸದಸ್ಸದಸ್ಸದತ ಸುಪ್ರಣೀತಯಃ। ಅತ್ತಾ ಹವೀಂಷಿ ಪ್ರಯತಾನಿ ಬರ್ಹಿಷ್ಯಥಾ ರಯಿಂ ಸರ್ವವೀರಂ ದಧಾತನ ॥

ಅಗ್ನಿಷ್ವಾತ್ತ ಸಂಜ್ಞಕರಾದ ಎಲೈ ಪಿತೃಗಳೇ, ನಮ್ಮ ಈ ಪಿತೃಯಜ್ಞಕ್ಕೆ ದಯಮಾಡಿರಿ. ನಿಮ್ಮ ನಿಮ್ಮ ನಿರ್ದಿಷ್ಟವಾದ ಸ್ಥಾನದಲ್ಲಿ ಕುಳಿತುಕೊಳ್ಳಿರಿ. ದರ್ಭಾಸನದಲ್ಲಿ ಅರ್ಪಿತವಾದ ಹವಿಸ್ಸುಗಳನ್ನು ಸೇವಿಸಿರಿ. ನಮಗೆ ಸಕಲವಾದ ಸಂಪತ್ತುಗಳನ್ನು ಒದಗಿಸಿ ನಮಗೆ ಸಂಪತ್ತನ್ನುಂಟುಮಾಡಿರಿ.

ಆಚ್ಯಾ ಜಾನು ದಕ್ಷಿಣತೋ ನಿಷದ್ಯೇಮಂ ಯಜ್ಞಮಭಿ ಗೃಣೀತ ವಿಶ್ವೇ। ಮಾ ಹಿಂಸಿಷ್ಟ ಪಿತರಃ ಕೇ ನ ಚಿನ್ನೋ ಯದ್ವ ಆಗಃ ಪುರುಷತಾ ಕರಾಮ ॥

ಎಲೈ ಪಿತೃಗಳೇ, ಬಲಭಾಗದಲ್ಲಿ ನಿಮ್ಮ ಎಡಮೊಣಕಾಲುಗಳನ್ನು ಕೆಳಕ್ಕೆ ಮಾಡಿ ಕುಳಿತುಕೊಳ್ಳಿರಿ. ನಮ್ಮ ಯಜ್ಞದಲ್ಲಿದ್ದುಕೊಂಡು ನಮಗೆ ಯಾವ ತೊಂದರೆಯನ್ನೂ ಮಾಡಬೇಡಿರಿ. ಮಾನವರಿಗೆ ಸಹಜವಾದ ಅಜ್ಞಾನದಿಂದಲೂ ಅಶಕ್ತತೆಯಿಂದಲೂ ನಾವು ಯಾವುದಾದರೂ ಪಾಪಕರ್ಮಗಳನ್ನಾಚರಿಸಿದಲ್ಲಿ ಅದನ್ನು ನಾಶಮಾಡಿ ನಮ್ಮನ್ನು ಕ್ಷಮಿಸಿ ಸಕಲ ಶ್ರೇಯಸ್ಸುಂಟಾಗುವಂತೆ ಅನುಗ್ರಹಿಸಿರಿ" ಎಂದು ದಿವ್ಯತ್ವವನ್ನು ಪಡೆದ ಪಿತೃಗಳನ್ನು ಸ್ತುತಿಸಿ ಪ್ರಾರ್ಥಿಸಿದೆ.

ಒಬ್ಬ ಮನುಷ್ಯನು ಮೃತನಾದ ಮೇಲೆ ಅವನನ್ನು ಪರಲೋಕಕ್ಕೆ ಕರೆದುಕೊಂಡು ಹೋಗುವುದೆಂದರೇನು? ಶರೀರವೇ ನಾಶವಾದಾಗ ಯಾರನ್ನು ಕರೆದುಕೊಂಡು ಹೋಗಬೇಕು? ಎಂಬ ಸಂಶಯವು ತಲೆದೋರುವುದು.

ಇದಕ್ಕೆ ಈ ರೀತಿ ಸಮಾಧಾನವುಂಟು. ಏನೆಂದರೆ ಮನುಷ್ಯನು ಮೃತನಾದ ಮೇಲೆ ಅವರ ಶರೀರ ವ್ಯಾಪಾರಗಳೆಲ್ಲಾ ನಿಂತುಹೋಗಿ ಶರೀರವು ನಿಶ್ಚೇಷ್ಟಿತವಾಗುತ್ತದೆ. ಅದು

ಕ್ರಮೇಣ ಪಂಚಭೂತಗಳಾದ ಪೃಥಿವ್ಯಾದಿಗಳಲ್ಲಿ ಸೇರಿ ಹೋಗುವುದು. ಎಂದರೆ ಪಂಚಭೂತಗಳ ಸಂಯೋಗದಿಂದಲೇ ಉಂಟಾದ ಶರೀರವು ಪುನಃ ಪಂಚಭೂತ ಗಳಲ್ಲಿಯೇ ಲೀನವಾಗುವುದು. ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳೂ ಮನುಷ್ಯನ ಶರೀರದಲ್ಲಡಗಿರುವುದು ಸಹಜವೇ ಆಗಿದೆ. ಚರ್ಮ, ಮಾಂಸ, ಮೂಳೆ, ಉಗುರು, ಮೊದಲಾದ ಘಟ್ಟಿ ಪದಾರ್ಥಗಳು ಪೃಥ್ವಿಯ ಅಂಶಗಳು. ಮರಣಾನಂತರ ಅವು ಮಣ್ಣಿನಲ್ಲಿಯೇ ಸೇರಿ ಮಣ್ಣಾಗುವುದು. ರಕ್ತ, ಜೊಲ್ಲು, ಮೊದಲಾದ ದ್ರವವಸ್ತುಗಳು ಅಪ್ಪಿನ (ನೀರಿನ) ಅಂಶವಾದ್ದರಿಂದ ಅವು ಜಲದಲ್ಲಿ ಅಡಕವಾಗುವುವು. ಶರೀರದಲ್ಲಿ ಮರಣ ಪರ್ಯಂತವಿರುವ ಶಾಖವು ಅಗ್ನಿಯಲ್ಲಿ ಬೆರೆಯುವುದು. ಆದ್ದರಿಂದ ಮೃತ ಶರೀರದಲ್ಲಿ ಶಾಖವಿರುವುದಿಲ್ಲ. ಮರಣಾನಂತರ ಉಚ್ಛ್ವಾಸ ನಿಶ್ವಾಸ ರೂಪವಾದ ವಾಯುಸಂಚಾರವು ನಿಂತು ಹೋಗಿ ವಾಯುಗಳು ವಾಯುತತ್ವದಲ್ಲಿ ಎಂದರೆ ಬಾಹ್ಯವಾಯುವಿನಲ್ಲಿ ಸೇರಿ ಉಸಿರಾಟವು ನಿಂತುಹೋದ ಮೇಲೆ ಇದೇ ಮರಣಕ್ಕೆ ಮುಖ್ಯವಾದ ಚಿಹ್ನೆಯೆಂದು ಗೊತ್ತಾಗಿದೆ. ಇನ್ನು ಆಕಾಶ ಅಥವಾ ಅವಕಾಶವು ಕಣ್ಣಿಗೆ ಕಾಣುವ ವಸ್ತುವಲ್ಲವಾದ್ದರಿಂದ ಅದು ಬಾಹ್ಯಾಕಾಶದಲ್ಲಿ ಲೀನವಾಗಿ ಯಾರಿಗೂ ಗೋಚರವಾಗುವುದಿಲ್ಲ. ಈ ರೀತಿ ಮೃತಶರೀರದ ಭಾಗಗಳೆಲ್ಲಾ ಆಯಾ ತತ್ತ್ವಗಳಲ್ಲಿ ಸೇರಿಹೋದಮೇಲೆ ಉಳಿಯುವ ವಸ್ತುವೆಂದರೆ ಪುರುಷನು ಜೀವಿಸುತ್ತಿದ್ದ ಕಾಲದಲ್ಲಿ ಅವನ ಚಕ್ಷುರಾದಿ ಜ್ಞಾನೇಂದ್ರಿಯಗಳ ವ್ಯವಹಾರಗಳನ್ನು ಗಮನಿಸುತ್ತಾ ಇದ್ದ ಚೇತನಾತ್ಮಕವಾದ ವಸ್ತುವೊಂದಿದ್ದಿತು. ಚೇತನಾತ್ಮಕವಾದ ವಸ್ತುವೆಂದರೆ ಇಂದ್ರಿಯ ಗೋಚರವಾದ, ಪಾರ್ಥಿವ ವಸ್ತುವಲ್ಲ. ಶರೀರವು ನಾಶವಾದರೂ ತಾನು ಮಾತ್ರ ಶಾಶ್ವತವಾಗಿರುವ ಆತ್ಮವೊಂದೇ ಶಾಶ್ವತವಾದುದು. ಈ ಆತ್ಮನಿಗೆ ಪಾರ್ಥಿವ ಶರೀರವು ನಾಶವಾದ ಮೇಲೆ ಸೂಕ್ಷ್ಮವಾದ ಮತ್ತೊಂದು ಶರೀರವು ಪ್ರಾಪ್ತವಾಗುವುದು. ಪ್ರಾರಂಭದಲ್ಲಿ ಇದನ್ನು ಪ್ರೇತಶರೀರವೆಂದು ಕರೆಯುವರು. ಇದು ಅತಿ ಸೂಕ್ಷ್ಮವಾದ್ದರಿಂದ ಬಾಹ್ಯ ಚಕ್ಷುಸ್ಸಿನಿಂದ ನೋಡಲು ಸಾಧ್ಯವಾಗುವುದಿಲ್ಲ. ಈ ಸೂಕ್ಷ್ಮಶರೀರದಲ್ಲಿ ಕರ್ಮೇಂದ್ರಿಯಗಳಿಲ್ಲದಿದ್ದರೂ ಜ್ಞಾನೇಂದ್ರಿಯ ಅಂಶಗಳಿರುವುವು ಎಂದರೆ ಸುಖ ದುಃಖಾದಿಗಳ ಅನುಭವವಾಗುವುದು. ಮನುಷ್ಯನು ತಾನು ಜೀವಿಸಿದ್ದ ಕಾಲದಲ್ಲಿ ಅನುಭವಿಸಿದ ತನ್ನಲ್ಲಿನ ಬಂಧು ಬಾಂಧವರಲ್ಲಿನ ಪ್ರೀತಿ, ದ್ವೇಷ, ಸುಖ, ದುಃಖಗಳ ವಾಸನೆಯು ಈ ದೇಹಕ್ಕೆ ಇದ್ದೇ ಇರುವುದು. ಆತ್ಮನು ಮೃತಶರೀರಕ್ಕೆ ಮಾಡುವ ಅಪರ ಕರ್ಮಾದಿಗಳು ಸಮಾಪ್ತಿಯಾಗುವವರೆಗೆ ಈ ಪ್ರೇತಶರೀರದಲ್ಲಿದ್ದು ಅನಂತರ ತನ್ನ ಕರ್ಮಾನುಸಾರವಾಗಿ ಬೇರೆ ಲೋಕಕ್ಕೆ ಹೋಗುವನು. ಆಗ ಈ ಪ್ರೇತ ಶರೀರಕ್ಕಿಂತಲೂ ಸೂಕ್ಷ್ಮವಾದ ಶರೀರವು ಪ್ರಾಪ್ತವಾಗುವುದು. ಆಯಾ ಲೋಕಗಳು ಯಾವ ರೀತಿಯಾಗಿರು ವುವೋ ಅದರಲ್ಲಿ ವಾಸಿಸುವ ಪ್ರಾಣಿಗಳೂ ಅದೇ ವಿಧವಾದ ವಸ್ತುವಿನಿಂದ ನಿರ್ಮಿತವಾದ ಶರೀರವುಳ್ಳವುಗಳಾಗಿರುವುವು. ಪೃಥಿವಿಯಲ್ಲಿರುವಾಗ ಪೃಥಿವೀ ಸಂಬಂಧವಾದ ಸ್ಥೂಲ ಶರೀರವುಳ್ಳವುಗಳಾಗಿರುವುವು. ಸ್ವರ್ಗ ಲೋಕವು ಅತಿ ಸೂಕ್ಷ್ಮವಸ್ತು ವಸ್ತುಮಯವಾದ ಶರೀರವುಳ್ಳ ಪ್ರಾಣಿಗಳಾಗಿರುವುವು. ಸ್ವರ್ಗ ಲೋಕವು ಅತಿ ಸೂಕ್ಷ್ಮವಸ್ತು ನಿರ್ಮಿತವಾಗಿರುವುದರಿಂದ ಅಲ್ಲಿ ವಾಸಿಸುವ ದೇವ ಮನುಷ್ಯಾದಿಗಳಿಗೂ ಅತಿ

ಸೂಕ್ಷ್ಮವಾದ ಶರೀರಾದಿಗಳಿರುವವು. ಭೂಮಿಯ ಮೇಲಿನ ಜನರು ಸ್ಥೂಲವಸ್ತುಗಳನ್ನು ಮಾತ್ರ ತಮ್ಮ ಕಣ್ಣುಗಳಿಂದ ನೋಡಬಲ್ಲವರಾದ್ದರಿಂದ ಸೂಕ್ಷ್ಮರೂಪದಿಂದಿರುವ ದೇವ ಲೋಕವನ್ನಾಗಲೀ, ದೇವತೆಗಳನ್ನಾಗಲೀ ನೋಡಲಾರರು. ದೇವಲೋಕವು ಎಲ್ಲಿರುವು ದೆಂದರೆ "ಅತರ್ಹಿತೋ ಹಿ ದೇವಲೋಕೋ ಮನುಷ್ಯಲೋಕಾತ್" (ತೈ. ಸಂಹಿತಾ) ಎಂಬ ಶ್ರುತಿವಾಕ್ಯದಂತೆ ಈ ಮನುಷ್ಯ ಲೋಕದೊಡನೆಯೇ ಓತ ಪ್ರೇತವಾಗಿ ಎಂದರೆ ಪರಸ್ಪರ ಅಂತರ್ಗತವಾಗಿರುವುದು. ಸ್ವರ್ಗದ ಕೆಲವು ಭಾಗಗಳು ನಮ್ಮ ಸುತ್ತುಮುತ್ತಿನ ವಾತಾವರಣದಲ್ಲಿದ್ದರೂ ನಾವು ಅದನ್ನು ನೋಡಿ ತಿಳಿಯಲಾಗುವುದಿಲ್ಲ. ಸೂಕ್ಷ್ಮರೂಪ ದಲ್ಲಿರುವ ವಿದ್ಯುತ್ಪ್ರವಾಹವು ತಂತಿಗಳಲ್ಲಿ ಪ್ರವಹಿಸುತ್ತಿದ್ದರೂ ಅದನ್ನು ನೋಡಲು ಹೇಗೆ ಸಾಧ್ಯವಿಲ್ಲವೋ ಅದರಂತೆ ನಮ್ಮ ಈ ಸ್ಥೂಲಶರೀರದಿಂದ ಸೂಕ್ಷ್ಮರೂಪದಿಂದಿರುವ ಸ್ವರ್ಗವನ್ನೂ ಸ್ವರ್ಗವಾಸಿಗಳನ್ನೂ ನೋಡಲಾರೆವು. ಆದರೆ ಸ್ವರ್ಗವಾಸಿಗಳು ಇಷ್ಟಬಂದಾಗ ನಮ್ಮನ್ನು ನೋಡಬಲ್ಲರು.

ಸಂಗಚ್ಛಸ್ವ ಪಿತೃಭಿ ಸ್ಸಂ ಯಮೇನೇಷ್ಟಾ ಪೂರ್ತೇನ ಪರಮೇ ವ್ಯೋಮನ್ ।
ಹಿತ್ವಾಯಾ ವದ್ಯಂ ಪುನರಸ್ತಮೇಹಿ ಸಂಗಚ್ಛಸ್ವ ತನ್ವಾ ಸುವರ್ಚಾಃ ॥

ಎಲೈ ಪಿತೃವೇ, ನೀನು ಪಿತೃಲೋಕಕ್ಕೆ ಹೋದ ಬಳಿಕ ಅಲ್ಲಿ ಪೂರ್ವಕಾಲದಲ್ಲಿ ಮೃತ ರಾದ ಹಿರಿಯರಾದ ನಮ್ಮ ಪಿತೃಗಳಿರುವರು. ನೀನೂ ಅವರೊಡನೆ ಸಂಧಿಸಿ ಯಮನನ್ನು ಸೇರು. ಬಳಿಕ ಆ ದಿವ್ಯ ಲೋಕದಲ್ಲಿ ನಿನಗೆ ಬೇಕಾದ ಭೋಗಭಾಗ್ಯಗಳನ್ನನುಭವಿಸು. ನೀನು ಭೂಮಿಯ ಮೇಲೆ ಜೀವಿಸಿದ್ದಾಗ ನೀನು ಮಾಡಿದ ಸತ್ಕರ್ಮಾನುಷ್ಠಾನಗಳ ಯಾವ ಫಲವುಂಟೋ ಅವನ್ನೆಲ್ಲ ಈ ಲೋಕದಲ್ಲಿ ಅನುಭವಿಸು. ನೀನು ಭೂಮಿಯಲ್ಲಿ ಅನುಭವಿಸಬೇಕಾದ ಕೆಲವಾರು ಇಷ್ಟಾರ್ಥಗಳು ಅಲ್ಲಿ ನಡೆಯದಿದ್ದಕಾರಣ ಅವನ್ನೆಲ್ಲಾ ಇಲ್ಲಿ ಅನುಭವಿಸು. ಮತ್ತು ಈ ದಿವ್ಯ ಲೋಕಕ್ಕೆ ಬಂದ ಮೇಲೆ ನೀನು ಇದುವರೆಗು ಮಾಡಿದ ಪಾಪಕರ್ಮಗಳನ್ನು ಮತ್ತು ಅವುಗಳ ದುಃಖವನ್ನೂ ಸಹ ದೂರಮಾಡಿ ಈ ದಿವ್ಯ ಲೋಕದಲ್ಲಿ ಸುಖವಾಗಿರಲು ಉತ್ತಮವಾದ ದೇಹವನ್ನು ಪಡೆದು ಉತ್ತಮವಾದ ಗೃಹದಲ್ಲಿ ವಾಸಮಾಡು.

ಅಪೇತ ವೀತ ವಿ ಚ ಸರ್ಪತಾತೋಽಸ್ಮಾ ಏತಂ ಪಿತರೋ ಲೋಕಮಕ್ರನ್ ।
ಅಹೋಭಿರದ್ಭಿರಕ್ತುಭಿರ್ವ್ಯಕ್ತಂ ಯಮೋ ದದಾತ್ಯ ವಸಾನಮಸ್ಮೈ ॥

ಎಲೈ ಪಿಶಾಚಾದಿಗಳೇ, ಈ ದಹನ ಪ್ರದೇಶವನ್ನು ಬಿಟ್ಟು ಬಹಳ ದೂರದೇಶಕ್ಕೆ ಹೊರಡಿರಿ. ನಾನಾ ದಿಕ್ಕುಗಳಿಗೆ ಚದುರಿ ಹೋಗಿರಿ. ಮೃತನಿಗೆ ಪಿತೃಗಳು ಈ ಸ್ಥಾನವನ್ನು ಸಿದ್ಧಪಡಿಸಿದ್ದಾರೆ. ಯಮನೂ ಸಹ ಹಗಲುಗಳೊಡನೆಯೂ ಉದಕಗಳೊಡನೆಯೂ, ರಾತ್ರಿಗಳೊಡನೆಯೂ ಸೇರಿರುವ ಈ ದಹನ ಸ್ಥಾನವನ್ನು ಮೃತನಿಗೆ ಕೊಟ್ಟಿದ್ದಾನೆ.

ಅತಿದ್ರವ ಸಾರಮೇಯೌ ಶ್ವಾನೌ ಚತುರಕ್ಷೌ ಶಬಲೌ ಸಾಧು ನಾ ಪಥಾ।
ಅಥಾ ಪಿತೄನ್ತ್ಸುವಿದತ್ರಾಙ್ ಉಪೇಹಿ ಯ ಮೇನ ಯೇ ಸಧಮಾದಂ ಮದಂತಿ ॥

ಎಲೈ ಪ್ರೇತವೇ ಉತ್ತಮವಾದ ಮಾರ್ಗವನ್ನನುಸರಿಸು. ಸರಮೇಯಲ್ಲಿ ಉತ್ಪನ್ನವಾದುವೂ, ವರ್ಣವೈವಿಧ್ಯವುಳ್ಳವೂ, ನಾಲ್ಕುಕಣ್ಣುಗಳುಳ್ಳವೂ ಆದ ಈ ಎರಡು ನಾಯಿಗಳನ್ನು ತಪ್ಪಿಸಿಕೊಂಡು ದಾಟಿ ಹೋಗು. ಅನಂತರ ಯಾವ ಪಿತೃಗಳು ಯಾವನೊಡನೆ ಒಟ್ಟಿಗೆ ಕೂಡಿಕೊಂಡು ಹರ್ಷಯುಕ್ತರಾಗುತ್ತಾರೆಯೋ, ಉತ್ತಮ ಜ್ಞಾನಿಗಳಾದ ಆಪಿತೃಗಳೊಡನೆ ಸೇರು.

ಯೌ ತೇ ಶ್ವಾನೌ ಯಮರಕ್ಷಿತಾರೌ ಚತುರಕ್ಷೌ ಪಥಿ ನೃಚಕ್ಷಸೌ। ತಾಭ್ಯಾ
ಮೇನಂ ಪರಿ ದೇಹಿ ರಾಜನ್ತ್ಸ್ವಸ್ತಿಚಾಸ್ಮಾ ಅನಮೀವಂ ಚ ದೇಹಿ ॥

ರಾಜನಾದ ಯಮನೇ ನಿನ್ನ ಗೃಹರಕ್ಷಕರಾದ ನಾಲ್ಕು ಕಣ್ಣುಗಳಿಂದ ಕೂಡಿದ ಮಾರ್ಗರಕ್ಷಕರಾದ ಪುರುಷರಿಂದ ಪ್ರಶಂಸಿಸಲ್ಪಡುವ ನಿನ್ನ ನಾಯಿಗಳಿಗೆ ಈ ಪ್ರೇತವನ್ನರ್ಪಿಸಿ ಕಲ್ಯಾಣವನ್ನೂ ರೋಗವಿಲ್ಲದಿರುವಿಕೆಯನ್ನೂ ಉಂಟುಮಾಡು.

ಯಮಾಯ ಘೃತವದ್ಧವಿರ್ಜುಹೋತ ಪ್ರಚತಿಷ್ಠತ। ಸ ನೋ ದೇವೇಷ್ವಾಯ
ಮದ್ದೀರ್ಘಮಾಯುಃ ಪ್ರ ಜೀವಸೇ ॥

ಎಲೈ ಋತ್ವಿಜರೇ, ಯಮನನ್ನುದ್ದೇಶಿಸಿ ಆಜ್ಯೋಪೇತವಾದ ಹವಿಸ್ಸನ್ನರ್ಪಿಸಿರಿ. ದೇವತೆಗಳಲ್ಲಿ ಪ್ರಸಿದ್ಧನಾದ ಯಮನು ಉತ್ತಮವಾದ ಜೀವನಕ್ಕಾಗಿ ನಮಗೆ ದೀರ್ಘಾಯುಸ್ಸನ್ನು ಕೊಡಲೆಂದು ಪ್ರಾರ್ಥಿಸಿರಿ.

ಯಮಾಯ ಮಧುಮತ್ತಮಂ ರಾಜ್ಞೇ ಹವ್ಯಂ ಜುಹೋತನ। ಇದಂ ನಮ
ಋಷಿಭಿಃ ಪೂರ್ವಜೇಭ್ಯಃ ಪೂರ್ವೇಭ್ಯಃ ಪಥಿಕೃದ್ಭ್ಯಃ ॥

ಎಲೈ ಋತ್ವಿಜರೇ, ಪ್ರಭುವಾದ ಯಮನನ್ನುದ್ದೇಶಿಸಿ ಅತ್ಯಂತ ಮಧುರವಾದ ಹವಿಸ್ಸನ್ನರ್ಪಿಸಿರಿ. ಹಿಂದೆ ಉತ್ಪನ್ನರಾದವರೂ ಪ್ರಾಚೀನರೂ, ಮಾರ್ಗದರ್ಶಕರೂ ಆದ ಋಷಿಗಳಿಗೆ ನನ್ನ ಈ ನಮಸ್ಕಾರಗಳು.

ಶತಪಥ ಬ್ರಾಹ್ಮಣದ ಪ್ರಕಾರ ಮೃತರು ಈ ಲೋಕವನ್ನು ಬಿಟ್ಟು ಹೊರಟು ಎರಡು ಬೆಂಕಿಗಳ ಮಧ್ಯದಲ್ಲಿ ಹಾದುಹೋಗುತ್ತಾರೆ. ಆ ಬೆಂಕಿಗಳು ಕೆಟ್ಟ ಜೀವವನ್ನು ಸುಡುತ್ತವೆ. ಉತ್ತಮರನ್ನು ಮಾತ್ರ ಮುಂದಕ್ಕೆ ಹೋಗಲು ಬಿಡುತ್ತವೆ. ಹೀಗೆ ಮುಂದೆ ಹೊರಟ ಉತ್ತಮ ಜೀವಗಳು ಪಿತೃಗಳ ಸಮೀಪಕ್ಕೆ ಹೋಗುವ ದಾರಿಯನ್ನೋ ಅಥವಾ ಸೂರ್ಯನ ಹತ್ತಿರಕ್ಕೆ

ಹೋಗುವ ದಾರಿಯನ್ನೋ ಹಿಡಿದು ಮುಂದೆ ಸಾಗುತ್ತಾರೆ. (ಶ. ಬ್ರಾ. ೧-೯-೩-೨) ಉಪನಿಷತ್ತುಗಳಲ್ಲಿ ಬ್ರಹ್ಮಜ್ಞಾನವನ್ನು ಪಡೆದಿರುವವರಿಗೆ ಎರಡು ಮಾರ್ಗಗಳು ಉಕ್ತವಾಗಿವೆ. ಒಂದು ಬ್ರಹ್ಮನಲ್ಲಿಗೆ ಹೋಗುವುದು. ಮತ್ತೊಂದು ಸ್ವರ್ಗದ ದಾರಿ. ತಮ್ಮ ಪುಣ್ಯಕರ್ಮಗಳ ಫಲ ಮುಗಿಯುತ್ತಲೇ ಈ ಸ್ವರ್ಗಲೋಕದಿಂದ ಬಂದು ಪುನಃ ಭೂಮಿಯಲ್ಲಿ ಜನಿಸುತ್ತಾರೆ. ಆತ್ಮದ ಪರಿಚಯವೇ ಇಲ್ಲದವರು ದುರ್ದೇವತೆಗಳ ಅಥವಾ ಭೂತ ಪ್ರೇತಗಳ ಲೋಕಕ್ಕೆ ಹೋಗುತ್ತಾರೆ. ಅಥವಾ ದುಷ್ಟರಾಗಿ ಭೂಮಿಯಲ್ಲಿ ಮತ್ತೆ ಹುಟ್ಟುತ್ತಾರೆ.

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸ್ಸೋಮ್ಯಾಸಃ । ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತು ಪಿತರೋ ಹವೇಷು ॥

ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ ಮಧ್ಯಮ ಲೋಕದಲ್ಲಿರುವವರೂ ಆದ ಪಿತೃಗಳು ನಮ್ಮ ಹವಿಸ್ಸುಗಳನ್ನು ಸ್ವೀಕರಿಸಿ ನಮ್ಮನ್ನು ಅನುಗ್ರಹ ಮಾಡುವವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣಗಳನ್ನು ರಕ್ಷಿಸಲು ಬಂದಿರುವವರೂ ಆದ ಈ ಪಿತೃಗಳು ನಮ್ಮ ಆಹ್ವಾನ ಕಾಲಗಳಲ್ಲಿ ನಮ್ಮನ್ನು ರಕ್ಷಿಸಲಿ.

ಇದಂ ಪಿತೃಭ್ಯೋ ನಮೋ ಅಸ್ತ್ವದ್ಯ ಯೇ ಪೂರ್ವಾಸೋ ಯ ಉಪರಾಸ ಈಯುಃ । ಯೇ ಪಾರ್ಥಿವೇ ರಜಸ್ಯಾ ನಿಷತ್ತಾ ಯೇ ವಾ ನೂನಂ ಸುವೃಜನಾಸು ವಿಕ್ಷು ॥

ನಮಗಿಂತಲೂ ಹಿರಿಯರಾದ ಪಿತೃಪಿತಾಮಹಾದಿಗಳಲ್ಲಿ ಯಾರು ಪಿತೃಲೋಕವನ್ನು ಸೇರಿರುವರೋ, ನಮಗಿಂತ ಕಿರಿಯರಲ್ಲಿ ಯಾರು ಮೃತರಾಗಿರುವರೋ, ಯಾರು ಪಾರ್ಥಿವ ಲೋಕದಲ್ಲಿ ಹವಿಸ್ಸಿಗಾಗಿ ಬಂದು ಕುಳಿತಿರುವರೋ, ಉಳಿದ ಪಿತೃಗಳು ಉಳಿದ ಧನವಂತರ ಮಧ್ಯದಲ್ಲಿ ಕುಳಿತಿರುವರೋ, ಅಂತಹ ಸಕಲ ಪಿತೃಗಳನ್ನೂ ಈ ಯಾಗದ ಸಮಯದಲ್ಲಿ ನಮಸ್ಕರಿಸುತ್ತೇನೆ.

ಆಹಂ ಪಿತೄನ್ತ್ಸುವಿದತ್ರಾಙ್ ಅವಿತ್ಸಿನಪಾತಂ ಚ ವಿಕ್ರಮಣಂ ಚ ವಿಷ್ಣೋಃ । ಬರ್ಹಿಷದೋಯೇ ಸ್ವಧಯಾ ಸುತಸ್ಯ ಭಜಂತ ಪಿತ್ವಸ್ತ ಇಹಾಗಮಿಷ್ಠಾಃ ॥

ಯಜಮಾನನಾದ ನಾನು ನನ್ನ ಭಕ್ತಿಯನ್ನು ಚೆನ್ನಾಗಿ ತಿಳಿದ ಪಿತೃಗಳನ್ನು ನನ್ನೆದುರಿಗೆ ಬರಮಾಡಿಕೊಂಡಿದ್ದೇನೆ. ವ್ಯಾಪಕವಾದ ಯಜ್ಞದ ನಾಶವಿಲ್ಲದಿರುವಿಕೆಯನ್ನೂ ಕ್ರಮವಾಗಿ ವಿಸ್ತಾರವಾಗುವಿಕೆಯನ್ನೂ ಹೊಂದಿದ್ದೇವೆ. ಯಾವ ಪಿತೃಗಳು ದರ್ಭಾಸನವನ್ನು ಆಶ್ರಯಿ

ಸಿರುವರೋ ಅವರು ನಮ್ಮ ಯಾಗಕ್ಕೆ ಬಂದಿದ್ದಾರೆ. ಸ್ವಧಾಸಂಜ್ಞಕವಾದ ಅನ್ನದೊಡನೆ ಹಿಂಡಲ್ಪಟ್ಟ ಸೋಮವನ್ನು ಸೇವಿಸುತ್ತಾರೆ.

ಬರ್ಹಿಷದಃ ಪಿತರ ಊತ್ಯಾ ೧ ಅರ್ವಾಗಿಮಾ ವೋ ಹವ್ಯಾ ಚಕೃಮಾ ಜುಷಧ್ವಮ್ । ತ ಆ ಗತಾವಸಾ ಶಂತಮೇನಾಥಾ ನಃ ಶಂ ಯೋರರಪೋ ದಧಾತ ॥

ಯಜ್ಞದಲ್ಲಿ ಕುಳಿತಿರುವ ಬರ್ಹಿಷದ ಸಂಜ್ಞಕರಾದ ಎಲ್ಲೈ ಪಿತೃಗಳೇ, ನಿಮ್ಮೆದುರಿಗೆ ಕುಳಿತಿರುವ ನಮಗೆ ನಿಮ್ಮ ರಕ್ಷಣೆಯು ಅತ್ಯವಶ್ಯಕವಾಗಿದೆ. ನಿಮ್ಮನ್ನುದ್ದೇಶಿಸಿ ಈ ಹವಿಸ್ಸುಗಳ್ನು ನಿರ್ಮಿಸಿದ್ದೇನೆ. ಅವನ್ನು ಸೇವಿಸಿರಿ. ಹವಿಸ್ಸನ್ನು ಸೇವಿಸಿದ ನೀವು ಅತ್ಯಂತ ಸುಖಕರವಾದ ರಕ್ಷಣೆಯೊಂದಿಗೆ ನಮಗಭಿಮುಖವಾಗಿ ಬನ್ನಿರಿ. ನಂತರ ನಮಗೆ ಸುಖವನ್ನೂ, ದುಃಖವಿಲ್ಲದಿರುವಿಕೆಯನ್ನೂ ಪಾಪವಿಲ್ಲದಿರುವಿಕೆಯನ್ನೂ ಉಂಟುಮಾಡಿರಿ.

ಉಪಹೂತಾಃ ಪಿತರ ಸ್ಸೋಮ್ಯಾಸೋ ಬರ್ಹಿಷ್ಯೇಷು ನಿಧಿಷು ಪ್ರಿಯೇಷು । ತ ಆಗಮಂತು ತ ಇಹಶ್ರುವಂತ್ವಧಿ ಬ್ರುವಂತುತೇಽವಂತ್ವಸ್ಮಾನ್ ॥

ಯಾಗಾರ್ಹವೂ, ಪ್ರೀತಿಕಾರಕವೂ ಆದ ಹವಿಸ್ಸುಗಳನ್ನು ಸ್ವೀಕರಿಸಲು ನಾವು ಯಾವ ಪಿತೃಗಳನ್ನು ಕರೆಯುತ್ತೇವೆಯೋ ಅಂತಹ ಪಿತೃಗಳು ನಮ್ಮಲ್ಲಿ ಅನುಗ್ರಹ ಬುದ್ಧಿಯನ್ನು ತೋರಿಸುತ್ತಾ ಬರಲಿ. ಈ ಕರ್ಮಕಾಲಗಳಲ್ಲಿ ಪಠಿತವಾಗುವ ನಮ್ಮ ಸ್ತುತಿಗಳನ್ನು ಕೇಳುತ್ತಾ ನಮ್ಮನ್ನು ಹೊಗಳಲಿ ಮತ್ತು ರಕ್ಷಿಸಲಿ.

ಆಚ್ಯಾ ಜಾನು ದಕ್ಷಿಣತೋ ನಿಷದ್ಯೇಮಂ ಯಜ್ಞಮಭಿ ಗೃಣೀತ ವಿಶ್ವೇ । ಮಾಂ ಹಿಂಸಿಷ್ಟ ಪಿತರಃ ಕೇನ ಚಿನ್ನೋ ಯದ್ವ ಆಗಃ ಪುರುಷತಾ ಕರಾಮ ॥

ಎಲ್ಲೈ ಪಿತೃಗಳೇ, ನೀವೆಲ್ಲರೂ ಮೊಣಕಾಲನ್ನೂರಿ ದಕ್ಷಿಣ ಪಾರ್ಶ್ವದಲ್ಲಿ ಕುಳಿತು ನಮ್ಮ ಈ ಯಾಗವನ್ನು ಹೊಗಳಿರಿ. ನಿಮ್ಮ ವಿಷಯದಲ್ಲಿ ಮನುಷ್ಯನಿಗೆ ಸಹಜವಾದ ಯಾವ ಪಾಪವನ್ನೇ ನಾವು ಅಜ್ಞಾನದಿಂದ ಮಾಡಿದ್ದರೂ ಅದಕ್ಕಾಗಿ ನಮ್ಮನ್ನು ಹಿಂಸಿಸಬೇಡಿ.

ಆಸೀನಾಸೋ ಅರುಣೀನಾಮುಪಸ್ಥೇ ರಯಿಂ ಧತ್ತ ದಾಶುಷೇ ಮರ್ತ್ಯಾಯ । ಪುತ್ರೇಭ್ಯಃ ಪಿತರಸ್ತಸ್ಯ ವಸ್ವಃ ಪ್ರ ಯಚ್ಛತ ತ ಇಹೋರ್ಜಂ ದಧಾತ ॥

ಎಲ್ಲೈ ಪಿತೃಗಳೇ, ಆಕರ್ಷಕವಾದ ಜ್ವಾಲೆಗಳ ಸಮೀಪದಲ್ಲಿ ಕುಳಿತಿರುವ ನೀವು ಹವಿಸ್ಸನ್ನರ್ಪಿಸಿದ ಯಜಮಾನನಿಗೆ ಧನವನ್ನು ಕೊಡಿರಿ. ಯಜಮಾನನ ಪುತ್ರನಿಗೂ ಧನವನ್ನು ಒದಗಿಸಿರಿ. ಪ್ರಸಿದ್ಧರಾದ ನೀವು ನಮ್ಮ ಈ ಯಾಗ ಕರ್ಮದಲ್ಲಿ ಧನವನ್ನು ಸ್ಥಾಪಿಸಿರಿ.

ಯೇ ನಃ ಪೂರ್ವೇ ಪಿತರಸ್ಸೋಮ್ಯಾಸೋಽನೂಹಿರೇ ಸೋಮಪೀಥಂ ವಸಿಷ್ಠಾಃ। ತೇಭಿರ್ಯಮಃ ಸಂರರಾಣೋ ಹವೀಂಷ್ಯುಶನ್ನುಶದ್ಭಿಃ ಪ್ರತಿಕಾಮ ಮತ್ತು॥

ತಮ್ಮ ಸೋಮವನ್ನು ಯಥಾವಿಧಿಯಾಗಿ ಅರ್ಪಿಸಿದವರೂ, ಅತ್ಯಂತ ಶ್ರೇಷ್ಠರೂ, ಪೂರ್ವಜರೂ ಆದ ಯಾವ ಪಿತೃಗಳು ದೇವತೆಗಳಿಗೆ ಸೋಮಪಾನವನ್ನು ಮಾಡಿಸಿದರೋ ಅಂತಹವರೂ ಯಮನೊಡನೆ ಸಂಬಂಧವನ್ನು ಇಚ್ಛಿಸಿದವರೂ ಆದ ಪಿತೃಗಳೊಡನೆ ಹರ್ಷವನ್ನು ಹೊಂದುವವನೂ ನಮ್ಮ ಹವಿಸ್ಸುಗಳನ್ನು ಅಪೇಕ್ಷಿಸುವವನೂ ಆದ ಯಮನು ನಮ್ಮಿಂದ ಅರ್ಪಿತವಾದ ಹವಿಸ್ಸುಗಳನ್ನು ಯಥೇಚ್ಛವಾಗಿ ಸ್ವೀಕರಿಸಲಿ.

ಯೇ ತಾತೃಷುರ್ದೇವತ್ರಾ ಜೇಹಮಾನಾ ಹೋತ್ರಾವಿದಃ ಸ್ತೋಮ-ತಷ್ಟಾಸೋ ಅರ್ಕೈಃ। ಆಗ್ನೇ ಯಾಹಿ ಸುವಿದತ್ರೇಭಿರರ್ವಾಙ್ ಸತ್ಯೈಃ ಕವ್ಯೈಃ ಪಿತೃಭಿರ್ಘರ್ಮಸದ್ಭಿಃ।

ಎಲೈ ಅಗ್ನಿಯೇ ಕ್ರಮಬದ್ಧರಾಗಿ ದೇವತ್ವವನ್ನು ಹೊಂದಿದವರೂ, ಯಾಗ ಕ್ರಮವನ್ನರಿತವರೂ, ಸ್ತುತಿಗಳಿಂದ ಸ್ತೋಮಗಳನ್ನು ಪರಿಷ್ಕರಿಸುವವರೂ ಆದ ಯಾವ ಪಿತೃಗಳು ದೇವ ಸಂಬಂಧವನ್ನು ಇಚ್ಛಿಸುವರೋ ಅಂತಹ ಯಜ್ಞಕಾರಕರೂ ಉತ್ತಮ ಜ್ಞಾನವುಳ್ಳವರೂ, ಸತ್ಯಾತ್ಮರೂ, ಮೇಧಾವಿಗಳೂ ಆದ ಪಿತೃಗಳೊಡನೆ ನಮಗಭಿಮುಖ ವಾಗಿ ದಯಮಾಡು.

ಯೇ ಸತ್ಯಾಸೋ ಹವಿರದೋ ಹವಿಷ್ಪಾ ಇಂದ್ರೇಣ ದೇವೈಃ ಸರಥಂ ದಧಾನಾಃ। ಆಗ್ನೇ ಯಾಹಿ ಸಹಸ್ರಂ ದೇವವಂದ್ಯೈಃ ಪರೈಃ ಪೂರ್ವೈಃ ಪಿತೃಭಿರ್ಘರ್ಮಸದ್ಭಿಃ॥

ಎಲೈ ಅಗ್ನಿಯೇ ಸತ್ಯಾತ್ಮಕರಾದ ಯಾವ ಪಿತೃಗಳು ಹವಿಸ್ಸನ್ನು ಭಕ್ಷಿಸುವವ ರಾಗಿಯೂ, ಸೋಮಾದಿ ಹವಿಸ್ಸುಗಳನ್ನು ಪಾನ ಮಾಡುವವರಾಗಿಯೂ, ಇಂದ್ರಾದಿ ದೇವತೆಗಳೊಡನೆ ಸಮಾನತ್ವವನ್ನು ಹೊಂದಿದವರಾಗಿಯೂ ಇರುವರೋ ಅಂತಹ ಸಹಸ್ರಾರು ದೇವತೆಗಳೊಡನೆ ಕೂಡಿದವರೂ ಪರ ಮತ್ತು ಅಪರಕಾಲಕ್ಕೆ ಸೇರಿದವರೂ ಯಜ್ಞಕಾರಕರೂ ಆದ ಪಿತೃಗಳೊಡನೆ ದಯಮಾಡು.

ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ ಸದಸ್ಸದಸ್ಸದತ ಸುಪ್ರಣೀತಯಃ। ಅತ್ತಾ ಹವೀಂಷಿ ಪ್ರಯತಾನಿ ಬರ್ಹಿಷ್ಯಥಾ ರಯಿಂ ಸರ್ವವೀರಂ ದಧಾತನ॥

ಅಗ್ನಿಷ್ವಾತ್ತಸಂಜ್ಞಕರಾದ ಎಲ್ಲೈ ಪಿತೃಗಳೇ, ನಮ್ಮ ಈ ಯಾಗಕರ್ಮಕ್ಕೆ ಬನ್ನಿರಿ. ಉತ್ತಮ ಮಾರ್ಗದರ್ಶಕರಾದ ನೀವು ಆಯಾ ಸ್ಥಾನಗಳಲ್ಲಿ ಕುಳಿತುಕೊಳ್ಳಿರಿ. ದರ್ಭಾಸನಗಳ ಮೇಲಿಟ್ಟಿರುವ ಶುದ್ಧವಾದ ಹವಿಸ್ಸುಗಳನ್ನು ಭಕ್ಷಿಸಿರಿ. ಅನಂತರ ಪುತ್ರ ಪೌತ್ರಾದಿಗಳಿಂದ ಕೂಡಿದ ಧನವನ್ನು ನಮಗೆ ಕೊಡಿರಿ.

ತ್ವಮಗ್ನ ಈಳಿತೋ ಜಾತವೇದೋಽವಾಡ್ಢವ್ಯಾನಿ ಸುರಭೀಣಿ ಕೃತ್ವೀ । ಪ್ರಾದಾಃ ಪಿತೃಭ್ಯಃ ಸ್ವಧಯಾ ತೇ ಅಕ್ಷನ್ನದ್ಧಿ ತ್ವಂ ದೇವ ಪ್ರಯತಾ ಹವೀಂಷಿ ॥

ಜಾತವೇದೋ ರೂಪನಾದ ಅಗ್ನಿಯೇ, ನಮ್ಮಿಂದ ಸ್ತೋತ್ರಮಾಡಲ್ಪಟ್ಟ ನೀನು ನಮ್ಮ ಹವಿಸ್ಸುಗಳನ್ನು ಸುಗಂಧವುಳ್ಳದ್ದನ್ನಾಗಿ ಮಾಡಿ ಪಿತೃಗಳಿಗೆ ವಹಿಸಿದ್ದೀಯೆ. ಮತ್ತು ಅರ್ಪಿಸಿದ್ದೀಯೆ. ಆ ಪಿತೃಗಳು ಸ್ವಧಾಪೂರ್ವಕವಾಗಿ ಅರ್ಪಿಸಿದ ಹವಿಸ್ಸುಗಳನ್ನು ಭಕ್ಷಿಸಲಿ. ಎಲ್ಲೈ ಅಗ್ನಿಯೇ, ನೀನು ಉತ್ತಮವಾಗಿ ಸಂಪಾದಿಸಿದ ಹವಿಸ್ಸುಗಳನ್ನು ಭಕ್ಷಿಸು.

ಯೇ ಚೇಹ ಪಿತರೋ ಯೇ ಚ ನೇಹ ಯಾಂಶ್ಚ ವಿದ್ಮಯಾಙ್ ಉ ಚ ನ ಪ್ರವಿದ್ಮ। ತ್ವಂ ವೇತ್ಥ ಯತಿ ತೇ ಜಾತವೇದಃ ಸ್ವಧಾಭಿರ್ಯಜ್ಞಂ ಸುಕೃತಂ ಜುಷಸ್ವ ॥

ಜಾತವೇದೋ ರೂಪಿಯಾದ ಎಲ್ಲೈ ಅಗ್ನಿಯೇ, ಯಾವ ಪಿತೃಗಳು ನಮ್ಮ ಸಮೀಪದಲ್ಲಿರುವರೋ, ಯಾರು ನಮ್ಮ ಸಮೀಪದಲ್ಲಿರುವುದಿಲ್ಲವೋ, ಯಾವ ಪಿತೃಗಳನ್ನು ನಾವು ತಿಳಿಯುವೆವೋ, ಯಾರನ್ನು ನಾವು ಚೆನ್ನಾಗಿ ತಿಳಿದಿಲ್ಲವೋ, ಅವರನ್ನೂ ಅವರ ಪೂರ್ಣವಾದ ಸಂಖ್ಯೆಯನ್ನೂ ನೀನು ತಿಳಿದಿದ್ದೀಯೆ. ಸ್ವಧಾರೂಪವಾದ ಹವಿಸ್ಸುಗಳಿಂದ ಸುಸಂಸ್ಕೃತವಾದ ಯಜ್ಞವನ್ನು ಸೇವಿಸು.

ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ ಮಧ್ಯೇ ದಿವಃ ಸ್ವಧಯಾ ಮಾದಯಂತೇ । ತೇಭಿಃ ಸ್ವರಾಳಸುನೀತಿಮೇತಾಂ ಯಥಾವಶಂ ತನ್ವಂ ಕಲ್ಪಯಸ್ವ ॥

ಎಲ್ಲೈ ಅಗ್ನಿಯೇ, ಯಾವ ಪಿತೃಗಳು ಅಗ್ನಿಯಿಂದ ದಹಿಸಲ್ಪಟ್ಟವರಾಗಿಯೂ, ಯಾರು ದಹಿಸಲ್ಪಡದೆಯೂ, ದ್ಯುಲೋಕದ ಮಧ್ಯದಲ್ಲಿರುವರೋ, ಅವರೆಲ್ಲರೂ ಸ್ವಧಾರೂಪದ ಹವಿಸ್ಸಿನೊಡನೆ ತೃಪ್ತಿಯನ್ನು ಹೊಂದಲಿ. ಅವರೊಡನೆ ಕೂಡಿರುವ ಸ್ವಯಂಪ್ರಕಾಶನಾದ ನೀನು ಪಿತೃಪ್ರಾಣವನ್ನೊಳಗೊಂಡ ದೇವತಾ ಶರೀರವನ್ನು ನಿನ್ನ ಸಂಕಲ್ಪದಂತೆ ನಿರ್ಮಿಸು.

ಮೃತರಾದವರು ಸ್ವರ್ಗದಲ್ಲಿ ಬಹಳ ಆಹ್ಲಾದಕರವಾದ ಜೀವನವನ್ನು ಅನುಭವಿಸುತ್ತಾರೆ. ಇಲ್ಲಿ ಎಲ್ಲಾ ಇಷ್ಟಾರ್ಥಗಳೂ ಕೈಗೂಡುತ್ತವೆ. ದೇವತೆಗಳ ಮಧ್ಯದಲ್ಲಿ ಅದರಲ್ಲಿಯೂ ಯಮ ಮತ್ತು ವರುಣರ ಸನ್ನಿಧಿಯಲ್ಲಿ ಜೀವನ ವಾರ್ಧಕ್ಯವೆಂಬ ಮಾತೇ ಇಲ್ಲ.

ಸುಂದರವಾದ ಶರೀರವುಳ್ಳವರಾಗಿ ದೇವತೆಗಳಿಗೆ ಪ್ರಿಯರೂ, ಇಷ್ಟವುಳ್ಳವರೂ ಆಗುತ್ತಾರೆ. ಅಲ್ಲಿ ತಂದೆ, ತಾಯಿ, ಮಕ್ಕಳು ಮೊದಲಾದವರನ್ನು ನೋಡುವುದಲ್ಲದೇ ಪತ್ನೀ ಪುತ್ರಾದಿ ಗಳೊಡನೆ ಮತ್ತೆ ಸೇರುತ್ತಾರೆ. ಜೀವನದಲ್ಲಿ ಸ್ವಲ್ಪವಾದರೂ ಲೋಪದೋಷಗಳಿಲ್ಲ. ಶಾರೀರಕ ಕಷ್ಟಗಳೂ ಇಲ್ಲ. ರೋಗ ಉಪದ್ರವಾದಿಗಳೆಲ್ಲಾ ಭೂಮಿಯಲ್ಲೇ ಉಳಿದುಬಿಡು ತ್ತವೆ. ಕೈಕಾಲುಗಳು ಸೊಟ್ಟ ಅಥವಾ ಕುಂಟು ಇತ್ಯಾದಿ ದೋಷಗಳಿಲ್ಲ. ಆ ಲೋಕದಲ್ಲಿ ಸಂಪೂರ್ಣವಾದ ದೇಹದಿಂದ ಕೂಡಿರುತ್ತಾರೆ. ಈ ರೀತಿಯಾಗಿ ಅಥರ್ವವೇದ ಮತ್ತು ಶತಪಥ ಬ್ರಾಹ್ಮಣಗಳಲ್ಲಿ ಹೇಳಿದೆ.

ಮೃತರು ಸ್ವರ್ಗದಲ್ಲಿ ಸುಖವಾಗಿಯೂ, ಆನಂದವಾಗಿಯೂ ಇರುತ್ತಾರೆ. ಅಲ್ಲಿ ಗಾಳಿ, ಬೆಳಕು, ನೀರುಗಳ ಸೌಕರ್ಯವು ಬಹಳ ಚೆನ್ನಾಗಿರುತ್ತದೆ. ಅಲ್ಲಿ ಸ್ವಧಾರೂಪವಾದ ಆಹಾರವೂ, ತೃಪ್ತಿಯೂ ಉಂಟು. ಸಂತೋಷ, ಆನಂದ, ಇಷ್ಟಾರ್ಥ ಸಿದ್ಧಿ ಇವೆಲ್ಲವೂ ಇದೆ. ಭೂಮಿಯಲ್ಲಿ ಅನುಭವಿಸುವ ಹೆಚ್ಚು ಸುಖಕ್ಕೆ ನೂರರಷ್ಟು ಸುಖವನ್ನು ಅಲ್ಲಿ ಅನುಭವಿಸುತ್ತಾರೆ. ಪುಣ್ಯಶಾಲಿಗಳಾದವರು ಈ ಲೋಕದಲ್ಲಿ ವೇಣುನಾದವನ್ನೂ ಸಂಗೀತವನ್ನೂ ಕೇಳುತ್ತಾರೆ. ಅವರಿಗೋಸ್ಕರ ಸೋಮರಸ, ಘೃತ ಮತ್ತು ಜೇನುತುಪ್ಪಗಳು ಹರಿಯುತ್ತವೆ. ಸ್ವಚ್ಛವಾದುವೂ ನಾನಾವರ್ಣದವೂ ಇಷ್ಟಾರ್ಥಪ್ರದಗಳೂ ಆದ ಗೋವುಗಳು ಸರ್ವದಾ ಸಿದ್ಧವಾಗಿರುತ್ತವೆ. ಅಲ್ಲಿ ಬಡವರು, ಶ್ರೀಮಂತರು, ದೊಡ್ಡವರು, ಚಿಕ್ಕವರೆಂಬ ಭೇದವಿಲ್ಲ. ಸಂಹಿತೆ ಮತ್ತು ಬ್ರಾಹ್ಮಣಗಳಲ್ಲಿ ವರ್ಣಿತವಾಗಿರುವ ಈ ಸ್ವರ್ಗಸುಖವು ಉಪನಿಷತ್ತುಗಳಲ್ಲಿ ಅಶಾಶ್ವತವೆಂದೂ, ಉತ್ತಮವಲ್ಲವೆಂದೂ ಅಮೃತದ ತತ್ತ್ವವನ್ನು ತಿಳಿದವರಿಗೆ ಮಾತ್ರ ಬ್ರಹ್ಮೈಕ್ಯವೂ, ತಜ್ಜನ್ಯವಾದ ಶಾಶ್ವತ ಸುಖವೂ ದೊರೆಯುತ್ತದೆ ಎಂದೂ ಉಕ್ತವಾಗಿದೆ. ಆದ್ದರಿಂದ ಸತ್ಕರ್ಮವನ್ನು ಮಾಡಿದವರು ಮರಣಾನಂತರ ಸ್ವರ್ಗಲೋಕದಲ್ಲಿ ಅತ್ಯಂತ ಸುಖವಾಗಿ ಕಾಲವನ್ನು ಕಳೆಯುತ್ತಾರೆಂದು ಅಥರ್ವವೇದ ಮತ್ತು ಬ್ರಾಹ್ಮಣಗಳಲ್ಲಿ ಹೇಳಿದೆ.

ಸ್ವರ್ಗವು ಈ ಲೋಕಕ್ಕಿಂತಲೂ ಹೆಚ್ಚು ವೈಭವಯುಕ್ತವಾದುದು. ಅದು ಸತ್ಕರ್ಮಿಗಳ ಲೋಕ. ಇಲ್ಲಿ ಕರ್ಮಜ್ಞಾನವುಳ್ಳವರು, ಆನಂದದಿಂದ ಕಾಲ ಕಳೆಯುತ್ತಾ ತಾವು ಮಾಡಿದ ಹೋಮ ಮತ್ತು ದಾನಗಳ ಫಲವನ್ನನುಭವಿಸುತ್ತಾರೆ. ವಿಹಿತವಾದ ರೀತಿಯಲ್ಲಿ ಯಜ್ಞಕರ್ಮಾನುಷ್ಠಾನ ಮಾಡಿದವರು ಆದಿತ್ಯ ಮತ್ತು ಅಗ್ನಿಲೋಕಗಳು ಮಾತ್ರವಲ್ಲದೇ ಇಂದ್ರ, ವರುಣ, ವಾಯು, ಬೃಹಸ್ಪತಿ, ಪ್ರಜಾಪತಿ, ಮತ್ತು ಬ್ರಹ್ಮ ಇವರ ಲೋಕಗಳೊಡನೆ ಐಕ್ಯವನ್ನು ಪಡೆಯುತ್ತಾರೆ. ಎಂದು ಶ. ಬ್ರಾಹ್ಮಣ ಮತ್ತು ತೈ. ಬ್ರಾಹ್ಮಣಗಳಲ್ಲಿ ಉಕ್ತವಾಗಿದೆ. ಒಬ್ಬ ಋಷಿಯು ತನ್ನ ಜ್ಞಾನದ ಬಲದಿಂದ ಬಂಗಾರದ ಹಂಸರೂಪವನ್ನು ತಾಳಿ ಸ್ವರ್ಗಲೋಕಕ್ಕೆ ಹೋಗಿ ಸೂರ್ಯನೊಡನೆ ಐಕ್ಯವನ್ನು ಪಡೆದನೆಂದು (ತೈ. ಬ್ರಾ.) ಹೇಳಿದೆ. ತೈತ್ತಿರೀಯ ಸಂಹಿತೆಯಲ್ಲಿ ಕೆಲವು ಕರ್ಮಗಳನ್ನು ಮಾಡಿದರೆ ಅದರ ಫಲದಿಂದ ಮನುಷ್ಯನು ಈ ಭೌತಿಕ ದೇಹವಿಶಿಷ್ಟನಾಗಿಯೇ ಸ್ವರ್ಗವನ್ನು ಪಡೆಯಬಹುದೆಂದು ಉಕ್ತವಾಗಿದೆ. (ತೈ. ಬ್ರಾ.)

ವೇದವನ್ನು ಸರಿಯಾದ ರೀತಿಯಲ್ಲಿ ಅಭ್ಯಾಸಮಾಡಿದವರು ಜನನ ಮರಣ ಭಯರಹಿತರಾಗಿ ಬ್ರಹ್ಮನೊಡನೆ ಸಮತ್ವವನ್ನು ಪಡೆಯಬಹುದು (ಶ. ಬ್ರಾ.) ಯಾವುದೋ ಒಂದು ರಹಸ್ಯವಾದ ವಿಷಯವನ್ನು ತಿಳಿದುದರ ಫಲವಾಗಿ ಮನುಷ್ಯನು ಪುನಃ ಜನಿಸುತ್ತಾನೆ. (ಶ. ಬ್ರಾ.) ಇವುಗಳಲ್ಲಿ ಪಾಪಫಲ ಮತ್ತು ದೇಹಾಂತರ ಪ್ರಾಪ್ತಿ ವಾದಗಳ ಪ್ರಾರಂಭವನ್ನು ಕಾಣಬಹುದು. ಛಾಂದೋಗ್ಯ, ಬೃಹದಾರಣ್ಯಕ, ಕಠ ಮೊದಲಾದ ಉಪನಿಷತ್ತುಗಳಲ್ಲಿ ಮತ್ತು ಸೂತ್ರಗಳಲ್ಲಿ ಈ ವಿಷಯಗಳು ಸಂಪೂರ್ಣವಾಗಿ ಪ್ರತಿಪಾದಿತವಾಗಿವೆ.

ಕಠೋಪನಿಷತ್ತಿನಲ್ಲಿ ಯಮ ನಚಿಕೇತರ ಸಂವಾದದದಲ್ಲಿ ಸ್ವರ್ಗ ಮತ್ತು ಮುಕ್ತಿಗಳಿಗೆ ಯೋಗ್ಯತೆಯಿಲ್ಲದವರು ಪುನಃ ಮರಣಾಧೀನರಾಗಿ ಸಂಸಾರಚಕ್ರಕ್ಕೆ ಸಿಕ್ಕಿ ದೇಹದಾರಿಗಳಾಗಿ ಇಲ್ಲವೆ, ಜಡಪದಾರ್ಥವಾಗಿ ಭೂಮಿಯಲ್ಲಿ ಹುಟ್ಟುತ್ತಾರೆ. ಆತ್ಮ ಸಂಯಮನ ಶಕ್ತಿಯುಳ್ಳವನು ವಿಷ್ಣುಲೋಕವನ್ನು ಸಾಧಿಸಬಲ್ಲನು. ಮುಕ್ತಿಯನ್ನು ಸಾಧಿಸಲು ಅಸಮರ್ಥ ರಾದವರಿಗೆ ನರಕವೇ ಗತಿಯೆಂದು ಯಮನು ನಚಿಕೇತನಿಗೆ ಉಪದೇಶ ಮಾಡಿರುತ್ತಾನೆ.

ಪೂಷಾ ತ್ವೇತಶ್ಚ್ಯಾವಯತು ಪ್ರ ವಿದ್ವಾನನಷ್ಟಪಶುರ್ಭುವನಸ್ಯ ಗೋಪಾಃ ।
ಸ ತ್ವೈತೇಭ್ಯಃ ಪರಿ ದದತ್ಪಿತೃಭ್ಯೋಽಗ್ನಿರ್ದೇವೇಭ್ಯಃ ಸುವಿದತ್ರಿಯೇಭ್ಯಃ ॥

ಸಕಲವನ್ನೂ ತಿಳಿದವನೂ ನಷ್ಟವಾಗದ ಪಶುಗಳುಳ್ಳವನೂ ಸಕಲ ಭೂತಗಳಿಗೂ ರಕ್ಷಕನೂ ಆದ ಪೂಷದೇವನು ನಿನ್ನನ್ನು ಈ ಲೋಕದಿಂದ ಉತ್ತಮ ಲೋಕಕ್ಕೆ ಒಯ್ಯಲಿ. ಅದೇ ಪೂಷದೇವನು ಈ ಪಿತೃಗಳಿಗೆ ನಿನ್ನನ್ನು ಒಪ್ಪಿಸಲಿ. ಅಗ್ನಿಯು ಪೂರ್ಣಜ್ಞಾನವುಳ್ಳ ದೇವತೆಗಳಿಗೆ ಒಪ್ಪಿಸಲಿ.

ಸ ಮೃತ್ಯುರ್ದೇವಾನಬ್ರವೀತ್ । ಅಥೈವ ಸರ್ವೇ ಮನುಷ್ಯಾ ಅಮೃತಾ ಭವಿಷ್ಯಂತ್ಯಥಕೋ ಮಹ್ಯಂ ಭಾಗೋ ಭವಿಷ್ಯತೀತಿ । ತೇ ಹೋಚುರ್ನಾತೋಃ ಪರಂ ಕಶ್ಚನ ಸಹ ಶರೀರೇಣಾಮೃತೋಽಸದ್ಯ ದೈವ ತ್ವಮೇತಂ ಭಾಗಂ ಹರಾಸೈ। ಅಥ ವ್ಯಾವೃತ್ಯ ಶರೀರೇಣ ಮೃತೋಽಸದ್ವಿದ್ಯಯಾ ವಾ ಕರ್ಮಣಾವೇತಿ। ಯದ್ವೈ ತದಬ್ರುವನ್ ವಿದ್ಯಯಾ ವಾ ಕರ್ಮಣಾವೇತಿ । ಏಷ ಹೈವ ಸಾ ವಿದ್ಯಾ ಯದಗ್ನಿರೇತದು ಹೈವ ತತ್ಕರ್ಮ ಯದಗ್ನಿಃ। ತೇ ಯೇ ಏವಮೇತ ದ್ವಿದುರ್ಯೇ ವೈತತ್ಕರ್ಮ ಕುರ್ವತೇ ಮೃತ್ವಾ ಪುನಸ್ಸಂಭವಂತಿ । ತೇ ತೇ ಸಂಭವಂತ ಏವ ಅಮೃತತ್ವಮಭಿಸಂಭವಂತಿ। ಅಥ ಯೇ ಏವಂ ನ ವಿದುರ್ಯೇ ನೈ ತತ್ಕರ್ಮ ನ ಕುರ್ವತೇ ಮೃತ್ವಾ ಪುನಸ್ಸಂಭವಂತಿ ತೇ ಏತಸ್ಯೈವಾನ್ನಂ ಪುನಃ ಪುನರ್ಭವಂತಿ ॥ (ಶ. ಬ್ರಾ.)

ಪೂರ್ವದಲ್ಲಿ ದೇವತೆಗಳೂ ಮನುಷ್ಯರೂ ಯಜ್ಞಯಾಗಾದಿಗಳನ್ನು ಮಾಡಿ ಅದರ ಫಲವಾಗಿ ಸ್ವರ್ಗಾದಿಲೋಕಗಳಿಗೆ ಸಶರೀರವಾಗಿಯೇ ಹೋಗುತ್ತಿದ್ದರು. ಹೀಗಿರುವಾಗ:

ಒಂದಾನೊಂದು ಕಾಲದಲ್ಲಿ ದೇವತೆಗಳನ್ನು ಕುರಿತು ಮೃತ್ಯುವು ಇಂತೆಂದಿತು. ಎಲೈ ದೇವತೆಗಳಿರಾ, ನೀವು ಯಜ್ಞಾದಿ ಸತ್ಕರ್ಮಾಚರಣೆಯನ್ನು ಮಾಡಿ ಮರಣರಾಹಿತ್ಯವನ್ನು ಪಡೆದಿದ್ದೀರಿ. ಇದರಂತೆಯೇ ಮನುಷ್ಯರೆಲ್ಲರೂ ಯಜ್ಞಾದಿಗಳನ್ನು ಮಾಡಿ ಅಮೃತತ್ವನ್ನು ಪಡೆಯುವರು. ಆಗ ನನ್ನ ಕೆಲಸವೇನು? ನಾನು ಏನು ಮಾಡಬೇಕು? ಯಾರೂ ಸಾಯುವುದೇ ಇಲ್ಲವಲ್ಲಾ ಎನ್ನಲು, ಅದಕ್ಕೆ ದೇವತೆಗಳು, "ಹಾಗಾದರೆ ಇನ್ನು ಮೇಲೆ ಮನುಷ್ಯರು ಉತ್ತಮಕಾರ್ಯಗಳನ್ನು ಮಾಡಿ ಅಮೃತತ್ವ ಅಥವಾ ಸ್ವರ್ಗ ಸುಖಕ್ಕೆ ಅರ್ಹರಾಗಿದ್ದರೂ ಅವರು ಸಶರೀರಿಗಳಾಗಿ ಸ್ವರ್ಗಕ್ಕೆ ಹೋಗದಂತಾಗಲಿ. ನೀನು ಅವರ ಶರೀರವನ್ನಾಕ್ರಮಿಸು. ಆದರಿಂದ ಅವರು ಮೃತ್ಯುವಶರಾಗಿ ಪ್ರಾಣವನ್ನೂ ತಮ್ಮ ದೇಹವನ್ನೂ ಇಲ್ಲಿಯೇ ಬಿಟ್ಟು ಬೇರೆ ಶರೀರದಿಂದ ಸ್ವರ್ಗಕ್ಕೆ ಹೋಗುವಂತಾಗಲಿ ಎಂದು ಹೇಳಿದರು. ಅಲ್ಲಿಂದ ಮುಂದಕ್ಕೆ ಜ್ಞಾನವನ್ನು ಪಡೆದಾಗಲೀ, ಸತ್ಕರ್ಮಾಚರಣೆಯಿಂದಾಗಲಿ, ಅಮೃತತ್ವಕ್ಕೆ ಅರ್ಹತೆಯನ್ನು ಪಡೆದ ಮನುಷ್ಯರು ಶರೀರವನ್ನು ಇಲ್ಲಿಯೇ ಬಿಟ್ಟು ಮೃತರಾದ ನಂತರವೇ ಅಮೃತತ್ವವನ್ನು ಪಡೆಯುತ್ತಾರೆ. ಇದನ್ನು ತಿಳಿದು ಕರ್ಮವನ್ನು ಮಾಡಿದವರು ಮೃತರಾದ ನಂತರ ಅಮೃತತ್ವವನ್ನು ಪಡೆಯುವರು. ಇದನ್ನು ತಿಳಿಯದವರು ಎಷ್ಟೇ ಕರ್ಮಮಾಡಲಿ ಅವರು ಮರಣಾನಂತರ ಪುನಃ ಪುನಃ ಜನ್ಮಗಳನ್ನೆತ್ತುತ್ತಾ ಪ್ರತಿ ಜನ್ಮದಲ್ಲಿಯೂ ಮರಣಕ್ಕೆ ವಶರಾಗುವರು" ಎಂದು ಹೇಳಿದರು.

ಪರಂ ಮೃತ್ಯೋ ಅನು ಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್ । ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾನಃ ಪ್ರಜಾಂ ರೀರಿಷೋ ಮೋತ ವೀರಾನ್ ॥

ಎಲೈ ಮೃತ್ಯವೇ, ಬೇರೆ ದಾರಿಯನ್ನು ಹಿಡಿದು ಪರಾಙ್ಮುಖನಾಗು. ದೇವತೆಗಳ ಮಾರ್ಗಕ್ಕಿಂತಲೂ ಬೇರೆಯಾದ ನಿನ್ನ ಸ್ವಂತ ಮಾರ್ಗವನ್ನನುಸರಿಸಿ ಹೋಗು. ಚಕ್ಷುಸ್ಸುಳ್ಳವನೂ ಕಿವಿಯುಳ್ಳವನೂ ಆದ ನಿನ್ನನ್ನು ಪ್ರಾರ್ಥಿಸುತ್ತೇನೆ. ನಮ್ಮ ಪುತ್ರಾದಿಗಳನ್ನು ಹಿಂಸಿಸಬೇಡ.

ಪರಂ ಮೃತ್ಯೋ ಧ್ರುವಂ ಮೃತ್ಯೋ ಧ್ರುವಂ ಪರೇಹಿ ಮೃತ್ಯೋ ಕಥಿತಂ ತೇನ ಮೃತ್ಯೋ ಮೃತಂ ಚ್ಯಾವಯತೇ ಭವತಿ ಮೃತ್ಯೋಮ ದೇವಾನ್ಮುದೇವಾನ್

ನಿರುಕ್ತ

ಈ ದಿವಸ ನಾವು ಮಾಡುತ್ತಿರುವ ಅಪರ ಕರ್ಮವು ಕೊನೆಗೊಂಡಿರುವುದರಿಂದ ನಮಗೆ ಮೃತಾಶೌಚವು ಪರಿಹಾರವಾಗಿರುವುದು. ಆದ್ದರಿಂದ ದೇವತೆಗಳನ್ನೂ, ಪಿತೃಗಳನ್ನೂ, ಉದ್ದೇಶಿಸಿ ನಾವು ಮಾಡುವ ಪಿತೃಮೇಧವೆಂಬ ಯಜ್ಞದಲ್ಲಿ ನಮಗೆ ಶುಭವುಂಟಾಗಲಿ.

ಈ ಕರ್ಮವು ಮುಗಿದ ನಂತರ ನಾವು ಮೃತನ ವಿಷಯವಾದ ದುಃಖದಿಂದ ಮುಕ್ತರಾಗಿ ಮುಂದೆ ನಮ್ಮ ನಮ್ಮ ಕರ್ಮಾನುಷ್ಠಾನಗಳಲ್ಲಿ ಉದ್ಯುಕ್ತರಾಗುವುದಕ್ಕೂ ಪುತ್ರಾದಿಗಳಿಂದ ಕೂಡಿ ಕ್ರೀಡಾ ವಿನೋದಗಳಿಂದ ಕಾಲಯಾಪನೆ ಮಾಡುವುದಕ್ಕೂ ಈ ಶ್ಮಶಾನ ಪ್ರದೇಶದಿಂದ ಹಿಂತಿರುಗಿ ಪೂರ್ವಾಭಿಮುಖವಾಗಿ ನಮ್ಮ ಗೃಹಾದಿಗಳಿಗೆ ಹೋಗೋಣ.

ದೀರ್ಘಾಯುಸ್ಸನ್ನು ಪಡೆದು ಬಹುಕಾಲ ಜೀವಿಸಿರುವುದಕ್ಕಾಗಿ ಈ ಪ್ರದೇಶದಿಂದ ನಮ್ಮ ಮನೆಯ ಕಡೆಗೆ ಹೋಗೋಣ.

ಗರುಡಪುರಾಣ ವಿಷಯ (ಸಂಕ್ಷಿಪ್ತ)

ಮನುಷ್ಯನು ಮೃತನಾದಮೇಲೆ ಅವನನ್ನು ಯಾರು ಎಲ್ಲಿಗೆ ಮತ್ತು ಯಾವ ಯಾವ ಮಾರ್ಗಗಳಿಂದ ಮತ್ತು ಯಾವ ರೀತಿಯಿಂದ ಕರೆದುಕೊಂಡು ಹೋಗುತ್ತಾರೆ ಎಂಬ ವಿಷಯಗಳನ್ನು "ಗರುಡಪುರಾಣ"ದಲ್ಲಿ ಭಗವಂತನಾದ ಶ್ರೀಮನ್ನಾರಾಯಣನು ತನ್ನ ಭಕ್ತಾಗ್ರೇಸರನಾದ ಗರುಡನಿಗೆ ಚೆನ್ನಾಗಿ ಉಪದೇಶ ಮಾಡಿರುತ್ತಾನೆ. ಈ ವಿಷಯಗಳನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಈ ಪುರಾಣದಲ್ಲಿ ಒಟ್ಟು ಹದಿನಾರು ಅಧ್ಯಾಯಗಳಿವೆ. ಮಾನವನು ಸತ್ತ ಮೂರನೇ ದಿನದಿಂದ ಹತ್ತು ದಿನಗಳು ಪೂರ್ತ ಇದನ್ನು ಶ್ರವಣ ಮಾಡಬೇಕು.

ಈ ಭೂಲೋಕದಲ್ಲಿ ಶೌನಕಾದಿ ಮಹರ್ಷಿಗಳು ನಡೆಸುವ ಸತ್ರಯಾಗದಲ್ಲಿ ವಿರಾಮವಿದ್ದ ಕಾಲದಲ್ಲಿ ಸೂತ ಮಹರ್ಷಿಗಳನ್ನು ಕುರಿತು ಪ್ರಶ್ನೆ ಮಾಡಿರುವರು.

ಇಹ-ಪರ ದುಃಖಗಳ ನಿರೂಪಣೆ

ಪಾಪಿಗಳು ಯಾರು? ವೃದ್ಧಾಪ್ಯದ ದುಃಖಗಳು ಏನು? ಮರಣ ಕಾಲದ ದೈವೀ ದೃಷ್ಟಿ, ಯಮದೂತರು, ಪ್ರಥಮ ನರಕದರ್ಶನ, ಪಿಂಡಗಳಿಂದ ದೇಹೋತ್ಪತ್ತಿ ೧೩ನೆಯ ದಿನ ಯಮ ಮಾರ್ಗದಲ್ಲಿ ಪ್ರಯಾಣ ಪ್ರಾರಂಭ ॥ ೧ ॥

ಯಮ ಮಾರ್ಗ

ಯಮ ಮಾರ್ಗದಲ್ಲಿ ಪಾಪಿಯು ಅನುಭವಿಸುವ ದುಃಖಗಳು ಅಸಿಪತ್ರವನ, ವೈತರಣೀ ನದಿ, ಪಾಪಿಯ ಪ್ರಲಾಪ, ಬಾಂಧವರ ಜೊತೆ, ಎಲ್ಲಿ, ಮಾಸಿಕ ಇತ್ಯಾದಿ ಷೋಡಶ ಪಿಂಡಗಳಿಂದ ದಾರಿಯಲ್ಲಿ ಶ್ರಮ ಪರಿಹಾರ, ದಕ್ಷಿಣ ದ್ವಾರದಿಂದ ಯಮಪುರಿಗೆ ಪ್ರವೇಶ ॥ ೨ ॥

ಯಮ ಯಾತನೆಯ ನಿರೂಪಣೆ

ಧರ್ಮಧ್ವಜ, ಚಿತ್ರಗುಪ್ತ, ಶ್ರವಣರು, ಯಮನ ಭಯಂಕರ ಸ್ವರೂಪ ಪಾಪಿಯ ವಿಚಾರಣೆ, ನರಕ ಶಿಕ್ಷೆ, ೨೧ ನರಕಗಳು ॥ ೩ ॥

ನರಕವನ್ನುಂಟುಮಾಡುವ ಪಾಪಕರ್ಮಗಳ ಗುರುತು

ಪಾಪಕರ್ಮಗಳ ವಿವರ, ಯಾವುದರಿಂದ ಯಮ ಮಾರ್ಗ ಪ್ರಾಪ್ತಿ, ಯಾವುದರಿಂದ (ಪಾಪಕರ್ಮ) ವೈತರಣಿಯಲ್ಲಿ ಪತನ, ಯಾವ ಪಾಪಕರ್ಮದಿಂದ ನರಕವಾಸ ॥ ೪ ॥

ಪಾಪ ಚಿಹ್ನೆಗಳ ನಿರೂಪಣೆ

ಮುಂದಿನ ಜನ್ಮದಲ್ಲಿ ಯಾವ ರೋಗ ಬರುತ್ತದೆ? ಯಾವ ಪಾಪಕ್ಕೆ ಯಾವ ಜನ್ಮ? ಪಾಪದ ವಿಷಚಕ್ರ ॥ ೫ ॥

ಪಾಪಿಗಳ ಜನ್ಮಾದಿ ದುಃಖಗಳ ನಿರೂಪಣೆ

ಭ್ರೂಣದ ಉತ್ಪತ್ತಿಯ ವಿವರಗಳು, ಗರ್ಭವಾಸ ದುಃಖಗಳು, ಗರ್ಭದಲ್ಲಿ ಆತ್ಮಜ್ಞಾನ ಹೊರಬಂದೊಡನೆ ವೈಷ್ಣವೀ ಮಾಯೆ, ಶೈಶವ, ಬಾಲ್ಯ ಕೌಮಾರಾವಸ್ಥೆಯ ದುಃಖಗಳು, ಯೌವನದಲ್ಲಿ ದುಷ್ಕಾರ್ಯಗಳು, ಮುಪ್ಪು, ವ್ಯಾಧಿ, ಮರಣ ಮತ್ತು ನರಕ ॥ ೬ ॥

ಬಭ್ರುವಾಹನ ಮಾಡಿದ ಪ್ರೇತಸಂಸ್ಕಾರ

ಸತ್ಪುತ್ರನ ಆವಶ್ಯಕತೆ, ತ್ರೇತಾಯುಗದ ರಾಜ ಬಭ್ರುವಾಹನನ ಇತಿಹಾಸ, ರಾಜನಿಗೆ ಕಾಡಿನಲ್ಲಿ ಒಂದು ಪ್ರೇತದೊಡನೆ ಭೇಟಿ, ಪ್ರೇತತ್ವ ಏಕೆ ಉಂಟಾಗುತ್ತದೆ, ಅದನ್ನು ತಪ್ಪಿಸುವ ವಿಧಾನಗಳೇನು? ಇತ್ಯಾದಿ ॥ ೭ ॥

ಮರಣಕಾಲದಲ್ಲಿ ಮಾಡಬೇಕಾದ ದಾನಗಳ ನಿರೂಪಣೆ

ಅಂತ್ಯಕಾಲದಲ್ಲಿ ಸಾಲಗ್ರಾಮ ಪೂಜೆ, ಭಗವನ್ನಾಮ ಸ್ಮರಣೆ, ದಾನಾದಿಗಳು ಎಂದರೆ ತಿಲ, ಲೋಹ, ಸುವರ್ಣ, ಕಾರ್ಪಾಸ, ಲವಣ, ಸಪ್ತಧಾನ್ಯಗಳು, ಭೂದಾನ, ಗೋದಾನ, ವೇದಾಧ್ಯಯನ ಸಂಪನ್ನನಿಗೆ ಮಾಡುವ ದಾನದಫಲ, ವೈತರಣೀ ಗೋದಾನ, ಶ್ರದ್ಧೆಯಿಂದ ಮಾಡಿದ ಕಾಲವೇ ಕಾಲ, ಧನ, ದೇಹ, ಬಂಧುತ್ವ, ಅನಿತ್ಯ ಧರ್ಮವೇ ಪರಲೋಕ ಮಾರ್ಗದಲ್ಲಿ ಸಹಾಯ, ಆತುರ ದಾನದಿಂದ ದಾನಿಗೆ ಮಹತ್ಪುಣ್ಯ ॥ ೮ ॥

ಮರಣ ಕಾಲದ ವಿಧಿಗಳ ನಿರೂಪಣೆ

ತುಳಸೀಗಿಡ, ಮಂಡಲ, ಗೋಮಯ ಲೇಪನ, ತಿಲವಿಕಿರಣ, ದರ್ಭೆಗಳು, ಅಂತ್ಯಕಾಲದಲ್ಲಿ ಸಾಲಗ್ರಾಮ ತೀರ್ಥ, ಗಂಗಾಜಲಪಾನ, ಭಾಗವತ ಶ್ರವಣ, ಉಪವಾಸ, ಆತುರ ಸಂನ್ಯಾಸ ಸ್ವೀಕಾರ, ಇವುಗಳಿಂದ ಮುಕ್ತಿ ಪ್ರಾಣದ ನಿರ್ಗಮನ, ವಿಮಾನದಲ್ಲಿ ದೇವದೂತರೊಡನೆ ಸ್ವರ್ಗಕ್ಕೆ ಪ್ರಯಾಣ ॥ ೯ ॥

ದಹನ ಮತ್ತು ಅಸ್ಥಿ ಸಂಚಯನ ಕರ್ಮಗಳ ನಿರೂಪಣೆ

ಮುಂಡನ, ಶವಸ್ನಾನ, ಪೂಜೆ, ಅಂತಿಮಯಾತ್ರೆ, ಪ್ರೇತತ್ವ ಪ್ರಾರಂಭ, ಪಂಚಕದಲ್ಲಿ ದಹನದ ವಿಶೇಷ, "ಸತೀ" ಆಗುವ ವಿಧಾನ ಮತ್ತು ಅದರ ಮಹಿಮೆ, ದಹನ ವಿಧಿ, ಮೃತಸ್ಥಾನದಲ್ಲಿ ದೀಪ, ಸಂಚಯನ ಕರ್ಮ, ಗಂಗೆಯ ಮಹಿಮೆ, ವಿದೇಶದಲ್ಲಿ ಮರಣ, ಗರ್ಭಿಣಿ ಮರಣ, ಗರ್ಭನಾಶ, ಶೈಶವ, ಬಾಲ್ಯ, ಕೌಮಾರಾವಸ್ಥೆಗಳಲ್ಲಿ ಮರಣವಾದರೆ ಕರ್ಮದ ವಿಶೇಷಗಳು, ಸಂನ್ಯಾಸಿಗಳ ಅಂತ್ಯಕರ್ಮ ॥ ೧೦ ॥

ಹತ್ತು ದಿನಗಳ ಕರ್ಮ ನಿರೂಪಣೆ

ದುಃಖವನ್ನು ಬಿಟ್ಟು ಕರ್ಮಮಾಡಬೇಕು. ಶ್ರಾದ್ಧಾಧಿಕಾರ, ದಶಗಾತ್ರವಿಧಿ ॥ ೧೧ ॥

ಹನ್ನೊಂದನೇ ದಿನದ ಕರ್ಮ ನಿರೂಪಣೆ

ವಿಧಿಗಳ ವಿವರ, ಪ್ರೇತಶಯ್ಯಾದಾನ, ಮತ್ತು ಇತರ ದಾನಗಳು, ವೃಷೋತ್ಸರ್ಗ, ಷೋಡಶ ಶ್ರಾದ್ಧ ನಿರೂಪಣೆ, ನಾರಾಯಣ ಬಲಿ ॥ ೧೨ ॥

ಸಪಿಂಡನ ಮೊದಲಾದ ಎಲ್ಲಾ ಕರ್ಮಗಳ ನಿರೂಪಣೆ

ವಿಶೇಷ ತಿಥಿಗಳಲ್ಲಿ ಮರಣ ಹೊಂದಿದರೆ ಮಾಸಿಕಾದಿಗಳ ವೈಶಿಷ್ಟ್ಯ, ಗಯಾಶ್ರಾದ್ಧ, ಪಿತೃಗೀತೆ, ಪಿತೃಭಕ್ತಿ ಮಹಿಮೆ, ಪಿತೃಪೂಜಾ ಫಲಗಳು ॥ ೧೩ ॥

ಧರ್ಮರಾಜ ನಗರದ ವರ್ಣನೆ

ಯಮ ಲೋಕದ ಸ್ಥಳ ನಿರ್ದೇಶ, ವಿಸ್ತಾರ, ಚಿತ್ರಗುಪ್ತನ ನಿವಾಸ, ರೋಗಗಳ ಮನೆಗಳು, ಧರ್ಮರಾಜನ ಅರಮನೆಯ ವರ್ಣನೆ, ಸಭಾವರ್ಣನೆ, ಪೂರ್ವ, ಉತ್ತರ, ಮತ್ತು ಪಶ್ಚಿಮ ಮಾರ್ಗಗಳ ವರ್ಣನೆ, ಆ ಮಾರ್ಗಗಳಲ್ಲಿ ಬರಲು ಮಾಡಬೇಕಾದ ಪುಣ್ಯಕರ್ಮಗಳು. ಜ್ಞಾನಿಗೆ ಧರ್ಮರಾಜನ ಸ್ವಾಗತ, ಅವರ ಪರಮಪದ ಸ್ವಾಗತ ಪ್ರಯಾಣ ॥ ೧೪ ॥

ಸುಕೃತಿ ಜನರ ಜನ್ಮ ಮತ್ತು ನಿರೂಪಣೆ

ಸ್ವರ್ಗದ ಸುಖಗಳನ್ನನುಭವಿಸಿ ಸುಕೃತಿಗಳು ಪುಣ್ಯಾತ್ಮರ ಮನೆಯಲ್ಲಿ ಹುಟ್ಟುತ್ತಾರೆ, ಗರ್ಭದಾನ, ಆತ್ಮಾನಾತ್ಮವಸ್ತುವಿವೇಕ, ಪಂಚಭೂತಗಳು, ಅವುಗಳ ಗುಣಗಳು, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು, ದಶನಾಡಿಗಳು, ಪಂಚಪ್ರಾಣಗಳು, ಪಂಚ ಉಪಪ್ರಾಣಗಳು, ವ್ಯವಹಾರಿಕ ಶರೀರದ ವರ್ಣನೆ, ಪಾರಮಾರ್ಥಿಕ ಶರೀರಕ್ಕೆ ಬ್ರಹ್ಮಾಂಡದ ಗುಣಗಳು, ೧೪ ಲೋಕಗಳು, ೭ ಪರ್ವತಗಳು, ೭ ದ್ವೀಪಗಳು, ೭ ಸಾಗರಗಳು, ೯ ಗ್ರಹಗಳು, ಷಟ್ಚಕ್ರ ನಿರೂಪಣೆ, ಸಂಸಾರಿಗಳಿಗೆ ಭಕ್ತಿಯಿಂದಲೇ ಮುಕ್ತಿ ॥ ೧೫ ॥

ಭಗವದ್ಗರುಡ ಸಂವಾದದಲ್ಲಿ ಮೋಕ್ಷಧರ್ಮದ ನಿರೂಪಣೆ

ಬ್ರಹ್ಮ, ಜೀವ, ಮಾನವಜನ್ಮ ಮೋಕ್ಷದ ಸೋಪಾನ, ಸರ್ವ ಶ್ರೇಷ್ಠವಾದ ಮಾನವ ಶರೀರವನ್ನು ಧರ್ಮಕ್ಕೋಸ್ಕರ ಕಾಪಾಡಬೇಕು. ದೇಹ, ಧನ ಮತ್ತು ಬಂಧುತ್ವ, ಅನಿತ್ಯ. ಮೃತ್ಯುಕಾಲ ಅನಿಶ್ಚಿತ, ಇರುವ ಆಯುಃಪ್ರಮಾಣದಲ್ಲಿ ಮೋಕ್ಷಕ್ಕಾಗಿ ಸಾಧಿಸಬೇಕು. ಕೇವಲ ದೇಹ ದಂಡನೆ, ಅರ್ಥವನ್ನು ತಿಳಿಯದೇ ಶಾಸ್ತ್ರಪಠನ ಮತ್ತು ಕರ್ಮಾಸಕ್ತಿ ವ್ಯರ್ಥ. ಜ್ಞಾನದಿಂದಲೇ, ಗುರೂಪದೇಶದಿಂದಲೇ ಮೋಕ್ಷ. ತತ್ತ್ವಜ್ಞನ ದೇಹತ್ಯಾಗವಿಧಿ ಇತ್ಯಾದಿ ವಿಷಯಗಳು ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಅದರಂತೆ ಪುತ್ರನಾದವನು ಶಾಸ್ತ್ರಾರ್ಥ ವಿಧಿಗಳನ್ನು ಚೆನ್ನಾಗಿ ತಿಳಿದವರಿಂದ ತಾನು ತಿಳಿದುಕೊಂಡು ಆಯಾಯ ದಿನಗಳಲ್ಲಿ ಮಾಡಬೇಕಾದ ಕರ್ಮ ಮತ್ತು ದಾನಾದಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ದ್ರವ್ಯ ಲೋಪಾದಿಗಳಿಲ್ಲದಂತೆ ಮಾಡಿದಲ್ಲಿ ತಾನೂ ಸುಕೃತಿಯಾಗುವುದಲ್ಲದೇ ಸತ್ತವನಿಗೂ ಮೋಕ್ಷ ಸಂಪಾದಿಸಿಕೊಟ್ಟಂತಾಗುವುದು. ದ್ರವ್ಯ ಲೋಪವೆಂದರೆ ತನ್ನ ವರಮಾನಕ್ಕೆ ತಕ್ಕಂತೆ ಖರ್ಚು ಮಾಡಬೇಕು. ಬಡವನಾದವನು ತನ್ನ ಮನೆ ಮಠಗಳನ್ನು ಮಾರಿಯಾದರೂ ಶುಭಾಶುಭ ಕರ್ಮಗಳನ್ನು ಮಾಡಬೇಕಾಗಿಲ್ಲ. ಧನಿಕನು ಕೃಪಣತೆಯಿಂದ ಕರ್ಮಗಳನ್ನು ಮಾಡಿದರೆ ಅದೂ ಸಾರ್ಥಕವಾಗುವುದಿಲ್ಲ. ಆದ್ದರಿಂದ ಮನುಷ್ಯನಾದವನು ತಾನು ಮಾಡಬೇಕಾದ ಶುಭಾಶುಭ ಕರ್ಮಗಳನ್ನು ಶ್ರದ್ಧೆಯಿಂದ ಮಾಡಬೇಕು ॥ ೧೬ ॥

ಇತಿಹಾಸ

ಯತ್ಕರೋಷಿ ಯದಶ್ನಾಸಿ, ಯಜ್ಜುಹೋಷಿ ದದಾಸಿಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಮ್ ॥

ನೀನು ಏನೇ ಮಾಡಿದರೂ, ಏನೇ ತಿಂದರೂ, ಏನೇ ಹೋಮ ಮಾಡಿದರೂ, ಏನೇ ದಾನವನ್ನು ಕೊಟ್ಟರೂ, ಏನೇ ತಪಸ್ಸನ್ನು ಮಾಡಿದರೂ ಕೂಡ ಎಲ್ಲವನ್ನೂ ನನಗೆ ಸಮರ್ಪಿಸು. ಅದರ ಫಲಾಫಲಗಳನ್ನು ನಾನು ನೋಡಿಕೊಳ್ಳುತ್ತೇನೆ. "ಕರ್ಮಣ್ಯೇ-ವಾಧಿಕಾರಸ್ತೇ ಮಾಫಲೇಷು ಕದಾಚನ" ಮಾಡುವ ಕರ್ಮವನ್ನು ಮಾತ್ರ ಶ್ರದ್ಧಾಭಕ್ತಿಗಳಿಂದ ಮಾಡು, ಫಲದ ಕಡೆಯೇ ಗಮನವಿಡಬೇಡ ಎಂದು ಗೀತೆಯಲ್ಲಿ ಭಗವಂತನೇ ತಿಳಿಸಿರುವುದರಿಂದ, ಕರ್ಮಗಳನ್ನು ಮಾಡಿ ಋಣಮುಕ್ತನಾಗಲು ಇದಕ್ಕಿಂತ ಬೇರೆ ಮಾರ್ಗವಿಲ್ಲ.

ಹಿಂದೆ ಯಾರಾದರೂ ಸತ್ತವರಿಗೆ ಶ್ರಾದ್ಧ ಸಂಸ್ಕಾರಾದಿಗಳನ್ನು ಮಾಡಿದ್ದರೇ? ಅವರ ಗತಿ ಏನಾಯಿತು? ಎಂಬ ಪ್ರಶ್ನೆಗೆ ಪೂರ್ವದಲ್ಲಿ ನಡೆದ ಇತಿಹಾಸವೊಂದು ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ.

ತ್ರೇತಾಯುಗದಲ್ಲಿ ಮಹೋದಯವೆಂಬ ಪಟ್ಟಣದಲ್ಲಿ ಧರ್ಮಿಷ್ಠನೂ ಮಹಾ ಬಲಶಾಲಿಯೂ ಆದ ಬಭ್ರುವಾಹನನೆಂಬ ರಾಜನು ಅನೇಕ ಯಜ್ಞಯಾಗಾದಿಗಳನ್ನು

ಮಾಡಿ, ದಾನಿಯೂ, ಧನವಂತನೂ, ಬ್ರಾಹ್ಮಣ ಪಕ್ಷಪಾತಿಯೂ, ಸಾಧು ಸಂತರನ್ನು ಸತ್ಕರಿಸುವವನೂ, ಸದ್ಗುಣ ಸಂಪನ್ನನೂ ಆಗಿದ್ದನು. ಅವನು ತನ್ನ ಕುಲಕ್ರಮಾಗತವಾದ ಕ್ಷತ್ರ ಧರ್ಮವನ್ನು ಬಿಡದೇ ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿದ್ದನು.

ಒಂದು ಸಲ ರಾಜನು ಬೇಟೆಯಾಡಲು ಸೈನ್ಯಸಮೇತನಾಗಿ ಕಾಡಿಗೆ ಹೋಗಿ ಅಲ್ಲಿ ಒಂದು ಜಿಂಕೆಯನ್ನು ಕಂಡು ಬಾಣ ಪ್ರಯೋಗ ಮಾಡಲು ಜಿಂಕೆಯು ಬಾಣದ ಹೊಡೆತದಿಂದ ಅತ್ಯಂತ ಗಾಯಗೊಂಡು ಓಡಿಹೋಗಿ ರಾಜನ ಕಣ್ಣಿಗೆ ಕಾಣದಂತಾಯಿತು. ರಾಜನು ಆ ಜಿಂಕೆಯನ್ನು ಹುಡುಕುತ್ತಾ ತುಂಬ ಬಳಲಿದವನಾಗಿ ಮತ್ತೊಂದು ಕಾಡಿಗೆ ಬಂದನು. ದಾಹತಾಪದಿಂದ ಮೂರ್ಛೆಹೋಗುವಂತಿದ್ದನು. ಅಷ್ಟರಲ್ಲಿ ಒಂದು ಜಲಾಶಯವನ್ನು ಕಂಡು ಅದರಲ್ಲಿ ಸ್ನಾನ ಮಾಡಿ ನೀರನ್ನು ಕುಡಿದು, ಈಚೆಗೆ ಬಂದನು. ಸುತ್ತ ನೋಡಿ ಆಯಾಸ ಪರಿಹಾರಕ್ಕಾಗಿ ಅನತಿ ದೂರದಲ್ಲಿದ್ದ ಒಂದು ದೊಡ್ಡ ಆಲದ ಮರದ ಕೊಂಬೆಯನ್ನು ಕಂಡು ಅಲ್ಲಿ ವಿಶ್ರಾಂತಿ ಪಡೆಯಲು ಕುಳಿತನು.

ಆ ಸಮಯಕ್ಕೆ ಸರಿಯಾಗಿ ಹಸಿವು ಬಾಯಾರಿಕೆಯಿಂದ ಕೂಡಿದ ಅತಿ ಭಯಂಕರವಾದ ಪ್ರೇತವೊಂದು ಬಂದು ರಾಜನ ಮುಂದೆ ನಿಂತಿತು. ಎಲೈ ರಾಜನೇ, ನಿನ್ನ ದರ್ಶನದಿಂದಲೇ ನನ್ನ ಪ್ರೇತತ್ವ ನಾಶವಾಗಿ ಪರಮಗತಿಯನ್ನು ಪಡೆದಿದ್ದೇನೆ. ನಾನೇ ಧನ್ಯನೆಂದು ಪ್ರೇತವು ಹೇಳಲು, ರಾಜನು ಆ ಪ್ರೇತದ ಮೂಲಕಾರಣಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳಲು ಕುತೂಹಲಿಯಾದನು.

"ವೈದಶವೆಂಬ ಮಹಾನಗರದಲ್ಲಿ ನಾನು ಯಾವಾಗಲೂ ದೇವತಾರ್ಚನೆಯಲ್ಲಿ ನಿರತನಾಗಿದ್ದೆನು. ಸುದೇವನೆಂಬ ಹೆಸರಿನ ವೈಶ್ಯಜಾತಿಯ ನಾನು ದೇವ ಪಿತೃಗಳನ್ನೆಲ್ಲಾ ತೃಪ್ತಿಪಡಿಸಿರುವೆನು. ನಾನು ಯಥೋಚಿತವಾದ ದಾನ ಧರ್ಮಾದಿಗಳನ್ನೆಲ್ಲಾ ಯಥಾಶಕ್ತಿ ಮಾಡಿರುವೆನು. ಆದರೆ ನನ್ನ ಅದೃಷ್ಟ ಹೀನತೆಯಿಂದ ಸಂತಾನವಾಗಲೀ, ಬಂಧು ಬಾಂಧವರಾಗಲೀ, ಯಾರೂ ದಿಕ್ಕಿಲ್ಲದೇ ಔರ್ಧ್ವದೈಹಿಕ ಕ್ರಿಯೆಯನ್ನು ಯಾರೂ ಮಾಡುವವರಿಲ್ಲವಾಗಿ ನನಗೆ ಈ ಪ್ರೇತತ್ವವುಂಟಾಗಿದೆ. ಆದ್ದರಿಂದ ನೀನು ನನಗೆ ಕ್ರಿಯೆಯನ್ನು ಮಾಡಿ ಉದ್ಧರಿಸು. ಈ ಲೋಕದಲ್ಲಿ ಎಲ್ಲಾ ವರ್ಣದವರಿಗೂ ರಾಜನೇ ಬಂಧುವೆಂದು ಕೇಳಿರುತ್ತೇನೆ. ಎಲೈ ರಾಜನೇ, ನಾನು ನಿನಗೊಂದು ಮಣಿರತ್ನವನ್ನು ಕೊಡುತ್ತೇನೆ. ಆದರಿಂದ ನನ್ನ ಮತ್ತು ಆ ಪ್ರೇತತ್ವ ನಿವೃತ್ತಿಯಾಗಿ ಸದ್ಗತಿಯುಂಟಾಗಲಿ" ಎಂದು ಪ್ರೇತವು ಹೇಳಿತು. ಮತ್ತು ಆ ಪ್ರೇತತ್ವ ನಿವೃತ್ತಿಗೆ ಬೇಕಾದ ವೇದೋಕ್ತ ಕರ್ಮ ಮತ್ತು ಸುವರ್ಣದಾನದ ಮಹಿಮೆಯನ್ನೂ ಹೇಳಿತು. ಆ ಸಮಯಕ್ಕೆ ಸರಿಯಾಗಿ ರಾಜನ ಸೈನ್ಯವೆಲ್ಲವೂ ರಾಜನನ್ನು ಹಿಂಬಾಲಿಸಿದವು. ಆಗ ರಾಜನು ಪ್ರೇತನ ಮಾತುಗಳನ್ನೆಲ್ಲಾ ಚೆನ್ನಾಗಿ ಕೇಳಿ ತಿಳಿದುಕೊಂಡು ಸಪರಿವಾರನಾಗಿ ತನ್ನ ಪಟ್ಟಣಕ್ಕೆ ಬಂದು ವಿಧಿಪ್ರಕಾರವಾಗಿ ಆ ಪ್ರೇತನಿಗೆ ಸಂಸ್ಕಾರಾದಿಗಳನ್ನು ಮಾಡಲು ಆ ಪ್ರೇತವು ಮುಕ್ತಿಯನ್ನು ಪಡೆಯಿತು. ಆದ್ದರಿಂದ ಎಲ್ಲೋ ಇರುವ ಪ್ರೇತನಿಗೆ ಯಾರೋ ರಾಜನು ಕ್ರಿಯೆಗಳನ್ನು ಮಾಡಿ ಮುಕ್ತಿಗೊಳಿಸಿದನೆಂದ ಮೇಲೆ ಸಾಕ್ಷಾತ್ ಮಗನೇ ಮಾತಾಪಿತೃಗಳಿಗೆ ವಿಧಿಪ್ರಕಾರ

ಕರ್ಮಾಂತರಗಳನ್ನು ಮಾಡಿದರೆ ಅವರು ಮುಕ್ತರಾಗಿ ಪಿತೃಲೋಕವನ್ನು ಸೇರುವುದರಲ್ಲಿ ಸಂದೇಹವೇ ಇಲ್ಲವೆಂಬ ಈ ಇತಿಹಾಸವೇ ನಮಗೆ ಪ್ರತ್ಯಕ್ಷ ಪ್ರಮಾಣವಾಗಿದೆ.

ಆದ್ದರಿಂದ ಹಿರಿಯರಾದ ಮಹರ್ಷಿಗಳು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಅವನ ಅನುಗ್ರಹದಿಂದ ವೇದ, ಪುರಾಣ, ಇತಿಹಾಸ, ಸ್ಮೃತಿ, ಸೂತ್ರ, ಧರ್ಮಶಾಸ್ತ್ರ ಇತ್ಯಾದಿ ಗ್ರಂಥಗಳನ್ನು ನಮ್ಮ ಉದ್ಧಾರಕ್ಕಾಗಿಯೇ ಸಿದ್ಧಪಡಿಸಿರುತ್ತಾರೆ. ನಾವುಗಳು ಅವನ್ನೆಲ್ಲಾ ನಮ್ಮ ಕೈಲಾದ ಮಟ್ಟಿಗೆ ಓದಿ ವಿಷಯಗಳನ್ನು ತಿಳಿದುಕೊಂಡು ಅದರಂತೆ ಆಚರಿಸಿದರೆ ನಮಗೂ ಸಹ ಬ್ರಹ್ಮಸಾಕ್ಷಾತ್ಕಾರವು ಆಗಿಯೇ ತೀರುತ್ತದೆ. ಒಂದು ವೇಳೆ ಹೆಚ್ಚಾಗಿ ಓದಲು ಅವಕಾಶವಾಗದಿದ್ದರೂ ಸ್ವಲ್ಪ ಸ್ವಲ್ಪ ವಿಷಯಗಳನ್ನಾದರೂ ಅಧ್ಯಯನ ಮಾಡಬೇಕು. ಅದಕ್ಕೂ ಸಾಧ್ಯವಾಗದಿದ್ದರೆ ಓದಿದವರಿಂದ ವಿಷಯಗಳನ್ನು ತಿಳಿದುಕೊಳ್ಳ ಬೇಕು. ಯಾವುದೂ ಇಲ್ಲದೇ, ಎಲ್ಲವನ್ನೂ ಪರಿಹಾಸ್ಯಮಾಡುತ್ತಾ, ಜ್ಞಾನಿಗಳನ್ನು ತಿರಸ್ಕರಿಸುತ್ತಾ, ಯಾವುದನ್ನೂ ನಂಬದೇ ಇರುವ ಮನುಷ್ಯನು ತನ್ನ ತಂದೆ ತಾಯಿಗಳನ್ನೇ ನಂಬಲಾರನು.

ಇಲ್ಲಿ ಬರೆದಿರುವ ವಿಷಯಗಳನ್ನೆಲ್ಲಾ ಚೆನ್ನಾಗಿ ಅರ್ಥಮಾಡಿಕೊಂಡು ಹಿರಿಯರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ಅನುಷ್ಠಾನ ಮಾಡುತ್ತಾ ನಾನು ಎಲ್ಲಿ ಹುಟ್ಟಿರುವೆನು? ಏತಕ್ಕಾಗಿ ಹುಟ್ಟಿರುವೆನು? ನಾನು ಮಾಡಬೇಕಾದ ಕರ್ತವ್ಯವೇನು? ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡು ಅದರಂತೆ ನಡೆದರೆ ಖಂಡಿತವಾಗಿಯೂ ನಮ್ಮ ದುಷ್ಟಾರಿಷ್ಟಗಳು ಪರಿಹಾರವಾಗಿ ಸುಖ ಸಾಮ್ರಾಜ್ಯಗಳನ್ನು ಅನುಭವಿಸುವುದರಲ್ಲಿ ಸಂಶಯವೇ ಇಲ್ಲ.

ಸಪ್ತವ್ಯಾಧಾ–ವಸೀದಥ

ಹರಿವಂಶದ ಇಪ್ಪತ್ತನಾಲ್ಕನೇ ಅಧ್ಯಾಯದಲ್ಲಿರುವ ಈ ಎರಡು ಶ್ಲೋಕಗಳು ಪಿತೃಯಜ್ಞದ ಮಹಾತ್ಮೆಯನ್ನು ತಿಳಿಸುತ್ತವೆ. ಆದ್ದರಿಂದ ಶ್ರಾದ್ಧಕಾಲದಲ್ಲಿ ಭಕ್ತಿಯಿಂದ ಇಂದಿಗೂ ಪಠಿಸಲ್ಪಡುತ್ತಿವೆ. ಶ್ಲೋಕಗಳ ಶಬ್ದಾರ್ಥದಲ್ಲಿ ಅಂತಹ ಹೆಚ್ಚಿನ ವೈಶಿಷ್ಟ್ಯವು ಕಾಣಿಸದಿದ್ದರೂ, ನಾವು ಶ್ರಾದ್ಧವನ್ನು ಏಕೆ ಮಾಡಬೇಕು? ಎಂದು ವಾದಿಸುವ ನಾಸ್ತಿಕರಿಗೆ ಈ ಶ್ಲೋಕಗಳು ಗಂಭೀರವಾದ ಮತ್ತು ಪ್ರಶಂಸನೀಯವಾದ ಉತ್ತರವನ್ನು ಕೊಡುತ್ತವೆ. ಇದಕ್ಕಾಗಿ ಪೂರ್ವದಲ್ಲಿ ನಡೆದ ಇತಿಹಾಸವನ್ನು ವಿವರಿಸಲಾಗಿದೆ.

ಹಿಂದೆ ಉತ್ತರದೇಶದಲ್ಲಿ ಏಳು ಜನ ಬ್ರಾಹ್ಮಣರು ವಾಸವಾಗಿದ್ದರು. ಅವರು ವಿದ್ಯಾವಿವೇಕಸಂಪನ್ನರಾಗಿದ್ದರೂ ಪ್ರಾರಬ್ಧಕರ್ಮದಿಂದ ಪ್ರೇರಿತರಾಗಿ ಒಂದು ಸಲ ಗೋಹತ್ಯೆಯನ್ನು ಮಾಡಿದರು. ಆದರೂ ವಿವೇಕಿಗಳಾದ ಅವರು ತಾವು ಮಾಡಿದ ಕರ್ಮಕ್ಕೆ ತುಂಬ ಪಶ್ಚಾತ್ತಾಪಪಟ್ಟು ತತ್ಪಾಪ ಪರಿಹಾರ್ಥವಾಗಿ ಆ ಗೋಮಾಂಸವನ್ನು ಪಿತೃದೇವತಾ ಪ್ರೀತ್ಯರ್ಥವಾಗಿ ದಾನಮಾಡಿದರು. ಆದರೂ ಪಾಪದ ಫಲವನ್ನು ಅನುಭವಿಸಿಯೇ ತೀರಬೇಕಷ್ಟೆ. ಅದರಿಂದ ಮುಂದಿನ ಜನ್ಮದಲ್ಲಿ ಆ ಏಳು ಜನರೂ

ಬೇಡರಾಗಿ ಹುಟ್ಟಿದರು. ಆದರೆ ಪಿತೃಯಜ್ಞದ ಫಲದಿಂದ ಅವರಿಗೆ ಪೂರ್ವಜನ್ಮದ ಸ್ಮರಣೆಯಿತ್ತಾದ ಕಾರಣ ತಮ್ಮ ಕುಲದ ಪದ್ಧತಿಯಂತೆ ಭೇಟೆಗಳನ್ನಾಡದೆ, ಸಾಧು ಸ್ವಭಾವದಿಂದಿರುತ್ತಾ ತಮ್ಮ ಜನ್ಮವನ್ನು ಹಾಗೆಯೇ ನೀಗಿದರು. ಮುಂದಿನ ಜನ್ಮದಲ್ಲಿ ಕಾಲಾಂಜನಗಿರಿಯಲ್ಲಿ ಮೃಗಗಳಾಗಿಯೂ ಆ ಮುಂದಿನ ಜನ್ಮದಲ್ಲಿ ಶರದ್ವೀಪದಲ್ಲಿ ಚಕ್ರವಾಕ ಪಕ್ಷಿಗಳಾಗಿಯೂ, ಮತ್ತೊಂದು ಜನ್ಮದಲ್ಲಿ ಮಾನಸ ಸರೋವರದಲ್ಲಿ ಹಂಸ ಗಳಾಗಿಯೂ ಹುಟ್ಟಿದರು. ಆದರೆ ಅವರು ಮಾಡಿದ ಒಂದೇ ಒಂದು ಪುಣ್ಯಕರ್ಮದಿಂದ ಪಿತೃಯಜ್ಞದ ಫಲವಾಗಿ ಅವರಿಗೆ ಆ ಎಲ್ಲಾ ಜನ್ಮಗಳಲ್ಲೂ ಜಾತಿ ಸ್ಮರಣೆಯಿದ್ದಿತು. ಮಾನಸ ಸರೋವರದಲ್ಲಿದ್ದಾಗ ಒಂದು ಸಲ ಅಲ್ಲಿಗೆ ವಿಹಾರಾರ್ಥವಾಗಿ ತನ್ನ ಸೈನ್ಯ ಸಮೇತನಾಗಿ ಒಬ್ಬ ರಾಜನು ಬಂದನು. ಅವನ ವೈಭವವನ್ನು ನೋಡಿ ಆ ಹಂಸಗಳಲ್ಲೊಂದು ಹೀಗೆಂದಿತು. 'ಆಹಾ, ಕಾಲಿಗೆ ಕೈಗೆ ಸೇವೆ ಮಾಡಲು ಜನ, ಕಾಮ್ಯ ವಸ್ತುಗಳು ಎಲ್ಲಿದ್ದರೂ ಕ್ಷಣಮಾತ್ರದಲ್ಲಿ ಅವನಿದ್ದಲ್ಲಿಗೆ ಸಿದ್ಧ. ಸುಖದ ಸುಪ್ಪತ್ತಿಗೆಯಲ್ಲಿರುವ ರಾಜಜನ್ಮವೇ ಸರ್ವಶ್ರೇಷ್ಠ. ಆದ್ದರಿಂದ ನಾನು ಮುಂದಿನ ಜನ್ಮದಲ್ಲಿ ರಾಜನಾಗಿ ಹುಟ್ಟುವೆನು. ಹುಟ್ಟಿದರೆ ಹೀಗೆ ರಾಜನಾಗಿ ಹುಟ್ಟಬೇಕು" ಎಂದು ಹೇಳಿತು. ಇದನ್ನು ಕೇಳಿ ಪಕ್ಕದಲ್ಲಿದ್ದ ಮತ್ತೊಂದು ಹಂಸವು "ಸರಿ ಹಾಗಾದರೆ ನೀನು ರಾಜನಾಗಿ ಹುಟ್ಟುವುದಾದರೆ, ನಾನು ನಿನಗೆ ಮಂತ್ರಿ ಯಾಗಿ ಹುಟ್ಟುವೆನು" ಎಂದಿತು. ಮತ್ತೊಂದು ಹಂಸವು "ತಾನು ಉಪಮಂತ್ರಿಯಾಗಿ ಹುಟ್ಟುವೆನು" ಎಂದು ಹೇಳಿತು.

ಇದನ್ನು ಕೇಳಿದ ಉಳಿದ ನಾಲ್ಕು ಹಂಸಗಳೂ "ಅಯ್ಯೋ ನಾವು ಮಾಡಿದ ಪಾಪದ ಫಲದಿಂದ ಈಗ ಈ ವಿಯೋನಿಗಳಲ್ಲಿ ಹುಟ್ಟಿದ್ದೇ ಸಾಲದೇ, ಸಕಲ ಪಾಪಗಳಿಗೂ, ಮೂಲಸ್ಥಾನವಾದ ಆ ರಾಜನ ಜನ್ಮಕ್ಕಿಂತಲೂ, ಮುಕ್ತಿಪ್ರದವಾದ ಜ್ಞಾನಕ್ಕೆ ಮುಖ್ಯ ಮಾರ್ಗವಾದ ಬ್ರಾಹ್ಮಣ್ಯವನ್ನೇ ಪಡೆಯಲು ಆಶಿಸುವೆವು" ಎಂದವು. ಹೀಗೆ ಆ ಹಂಸಜನ್ಮದ ನಂತರ ತಾವು ಬಯಸಿದಂತೆಯೇ ರಾಜ, ಮಂತ್ರಿ, ಉಪಮಂತ್ರಿ ಗಳಾಗಿಯೂ, ಉಳಿದ ನಾಲ್ವರೂ ಕುರುಕ್ಷೇತ್ರದಲ್ಲಿ ವೇದ ಪಾರಂಗತವಾದ ಬ್ರಾಹ್ಮಣರಾಗಿ ಹುಟ್ಟಿದುವು. ಆದರೆ ಹಂಸಜನ್ಮವನ್ನು ಬಿಡುವುದಕ್ಕೆ ಮುಂಚೆ ಅವುಗಳಲ್ಲಿ ಒಂದು ಒಪ್ಪಂದವಾಗಿತ್ತು. ಬ್ರಾಹ್ಮಣರಾಗಿ ಹುಟ್ಟಿದವರು ಮುಕ್ತಿಮಾರ್ಗವನ್ನನುಸರಿಸಿದಾಗ ರಾಜ ಜನ್ಮದಲ್ಲಿದ್ದವರಿಗೆ ಸೂಚನೆಯನ್ನು ಕೊಡಬೇಕೆಂಬುದೇ ಒಪ್ಪಂದದ ಸಾರಾಂಶವು.

ನಾಲ್ಕು ಜನ ಬ್ರಾಹ್ಮಣ ಕುಮಾರರೂ ಜಾತಿ ಸ್ಮರಣೆಯ ಪ್ರಭಾವದಿಂದ ಯಾವ ಪಾಪಕರ್ಮಗಳನ್ನೂ ಮಾಡದೇ, ಕೇವಲ ಪ್ರಾರಬ್ಧವನ್ನು ಮಾತ್ರ ಅನುಭವಿಸುತ್ತ, ಇರಲು, ಪ್ರಾಪ್ತ ವಯಸ್ಕರಾದರೂ, ವಿವಾಹ ವಿಮುಖವಾದುದನ್ನು ನೋಡಿ ಅವರ ಮಾತಾಪಿತೃ ಗಳು "ಅಯ್ಯೋ ನೀವು ಹೀಗೆ ಸಂನ್ಯಾಸಿಗಳಾಗಿ ಹೋಗುವುದಾದರೆ ನಮ್ಮ ಗತಿಯೇನು? ವೃದ್ಧಾಪ್ಯದಲ್ಲಿ ನಮ್ಮನ್ನು ಪೋಷಿಸುವವರಾರು" ಎಂದು ಗೋಳಾಡಿದರು. ಆಗ ಆ ನಾಲ್ವರೂ ಕೂಡಿ ಒಂದು ಪತ್ರದಲ್ಲಿ ಎರಡು ಶ್ಲೋಕಗಳನ್ನು ಬರೆದುಕೊಟ್ಟು "ಇದನ್ನು ಈ ದೇಶದ ರಾಜನಿಗೆ ತಲುಪಿಸಿದರೆ, ನಿಮ್ಮ ಭವಿಷ್ಯದ ವ್ಯವಸ್ಥೆಯನ್ನು ಅವನು ಮಾಡುವನು"

ಎಂದು ಹೇಳಿದರು. ಅದರಂತೆಯೇ ಅವರು ಆ ಪತ್ರವನ್ನು ರಾಜನಿಗೆ ಕೊಟ್ಟಾಗ, ಕೂಡಲೇ ಅವನಿಗೂ ಜಾತಿಸ್ಮರಣೆಯುಂಟಾಗಿ, ಮಂತ್ರಿ ಉಪಮಂತ್ರಿಗೂ ತಿಳಿಸಿ, ಆ ಮೂವರೂ ರಾಜ್ಯವನ್ನೇ ಆ ಬ್ರಾಹ್ಮಣರಿಗೆ ಕೊಟ್ಟು ಮುಕ್ತಿಮಾರ್ಗವನ್ನು ಅನುಸರಿಸಿ ಹೊರಟ ತಮ್ಮ ಸ್ನೇಹಿತರಾದ ಆ ನಾಲ್ಕು ಜನ ಬ್ರಾಹ್ಮಣ ಕುಮಾರರನ್ನೂ, ಹುಡುಕುತ್ತಾ ಹೊರಟರು.

ಕಥೆಯ ಮುಖ್ಯ ತಾತ್ಪರ್ಯವೆಂದರೆ ಪಿತೃಗಳನ್ನುದ್ದೇಶಿಸಿ ಮಾಡಿದ ಯಾವುದೇ ಕರ್ಮವೂ ಕೇವಲ ಈ ಜನ್ಮದಲ್ಲಿ ಮಾತ್ರವಲ್ಲದೇ ಜನ್ಮಜನ್ಮಾಂತರಗಳಲ್ಲಿಯೂ ಫಲಿಸುತ್ತದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಆಶೌಚಕಾಲದಲ್ಲಿ ಸಂಧ್ಯಾವಿಚಾರ

ಉಪವೀತನಾದವನು ಕಾಲತ್ರಯದಲ್ಲೂ ಸಂಧ್ಯಾವಂದನೆಯನ್ನು ಮಾಡುವುದು ನಿತ್ಯವಾಗಿದೆ. ಆದರೆ "ಅರ್ಘ್ಯಾಂತಾ ಮಾನಸೀ ಸಂಧ್ಯಾ ಸೂತಕಾದೌ ವಿಧೀಯತೇ" ಎಂಬ ಧರ್ಮಶಾಸ್ತ್ರದಂತೆ ಜಾತಾಶೌಚ ಮೃತಾಶೌಚಗಳಲ್ಲಿ ಕೇವಲ ಅರ್ಘ್ಯ ಪ್ರದಾನಾಂತ ಸಂಧ್ಯಾವಂದನೆಯನ್ನು ಮಾತ್ರ ಮಾಡಿದರೆ ಸಾಕು. ಮುಂದೆ ಮಾಡಬೇಕಾಗಿಲ್ಲ. ಆದರೆ "ಅರ್ಘ್ಯಾಂತಾಮಾನಸೀ" ಎಂಬ ಪದಕ್ಕೆ ಅರ್ಘ್ಯದವರೆಗೆ ಮಂತ್ರಗಳನ್ನು ಮನಸ್ಸಿನಲ್ಲೇ ಹೇಳಿಕೊಂಡು ಮಾಡಿ, ಮುಂದಿನದನ್ನೆಲ್ಲಾ ಗಟ್ಟಿಯಾಗಿ ಹೇಳಿಕೊಂಡು ಮಾಡಬೇಕೆಂದು ಹೇಳುತ್ತಾರೆ. ಇದು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿದೆ. ಮತ್ತೆ ಮಾತಾಪಿತೃಗಳು ಮೃತರಾದಾಗ ಕರ್ಮಾರಂಭಕ್ಕೆ ಮುಂಚೆ ಸ್ನಾನ ಮಾಡಿ ನಿತ್ಯವಾದ ತಾತ್ಕಾಲಿಕವಾದ ಸಂಧ್ಯೆಯನ್ನು ಅರ್ಘ್ಯಾಂತವಾಗಿ ಮಾಡಿ ನಂತರ ಕರ್ಮಾರಂಭ ಮಾಡಬೇಕು. ಈ ರೀತಿಯಾಗಿ **ಹತ್ತುದಿನಗಳವರೆಗೂ ಇದೇ ಕ್ರಮವನ್ನು ಪಾಲಿಸಬೇಕು.**

ಹನ್ನೊಂದನೇ ದಿನವೂ ಪ್ರಾತಃ ಕರ್ಮ ಸ್ಥಳದಲ್ಲಿ ಅರ್ಘ್ಯಾಂತ ಸಂಧ್ಯೆಯನ್ನೇ ಮಾಡಿ ಹನ್ನೊಂದನೇ ದಿನ ಕರ್ಮಗಳನ್ನೆಲ್ಲಾ ಮಾಡಿಕೊಂಡು ಮನೆಗೆ ಬಂದು ಸ್ನಾನ ಮಾಡಿ ಭಸ್ಮವನ್ನು ಧರಿಸಿ ವಸ್ತ್ರಗಳನ್ನು ಬೇರೆಯಾಗಿ ಧರಿಸಿ ನೂತನ ಯಜ್ಞೋಪವೀತವನ್ನು ಧರಿಸಿ ಮಾಧ್ಯಾಹ್ನಿಕವನ್ನು ಪೂರ್ತಾಮಾಡಿ ಹಣೆಗೆ ಗಂಧವನ್ನು ಮಾತ್ರ ಹಚ್ಚಿಕೊಂಡು ಭೋಜನ ಮಾಡಬೇಕು.

ನಿತ್ಯಕರ್ಮದ ಸಾಮಾನುಗಳನ್ನು ತೆಗೆದುಕೊಂಡು ಯಜಮಾನನು ಹೊರಗೆ ಹೋಗುವವರೆಗೂ ಮನೆಯಲ್ಲಿ ಪಾಕಾದಿಗಳನ್ನು ಮಾಡಬಾರದು. ಹೊರಗೆ ಹೋದ ನಂತರ ಮನೆಯನ್ನೆಲ್ಲಾ ಶುದ್ಧಿಪಡಿಸಿಕೊಂಡು ಆಶೌಚದ ವಸ್ತ್ರ ಪಾತ್ರಾದಿಗಳನ್ನೆಲ್ಲಾ ಶುದ್ಧಿ ಪಡಿಸಿ ಮನೆಯವರೆಲ್ಲಾ ಸ್ನಾನಾದಿಗಳಿಂದ ಶುದ್ಧರಾಗಿ ಮನೆಗೆ ಪುಣ್ಯಾಹ ಮಾಡಿಸಿ, ನಂತರ ಪಾಕಾದಿಗಳನ್ನು ಮಾಡಬೇಕು. ಈ ದಿನವೇ ಸೋದಕುಂಭಶ್ರಾದ್ಧವು ನಡೆಯಬೇಕು.

ಮಾರನೇ ದಿನ ಅಂದರೆ **ಹನ್ನೆರಡನೆಯ ದಿನ** ಕರ್ತನು ಪೂರ್ತ ಪ್ರಾತಃ, ಮಧ್ಯಾಹ್ನ, ಸಂಧ್ಯೆಯನ್ನು ಮಾಡಿ, ಸ್ನಾನಮಾಡಿ "ಸೋದಕುಂಭ" ಶ್ರಾದ್ಧ ಮಾಡಬೇಕು. ಪುನಃ ಸ್ನಾನ ಮಾಡಿ ಸಪಿಂಡೀಕರಣ ಶ್ರಾದ್ಧಕ್ಕೆ ಸಿದ್ಧನಾಗಬೇಕು. (ಈ ದಿನ ಸೋದಕುಂಭಕ್ಕೆ ಕೇಚಿತ್ಪಕ್ಷ)·

ಈ ಶ್ರಾದ್ಧಕ್ಕೆ ೩ ಪಾವಕ್ಕಿ ಅನ್ನ, ಪಾಯಸ, ಕ್ಲೃಪ್ತ ಭಕ್ಷ್ಯಗಳನ್ನು ಮಾಡಿ, ಇಲ್ಲೇ ಮಾಡಿಕೊಳ್ಳಬೇಕು. ಉಳಿದ ಪಾಕಾದಿಗಳನ್ನೆಲ್ಲಾ ಒಳಗೇ ಮಾಡಿಸಿ ಶ್ರಾದ್ಧ ಸಮಯಕ್ಕೆ ಪಡೆದುಕೊಳ್ಳಬಹುದು.

ಶ್ರಾದ್ಧವು ಮುಗಿಯುತ್ತಲೇ ಕರ್ತನು ಪಿಂಡಗಳನ್ನು ತೆಗೆದುಕೊಡು ನದಿ ಅಥವಾ ಕೆರೆ, ಬಾವಿಗಳಲ್ಲೆಲ್ಲಾದರೂ ಬಿಟ್ಟು ಆ ಪಾತ್ರೆಗಳನ್ನೂ ತೊಳೆದುಕೊಂಡು ಅಲ್ಲೇ ಸ್ನಾನ ಮಾಡಿ ಸೌಕರ್ಯಕ್ಕೆ ತಕ್ಕಂತೆ ಮನೆಗೆ ಬಂದು ಬಾಗಿಲಲ್ಲಿ ಅಡ್ಡವಾಗಿಟ್ಟಿದ್ದ ಒನಕೆಯ ಮೇಲೆ ಕುಳಿತು ಸ್ವಲ್ಪ ಮಾತ್ರ ತೊವ್ವೆಯನ್ನು ತಲೆಗೆ ಹಚ್ಚಿಕೊಂಡು ಯಾರಿಂದಲಾದರೂ ನೀರು ಹಾಕಿಸಿಕೊಂಡು ಸ್ನಾನಮಾಡಬೇಕು. ಕರ್ತನು ಮನೆಗೆ ಬರುವ ಸಮಯಕ್ಕೆ ಸರಿಯಾಗಿ ಬೀದಿ ಬಾಗಿಲಿಗೆ ಮಾತ್ರ ತೋರಣ ಕಟ್ಟಿ, ರಂಗೋಲಿಯನ್ನಿಟ್ಟಿರಬೇಕು. ಕರ್ತನು ಸ್ನಾನ ಮಾಡಿ ಒಳಕ್ಕೆ ಬಂದಾಗ ಅಲ್ಲಿಟ್ಟಿದ್ದ ಮಡಿಕೋಲನ್ನು ನೋಡಿ, ಶುದ್ಧವಸ್ತ್ರಗಳನ್ನು ಧರಿಸಿ, ವಿಭೂತಿಯನ್ನಿಟ್ಟು ಯಜ್ಞೋಪವೀತವನ್ನು ಧರಿಸಿ ಮಧ್ಯಾಹ್ನ ಸಂಧ್ಯೆಯಾಗಿರದಿದ್ದರೆ ಅದನ್ನೂ ಮಾಡಿ, ಪುಣ್ಯಾಹ ಮಾಡಿ ನಿರೀಕ್ಷಿತ ಆಜ್ಯದಾನವನ್ನೂ ಮಾಡಬೇಕು. ಪುರೋಹಿತನು ಕರ್ತನಿಗೆ ಆರತಿ ಮಾಡುತ್ತಾನೆ. ಬಂಧುಗಳಿಂದ ವಸ್ತ್ರಸ್ವೀಕಾರ. ಒಂದೇ ವಸ್ತ್ರವನ್ನು ಕೊಡುತ್ತಾರೆ. ಬಂಧ್ವಾದಿಗಳೊಡನೆ ಭೋಜನ.

ಮೇಲ್ಕಂಡ ಸಪಿಂಡೀಕರಣ ಶ್ರಾದ್ಧದಲ್ಲಿ ಪಿಂಡೋದ್ವಾಸನೆ ಕಾಲದಲ್ಲಿ ಗೋದಾನಾದಿ ದಶದಾನ ಪ್ರತ್ಯಾಮ್ನಾಯ ಯಥಾ ಶಕ್ತಿ ದಕ್ಷಿಣೆಯನ್ನು ಧಾರೆಯೆರೆದಿಟ್ಟಿದ್ದು ವೈಕುಂಠ ಸಮಾರಾಧನೆಯ ದಿನ ಕೊಡುವ ದಾನಗಳೊಡನೆ ಸೇರಿಸಿ ಕೊಡುವುದು. ವೈಕುಂಠ ಸಮಾರಾಧನೆಯ ದಿನ ದಾನಗಳನ್ನು ಮಾಡುವಾಗ ಪುನಃ ಸಂಕಲ್ಪಾದಿಗಳನ್ನು ಮಾಡಬೇಕಾಗಿಲ್ಲ. ಬ್ರಾಹ್ಮಣರು ಭೋಜನಕ್ಕೆ ಕುಳಿತಾಗ ಗಂಧಾಕ್ಷತೆಗಳನ್ನು ಕೊಡುವುದು ಸರಿಯಷ್ಟೆ. ಭೋಜನಾನಂತರ ಊಟದ ತಾಂಬೂಲವನ್ನು ಕೊಡಬೇಕು.

ನಂತರ ಕರ್ತೃಸಂಖ್ಯಾಕ ತಾಂಬೂಲ ಮತ್ತು ಗಂಧಾಕ್ಷತೆ ತಟ್ಟೆಗಳನ್ನು ಪುರೋಹಿತರ ಕೈಗೆ ಕೊಟ್ಟು ಬ್ರಾಹ್ಮಣರಿಂದ ಆಶೀರ್ವಚನವನ್ನು ಪಡೆದು ಕರ್ತರು ಗಂಧಾಕ್ಷತೆಗಳನ್ನು ಆಗಲೇ ಇಟ್ಟುಕೊಳ್ಳಬೇಕು. ಭೋಜನಾನಂತರ ಅವರುಗಳೇ ಆ ತಾಂಬೂಲವನ್ನು ಹಾಕಿಕೊಳ್ಳಬೇಕು. ಬ್ರಹ್ಮಚಾರಿಯು ಕರ್ತೃವಾದಲ್ಲಿ ತಾಂಬೂಲದ ಅವಶ್ಯಕತೆಯೇ ಇಲ್ಲ.

ಆಮೇಲೆ ಕರ್ತೃಗಳಿಗೆ ನಾಲ್ಕಾರು ಹಿತವಚನಗಳನ್ನು ಪುರೋಹಿತರು ಹೇಳಿದ ನಂತರ ದಾನಗಳನ್ನು ಸುಮ್ಮನೆ ಕೊಟ್ಟುಬಿಡುವುದು.

ಆದರೆ ವೈತರಣೀ ಗೋದಾನವನ್ನು ಮಾತ್ರ ಆಗಲೇ ಮಾಡಬೇಕು. ಪ್ರತ್ಯಕ್ಷ ಗೋವನ್ನು ಕೊಡಲು ಕರ್ತನು ಅಶಕ್ತನಾದರೆ ರಜತದ ಗೋವನ್ನಾದರೂ ದಾನ ಮಾಡಬೇಕು.

ಕರ್ತನು ತನ್ನ ಶಕ್ತ್ಯಾನುಸಾರ ದಾನ ಮಾಡಬೇಕು.

ಮೊದಲನೇ ದಿನದಿಂದ ಈ ಕರ್ಮಗಳೆಲ್ಲವೂ ಮುಗಿಯುವವರೆಗೂ ಕರ್ತನಿಗೆ

ಒಂದೇ ಹೊತ್ತು ಊಟ, ರಾತ್ರೆ ಭೋಜನ ನಿಷೇಧ. ಸೂರ್ಯಸ್ತವಾದರೂ ಭೋಜನ ವಿಲ್ಲ. ರಾತ್ರೆ ಊಟಕ್ಕೆ ಬದಲು ಉಪಹಾರ.

ಮೊದಲನೇ ದಿನ ಮನೆಯಲ್ಲಿ ಪಾಕವನ್ನು ಮಾಡಲೇಬಾರದು. ಯಾರ ಮನೆಯಲ್ಲಾದರೂ ಮಾಡಿಸಿ ಮನೆಗೆ ತರಿಸಿಕೊಂಡು ಭೋಜನ ಮಾಡಬೇಕು. ಮೊದಲನೇ ದಿನ ಸೂರ್ಯಸ್ತವಾದರೆ ಕ್ಷೌರ, ಮತ್ತು ನಗ್ನ ಪ್ರಚ್ಛಾದನ ಶ್ರಾದ್ಧಗಳು ನಿಷೇಧ. ಆದ್ದರಿಂದ ಮಾರನೇ ದಿನ ಕ್ಷೌರವಾಗಿ ಮುಂದಿನ ಕಾರ್ಯಗಳು ನಡೆಯುಬಹುದು.

ಸಪಿಂಡೀಕರಣ ಶ್ರಾದ್ಧದಿಂದ ಕರ್ತೃಗಳು ನಾಲ್ಕಾರು ಜನರಿದ್ದರೆ, ಅವರಲ್ಲಿ ಯಾರೊಬ್ಬನ ಪತ್ನಿಯು ಬಹಿಷ್ಠೆಯಾದರೂ ಆ ದಿನದ ಕರ್ಮವನ್ನು ನಿಲ್ಲಿಸಿ ಐದನೇ ದಿನದ ಸ್ನಾನದ ದಿನ ಮಾಡಬೇಕು. ಚತುರ್ಥೇಽಹನಿ ಬಹಿಷ್ಠೆಗೆ ಸ್ನಾನವಾದಮೇಲೆ ಪುನಃ ಸ್ನಾನಮಾಡಿಸಿ, ಇಲ್ಲಿ ಕರ್ಮವನ್ನು ಮಾಡಬಹುದೆಂದು ಕೆಲವರ ಮತ. ಮುಖ್ಯ ಪಕ್ಷವಲ್ಲ.

ಹಿರೀಕರ ಸಾವಿನ ವಿಷಯದಲ್ಲಿ ಮಂಗಳವಾರ, ಶುಕ್ರವಾರಗಳು ಬಂದಾಗ್ಯೂ ಸಹ ಕೈಮಂಡೇ ಶಾಸ್ತ್ರವನ್ನು ಅದೇ ದಿನ ಮಾಡಬೇಕು.

ಯಜಮಾನನು ಬದುಕಿದ್ದೂ ಅವನ ಕನಿಷ್ಠರ ಮೃತಿಯಲ್ಲಿ ಮಾರನೇ ದಿನ ಕೈಮಂಡೆ ಶಾಸ್ತ್ರವನ್ನು ಮಾಡಬೇಕು.

ಕೈಮಂಡೇ ಶಾಸ್ತ್ರವನ್ನು ವೈಕುಂಠಸಮಾರಾಧನೆಯ ಮಾರನೇ ದಿನ ಮಾಡಬೇಕು.

ಶಿಲಾಪಾತ್ರೋದ್ವಾಸನೆ....ದಶಮೇಽಹನಿ ಆ ದಿನದ ಕರ್ಮವನ್ನು ಮಾಡಿ ಮುಗಿಸಿ ಶಿಲಾಪಾತ್ರೆಗಳನ್ನು ಉದ್ವಾಸನೆ ಮಾಡಬೇಕು.

ಶಿಲಾಪಾತ್ರೋದ್ವಾಸನೆಯಾದರೆ ಕೂರ್ಚವೊಂದನ್ನು ಕಟ್ಟಿಟ್ಟು (ಒಂದು ದರ್ಭೆಯದು) ಅದರ ಮೇಲೆ ಧರ್ಮೋದಕವನ್ನು ಕೊಡಬೇಕು. ಕರ್ತನು ಕೊನೆಯಲ್ಲಿ ಧರ್ಮೋದಕ ಕೊಡಬೇಕು. ಶಿಲೆಯ ಮೇಲೆ ಕೊಡಲೇಬಾರದು. ಶಿಲೆಯು ವಿಸರ್ಜನೆಯಾದ ಮೇಲೆ ಅದರ ಮೇಲೆ ಧರ್ಮೋದಕ ಬಿಡುವುದಕ್ಕೆ ಅರ್ಥವಿಲ್ಲ.

ಹದಿಮೂರನೇ ದಿನದ ಮಾಸಿಕದ ವಿಷಯ

ಹನ್ನೆರಡನೇ ದಿನದ ಸಪಿಂಡೀಕರಣ ಶ್ರಾದ್ಧವಾದ ಮಾರನೇ ದಿನ ಮಾಸಿಕಗಳನ್ನೆಲ್ಲಾ ಅಪಕರ್ಷಮಾಡಿ ಶ್ರಾದ್ಧಮಾಡುತ್ತಾರೆ. ಈ ಹನ್ನೆರಡನೇ ದಿನದ ಶ್ರಾದ್ಧವೇ ಮುಖ್ಯ. 'ಯೇತು ದ್ವಾದಶಾಹೇ ಸಪಿಂಡನಂ ಕೃತ್ವಾ ತ್ರಯೋದಶಾಹಾದೌ ಆದ್ಯ ಮಾಸಿಕ ಸಹಿತಾನಾಂ ಷೋಡಶಮಾಸಿಕಾನಾಂ ಆವೃತ್ತಿಂ ಕೃತ್ವಾ ಶ್ರಾದ್ಧಂ ಕುರ್ವಂತಿ, ತೇ ಭ್ರಾಂತಾಃ" ಎಂದು ಧರ್ಮಶಾಸ್ತ್ರೋಕ್ತಿಯಿರುವುದರಿಂದ ನ್ಯಾಯವಾಗಿ ಸಪಿಂಡೀಕರಣವನ್ನು ಮಾಡಿ ಮಾರನೇ ದಿನ ವೈಕುಂಠ ಮತ್ತು ಆ ಮಾರನೇ ದಿನ ಕೈಮಂಡೇ ಶಾಸ್ತ್ರಮಾಡುವುದು ಯುಕ್ತವೆಂದು ತೋರುತ್ತದೆ. ಈ ಸಂಪ್ರದಾಯವು ಕೆಲವರಲ್ಲಿ ಬಂದಿದೆ ಬಹುಜನರಲ್ಲಿ ಮಾಸಿಕವನ್ನು ಮಾಡುವುದೇ ಸಂಪ್ರದಾಯವಾಗಿದೆ.

ಹನ್ನೆರಡನೇ ದಿನ ಸಪಿಂಡೀಕರಣ ಶ್ರಾದ್ಧವಾದ ಮಾರನೇ ದಿನ ವೈಕುಂಠ ಸಮಾರಾಧನೆಯನ್ನು ಮಾಡಿ ದಾನಾದಿಗಳನ್ನು ಕೊಡುವುದು. ಈ ಹನ್ನೆರಡನೇ ದಿನದ ಸಪಿಂಡೀಕರಣ ಶ್ರಾದ್ಧವೇ ಮುಖ್ಯ ಶ್ರಾದ್ಧವು. ಆದರೆ ಮಾರನೇ ದಿನವೇ ಕೈಮಂಡೇ ಶಾಸ್ತ್ರವು. ಈ ದಿನ ಬೆಳಗ್ಗೆ ಕರ್ತನು ತನ್ನ ಕೈಯಿಂದಲೇ (ಮನೆಯವರೆಲ್ಲರೂ) ಸ್ವಲ್ಪ ಎಣ್ಣೆಯನ್ನಿಟ್ಟುಕೊಂಡು ಅಭ್ಯಂಜನ ಮಾಡಿಕೊಂಡು ಶುದ್ಧವಸ್ತ್ರಧಾರಿಗಳಾಗಿ ನಿತ್ಯಾಹ್ನಿಕ ಗಳನ್ನು ಮುಗಿಸಿ ದೇವರುಗಳನ್ನೆಲ್ಲಾ ತೊಳೆದು ಆ ಮನೆಯನ್ನೂ ಶುದ್ಧಿಗೊಳಿಸಿ ದೇವತಾರ್ಚನೆಯನ್ನು ಮಾಡಬೇಕು. ಇಲ್ಲಿಯವರೆಗೂ ದೇವತಾರ್ಚನೆಗೆ ಅವಕಾಶವಿಲ್ಲ. ಹನ್ನೆರಡನೆಯ ದಿನ ಶ್ರಾದ್ಧಕಾಲಕ್ಕೆ ದೇವರಿಗೆ ತುಪ್ಪದ ದೀಪವನ್ನು ಮಾತ್ರ ಹಚ್ಚಿರಬೇಕು. ದೇವತಾರ್ಚನೆಯಲ್ಲಿ ಅನ್ನ, ಸಾರು, ಹುಳಿ, ಹೂರಣದ ಒಬ್ಬಟ್ಟುಗಳನ್ನು ನಿವೇದನ ಮಾಡಬೇಕು. ತೊವ್ವೆ, ಪಾಯಸಾದಿಗಳಿಲ್ಲ. ದೇವತಾರ್ಚನೆಯು ಮುಗಿದ ಮೇಲೆ ಹಣ್ಣುಕಾಯಿಗಳನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋಗಿ ನೈವೇದ್ಯಮಾಡಿಸಿ ಮಂಗಳಾರತಿಯನ್ನು ತೆಗೆದುಕೊಂಡು ಭಗವಂತನಲ್ಲಿ ಇತಃಪರ ಅಶುಭವುಂಟಾಗದಂತೆ ಪ್ರಾರ್ಥಿಸಿಕೊಂಡು ಮನೆಗೆ ಹಿಂತಿರುಗಿ ಬರುವುದು. ಭೋಜನ ಮಾಡುವುದು. ಬೆಳಿಗ್ಗೆ ಅನಾನುಕೂಲವಾದರೆ ಸಂಜೆಯಾದರೂ ದೇವದರ್ಶನಕ್ಕೆ ಹೋಗಿ ಬರಬೇಕು. ಆದರೆ ವೈಕುಂಠ ಸಮಾರಾಧನೆಯ ದಿವಸ ದೇವಸ್ಥಾನಕ್ಕೆ ಹೋಗಲೇಬಾರದು. ಹದಿನಾಲ್ಕು ದಿನಗಳಿಂದಲೂ (೧೩ ದಿನ) ಆಶೌಚಸ್ನಾನ ಮಾಡಿ ಅಪರಕರ್ಮಗಳನ್ನು ಮಾಡಿ ಅಶುಚಿಯಾಗಿರುವುದರಿಂದ ಈ ಕೈಮಂಡೇ ಶಾಸ್ತ್ರದ ದಿನ ಅಭ್ಯಂಜನ ಮಾಡಿಕೊಂಡು ನಿತ್ಯಾಹ್ನಿಕ, ದೇವತಾರ್ಚನೆಗಳನ್ನು ಮಾಡಬೇಕು. ವೈಕುಂಠ ಸಮಾರಾಧನೆಯ ದಿನ ದೊಡ್ಡದಾಗಿ ರುದ್ರಾಭಿಷೇಕಾದಿಗಳನ್ನು ಮಾಡಿಸುವುದು ಅಪರಾಧ.

ಅಕ್ಕ ತಂಗಿಯರು ಅಪುತ್ರವಂತರಾಗಿದ್ದು ಗಂಡನೂ ಸತ್ತಿದ್ದರೆ ಅವರ ಕರ್ಮವನ್ನು ಅಣ್ಣ ತಮ್ಮಂದಿರು ಮಾಡಬಹುದು ಸಮೀಪದ ಜ್ಞಾತಿಗಳಿಲ್ಲದಿದ್ದರೆ ಮಾತ್ರ ಈ ಕ್ರಮವು.

ಪಿತಾಮಹಿಯು ಮೃತಳಾದರೆ, "ಪಿತಾಮಹೀ ತದ್ಭರ್ತುರ್ಮಾತೃಪಿತಾಮಹೀ ಎಂದೂ, ಮಾತಾಮಹಿಯು ಮೃತಳಾದರೆ "ಮಾತಾಮಹೀ ತದ್ಭರ್ತುರ್ಮಾತೃ ಪಿತಾಮಹೀ" ಎಂದೂ ಹೇಳುತ್ತಾ ಶ್ರಾದ್ಧ ಮಾಡಬೇಕು.

ಮಾತಾಪಿತೃಗಳ ಮೃತಿಯಲ್ಲಿ ತಾಯಿಯ ನಿತ್ಯ ಕ್ರಿಯೆಯನ್ನು ಆಯಾಯ ದಿನ ಮುಗಿಸಿ ಮನೆಗೆ ಬಂದು ಸ್ನಾನ ಮಾಡಿ ಅರ್ಘ್ಯಾಂತ ಮಾಧ್ಯಾಹ್ನಿಕ ಮಾಡಿ ವಿಭೂತಿ ಮಾತ್ರ ಧರಿಸಿ ಭೋಜನ ಮಾಡುವುದು. ತಂದೆಯಾದರೆ ಲಲಾಟ ಶೂನ್ಯವೇ.

ಕರ್ತನು ಹನ್ನೊಂದನೇ ದಿನ ಕರ್ಮಗಳನ್ನೆಲ್ಲಾ ಮುಗಿಸಿ ಮನೆಗೆ ಬಂದು ಪುನಃ ಸ್ನಾನ ಮಾಡಿ ಉಪವೀತವನ್ನು ಧರಿಸಿ ಪೂರ್ತಾ ಮಾಧ್ಯಾಹ್ನಿಕ ಮಾಡಿ ಹಣೆಗೆ ವಿಭೂತಿ ಗಂಧಗಳನ್ನಿಟ್ಟು ಭೋಜನ ಮಾಡಬೇಕು. ಈ ದಿನ ಪ್ರಾತಃ ಉಪವೀತ ಧಾರಣೆಯಿಲ್ಲ.

ಮಾತಾಪಿತ್ರಾದಿಗಳು ಸತ್ತ ಹನ್ನೊಂದನೇ ದಿನ ಕರ್ತನು ಹೊರಗೆ ಹೋದಮೇಲೆ ವೃಷೋತ್ಸರ್ಗವನ್ನು ಮಾಡಿಕೊಂಡು ಮುಂದಿನ ಕರ್ಮಾದಿಗಳನ್ನು ಮಾಡಬೇಕು. ನಂತರ

ಮನೆಯನ್ನೆಲ್ಲಾ ಶುದ್ಧಪಡಿಸಿಕೊಂಡು ಪುಣ್ಯಾಹ ಮಾಡಿಸಿದ ನಂತರ ಪಾಕಾದಿಗಳು ನಡೆಯಬೇಕು.

ಹನ್ನೆರಡನೆಯ ದಿನ ಬೆಳಿಗ್ಗೆ ಮನೆಯಲ್ಲಿ ಕರ್ತನು ಸ್ನಾನ ಮಾಡಿ ಪ್ರಾತಃ ಸಂಧ್ಯೆಯನ್ನು ಮಾಡಿರುವುದು. ಸಕಾಲದಲ್ಲಿ ಮಾಧ್ಯಾಹ್ನಿಕವನ್ನೂ ಮಾಡುವುದು. ನಂತರ ಕರ್ಮಾಂಗ ಸ್ನಾನ ಮಾಡಿ ಶ್ರಾದ್ಧಾರಂಭ ಮಾಡುವುದು. ಈ ಕಾಲದಲ್ಲಿ ದೇವರ ಮುಂದೆ ತುಪ್ಪದ ದೀಪ ಹಚ್ಚಿಡಬೇಕು.

ಮಾಸಿಕ ಮತ್ತು ವೈಕುಂಠ ದಿನವೂ ದೇವರ ದೀಪವುಂಟು, ಪೂಜಾದಿಗಳಿಲ್ಲ.

ಮಾತಾಪಿತೃಗಳು ಮೃತರಾದ ವರ್ಷ ಮನೆಯಲ್ಲಿ ಯಾವ ಶುಭಕರ್ಮಗಳನ್ನೂ ಮಾಡಬಾರದು ಆದರೆ ಮನೆಯಲ್ಲಿ ಗೌರಮ್ಮನನ್ನು ಕೂಡಿಸದೇ, ಕೂಡಿಸಿರುವ ಮನೆಗೆ ಹೋಗಿ ಪೂಜೆಯನ್ನು ಮಾತ್ರ ಮಾಡಿಕೊಂಡು ಬರಬೇಕು. ಪುರೋಹಿತರಿಗೆ ಉಪವಾಯನ ದಾನವನ್ನು ಕೊಡಬಹುದು. ಮರದ ಬಾಗಿನ ಕೊಡಬಾರದು. ಈ ನಿಯಮವು ಕರ್ತೃ ಪತ್ನಿಗೆ ಸೇರಿದ್ದು. ಸುಬ್ರಹ್ಮಣ್ಯ ಷಷ್ಠಿ ಮಾಡಬಹುದು. ಹೆಣ್ಣು ಮಕ್ಕಳಿಗೆ ಈ ಅಂಗವಾಗಿ ಅರಿಶಿನ ಕುಂಕುಮಾದಿಗಳನ್ನೂ ಕೊಡಬಹುದು.

ಕರ್ತೃವಿನ ನಿಯಮ

ಗುರುಗಳು, ಅಣ್ಣ-ತಮ್ಮಂದಿರು, ಅಕ್ಕತಂಗಿಯರು, ಸೋದರಮಾವ, ಸೋದರತ್ತೆ, ಹೆಣ್ಣುಕೊಟ್ಟ ಮಾವ, ಇವರುಗಳ ಮನೆಗೆ ಹೋಗಿ ಭೋಜನಾದಿಗಳನ್ನು ಮಾಡಬಹುದು. (ನಿಯಮದಿಂದ) ಈ ವರ್ಷ ಪೂರ್ತಿ ಬ್ರಹ್ಮಚರ್ಯೆ ನಿಯಮದಂತೆ ಶುದ್ಧನಾಗಿರಬೇಕು. ಲಗ್ನವಾಗುವ ಹೆಣ್ಣುಮಕ್ಕಳಿದ್ದರೆ ಆರು ತಿಂಗಳಾದ ಮೇಲೆ ವಿಧಿಯಿಲ್ಲದಿದ್ದರೆ ಲಗ್ನವನ್ನೂ ಮಾಡಬಹುದು.

ಅಮಾವಾಸ್ಯೆ ಸಂಕ್ರಮಣ ದಿನಗಳು ಮಾತಾಪಿತೃಗಳು ಸತ್ತು ಕ್ರಿಯಾದಿಗಳನ್ನು ಮಾಡುತ್ತಿರುವಾಗಲೂ ಸಹ ರಾತ್ರೆ ಭೋಜನ ನಿಷೇಧ. ಮತ್ತು ಅಸ್ಥಿಗಳನ್ನು ನದ್ಯಾದಿಗಳಲ್ಲಿ ಬಿಟ್ಟು ಬರುವಾಗ ಸೂರ್ಯಸ್ತವಾಗಿ ಬಿಟ್ಟಿದ್ದರೂ ರಾತ್ರೆ ಭೋಜನ ನಿಷೇಧ. ಉಪಹಾರಾದಿಗಳನ್ನು ತೆಗೆದುಕೊಳ್ಳಬಹುದು.

ಅಣ್ಣ ತಮ್ಮಂದಿರು ಒಟ್ಟಿಗೆ ಸೇರಿ ಶ್ರಾದ್ಧ ಮಾಡುತ್ತಿದ್ದು ಕಾರಣಾಂತರದಿಂದ ತೀರ್ಥಯಾತ್ರೆ ಹೋಗಿದ್ದಾಗ ಅವರಲ್ಲಿ ಯಾರೇ ಆಗಲಿ ಅಲ್ಲಿ ತೀರ್ಥಶ್ರಾದ್ಧ ಮಾಡಬಹುದು ಮತ್ತು ಮಕ್ಕಳುಗಳ ವಿವಾಹವನ್ನು ಮಾಡಿರುವ ಅಣ್ಣ ತಮ್ಮಂದಿರಲ್ಲಿ ಕಾರಣಾಂತರದಿಂದ ತೀರ್ಥ ಯಾತ್ರೆಯು ಒದಗಿದಲ್ಲಿ ತೀರ್ಥಶ್ರಾದ್ಧವನ್ನು ಮಾಡಬಹುದು.

ಯುಗಾದಿ ಹಬ್ಬ, ದೀಪಾವಳೀ ಹಬ್ಬ, ಈ ಎರಡು ದಿನಗಳಲ್ಲಿ ಅಭ್ಯಂಜನ ಮಾಡಿಕೊಳ್ಳಲೇಬೇಕು. ಆದರೆ ಆ ದಿನ ಶ್ರಾದ್ಧವಾಯಿತೆಂದರೆ ಪ್ರಾತಃ ಅಭ್ಯಂಜನವನ್ನು ಮಾಡಿಕೊಂಡು ಶ್ರಾದ್ಧಾರಂಭ ಕಾಲಕ್ಕೆ ಪುನಃ ಸ್ನಾನ ಮಾಡಿ ಶ್ರಾದ್ಧಾರಂಭ ಮಾಡಬೇಕು.

ಅಣ್ಣತಮ್ಮಂದಿರು ಒಟ್ಟಿಗೆ ಸೇರಿ ಶ್ರಾದ್ಧಮಾಡುತ್ತಿರುತ್ತಾರೆ. ಸಹೋದರರಲ್ಲಿ ಯಾರಿಗಾದರೂ ಆಶೌಚಾದಿಗಳು ಬಂದರೆ ಉಳಿದವರು ಮೃತದಿನವೇ ಶ್ರಾದ್ಧ ಮಾಡಬೇಕು. ಆಶೌಚಿಗಳು ಮಾತ್ರ ಸ್ನಾನದ ದಿನವೇ ಶ್ರಾದ್ಧ ಮಾಡಬೇಕು. (ಹನ್ನೊಂದನೆಯ ದಿನ)

ಮಾತಾಪಿತೃಗಳು ಮೃತರಾದ ದಿನ ಸಹೋದರರೆಲ್ಲರೂ ಒಟ್ಟಿಗೆ ಸೇರಬೇಕು. ಒಂದು ವೇಳೆ ಜ್ಯೇಷ್ಠನು ಬರಲು ಅನಾನುಕೂಲವಾದರೆ ಕನಿಷ್ಠನೋ, ಮತ್ತೊಬ್ಬನೋ ಯಾರಾದರೂ ಸಮೀಪದಲ್ಲಿದ್ದು ಹನ್ನೊಂದನೆಯ ದಿನದ ಕೆಲಸದವರೆಗೂ ಕರ್ಮಗಳನ್ನೆಲ್ಲಾ ಮಾಡಿರಬಹುದು. ಹನ್ನೆರಡನೇ ದಿನದ ಸಪಿಂಡಿಯನ್ನು ಜ್ಯೇಷ್ಠನು ಮಾತ್ರ ಮಾಡಬೇಕು. ಜ್ಯೇಷ್ಠನು ಆ ದಿನವೂ ಬರಲು ಅನಾನುಕೂಲವಾದರೆ ಅವನ ಅಪ್ಪಣೆಯನ್ನು ಪಡೆದು ಎರಡನೆಯವನು ಅಥವಾ ಕನಿಷ್ಠನು ಮಾಡಬೇಕು.

ಹತ್ತು ದಿನದ ದಾಯಾದಿಗಳು ಮೃತರಾದರೆ ಕ್ರಮವಾಗಿ ಹತ್ತು ದಿನಗಳಿರಬೇಕು. ಹತ್ತು ದಿನಗಳೊಳಗೆ ಯಾವ ದಿನವೇ ತಿಳಿದರೂ ಉಳಿದ ದಿನಗಳಿದ್ದು ಹನ್ನೊಂದನೇ ದಿನ ಸ್ನಾನಮಾಡಬೇಕು.

ಅಂತರ್ದಶಾಹಾಶೌಚ

ದಾಯಾದಿಗಳು ಸತ್ತ ಹತ್ತುದಿನದೊಳಗೆ ಮತ್ತೆ ಯಾರೇ ದಾಯಾದಿಗಳು ಸತ್ತರೂ ಹಳೆಯ ಆಶೌಚದಲ್ಲೇ ಹೊಸ ಆಶೌಚಗಳು ಎಷ್ಟೇ ಬಂದರೂ ಎಲ್ಲವೂ ಕಳೆದುಹೋಗುತ್ತವೆ. ಆದರೆ ಮಾತಾಪಿತೃಗಳ ಆಶೌಚವು ಮಾತ್ರ ಕಳೆಯುವುದಿಲ್ಲ. ಅದೇ ಮಾತಾಪಿತೃಗಳು ಮುಂಚೆ ಗತಿಸಿದ್ದರೆ ಅವರ ಆಶೌಚದಲ್ಲೇ ದಾಯಾದಿಗಳ ಆಶೌಚವು ಕಳೆದುಹೋಗುತ್ತದೆ. ಕ್ರಿಯಾದಿಗಳ ವಿಷಯದಲ್ಲಿಯೂ ಕೂಡ ಮಾತಾಪಿತೃಗಳಲ್ಲಿ ಮೊದಲು ತಾಯಿಯು ಸತ್ತು ಹತ್ತು ದಿನದೊಳಗೆ ತಂದೆಯು ಸತ್ತರೆ ಹನ್ನೊಂದನೇ ದಿನದ ಕರ್ಮಗಳನ್ನೆಲ್ಲಾ ಮಾಡಿದ್ದು, ನಂತರ ತಂದೆಯ ಕರ್ಮಗಳನ್ನು ಮಾಡುತ್ತಾ ಸಪಿಂಡಿಯನ್ನೂ ಮಾಡಿ ಮಾರನೇ ದಿನ ತಾಯಿಯ ಸಪಿಂಡಿಯನ್ನು ಮಾಡಬೇಕು. ಒಂದೇ ದಿನ ಎರಡು ಸಪಿಂಡಿಗಳನ್ನು ಮಾಡಬಾರದು. ಆ ಮಾರನೇ ದಿನ ತಂದೆಯ ಮಾಸಿಕವನ್ನು ಮಾಡಿ ಆ ದಿನವೇ ತಾಯಿಯ ಮಾಸಿಕವನ್ನೂ ಪೃಥಕ್ಪಾಕದೊಡನೆ ಮಾಡಬೇಕು. ಅಸಾಧ್ಯವಾಗಿ ಕಂಡಲ್ಲಿ ಮಾರನೇ ದಿನವೇ ತಾಯಿಯ ಮಾಸಿಕವನ್ನು ಮಾಡಿ ಆ ಮಾರನೇ ದಿನವೇ ಒಟ್ಟಿಗೆ ವೈಕುಂಠವನ್ನು ಮಾಡಬೇಕು. ದಾಯಾದಿಗಳು ಮುಂಚೆ ಸತ್ತಿದ್ದು ನಂತರ ಎಂದರೆ ದಶಾಹದೊಳಗೆ ಮಾತಾಪಿತೃಗಳು ಗತಿಸಿದರೆ ಮಾತಾಪಿತೃಗಳ ಕರ್ಮವೇ ಮುಖ್ಯವಾದ್ದರಿಂದ ಇದನ್ನೇ ಅನುಷ್ಠಾನ ಮಾಡಬೇಕು.

ಅಧಿಕಮಾಸ ಮರಣ

ಯಾರಾದರೂ ಅಧಿಕಮಾಸದಲ್ಲಿ ಮೃತರಾದರೆ ಕಾಲಾಂತರದಲ್ಲಿ ಅದೇ ಅಧಿಕಮಾಸವು ಬಂದಾಗ ಆ ಅಧಿಕಮಾಸ ಮೃತ ತಿಥಿಯ ದಿನವೇ ಕಾಲಶ್ರಾದ್ಧವನ್ನು ಮಾಡಬೇಕು. ನಿಜಮಾಸದಲ್ಲಿ ಏನನ್ನೂ ಮಾಡಬೇಕಾಗಿಲ್ಲ.

"ಮಲಿಮ್ಲುಚೇಮಾಸಿ ಮೃತಸ್ಯ ಪುಂಸಃ ತ್ರಯೋದಶೇತು ಪ್ರಥಮಾಬ್ದಿಕಂ ಸ್ಯಾತ್। ಮಧ್ಯಾದಿಕೇ ಚಾऽಪಿ ತಥೈವ ಕುರ್ಯಾತ್ ಅಂತ್ಯಾऽದಿಕೇ ದ್ವಾದಶಮಾಸ ಏವ" ಎಂಬ ಶಾಸ್ತ್ರದಂತೆ ಅಧಿಕ ಮಾಸದಲ್ಲಿ ಸತ್ತವನಿಗೆ ಹದಿಮೂರನೇ ತಿಂಗಳಿನಲ್ಲಿಯೂ, ವರ್ಷ ಮಧ್ಯದಲ್ಲಿ ಅಧಿಕವು ಬಂದಾಗಲೂ ಹದಿಮೂರನೇ ತಿಂಗಳಲ್ಲಿ ಪ್ರಥಮಾಬ್ದಿಕವನ್ನು ಮಾಡಬೇಕು. ನಿಜಮಾಸದಲ್ಲಿ ಅಂದರೆ ಹನ್ನೆರಡನೆಯ ತಿಂಗಳು ಅಧಿಕಮಾಸವು ಬಂದರೆ ಪ್ರಥಮಾಬ್ದಿಕವನ್ನು ಆಗಲೇ ಮಾಡಬೇಕು. ಮುಂದೆ ಏನನ್ನೂ ಮಾಡಬೇಕಾಗಿಲ್ಲ. ಇದಕ್ಕೆ ಉದಾಹರಣೆ:

ಅಧಿಕ ಮಾಸದ ಮೃತಾಹಸ್ಸಿನ ದಿವಸ ಅಂದರೆ ೩೦ ನೇ ದಿನ "ಆದಿಪಾರ್ವಣ ಶ್ರಾದ್ಧೇ" ಎಂದು ಪಾರ್ವಣ ಶ್ರಾದ್ಧವನ್ನು ಮಾಡಿ ನಿಜಮಾಸ ೨೮ನೇ ಅಂದರೆ ಅಧಿಕದಿಂದ ೫೮ನೇ ದಿನ ನಿಜಮಾಸ ಊನಮಾಸಿಕ ಮಾಡುವುದು. ಅಪರ ದಿವಸ ದ್ವಿತೀಯ ಮಾಸಿಕ ನಿಜಮಾಸ ೪೦ ದಿನಗಳ ಮೇಲೆ ೪೫ ದಿನಗಳ ಒಳಗೆ ಅಂದರೆ ೭೦ ದಿವಸದ ಮೇಲೆ ೭೫ ದಿನಗಳ ಒಳಗೆ ತ್ರಯ ಪಕ್ಷ ಮಾಸಿಕ ಮಾಡಬೇಕು.

ಇದಕ್ಕೆ ಉದಾಹರಣೆ: ಅಧಿಕ ಆಷಾಢ ಮಾಸದ ಶುಕ್ಲಪಕ್ಷದ ಸಪ್ತಮಿ ದಿನ ದೇವದತ್ತನು ಮೃತನಾಗಿರುತ್ತಾನೆ.

ನಿಜ ಆಷಾಢಶುಕ್ಲ ಸಪ್ತಮಿ ದಿನ "ಆದಿಪಾರ್ವಣ ಶ್ರಾದ್ಧೇ" ಎಂದು ತಿಂಗಳ ಶ್ರಾದ್ಧ ಮಾಡಬೇಕು.

೨. ಶ್ರಾವಣ ಶುಕ್ಲಸಪ್ತಮಿ, ತತ್ಪೂರ್ವ ಅಥವಾ ಅದರ ಹಿಂದಿನ ದಿನ ಊನ ಮಾಸಿಕ ಮಾಡಬೇಕು. ಸಪ್ತಮಿ ದಿನ ದ್ವಿತೀಯಾ ಮಾಸಿಕ. ನಂತರ ತ್ರೈಪಕ್ಷ, ತೃತೀಯ, ತುರೀಯ ಅಥವಾ ಚತುರ್ಥ, ಪಂಚಮ, ಷಷ್ಠ (ಷಾಣ್ಮಾಸಿಕ) ಉನಷಾಣ್ಮಾಸಿಕ, ಸಪ್ತಮ, ಅಷ್ಟಮ, ನವಮ, ದಶಮ, ಏಕಾದಶ, ದ್ವಾದಶ ಅಥವಾ ಆಬ್ದಿಕ, ಊನಾಬ್ದಿಕ ಮಾಸಿಕಗಳು.

ತ್ರಯ ಪಕ್ಷ ಮಾಸಿಕವು ೪೦ ದಿನಗಳ ಮೇಲೆ ೪೫ ದಿನಗಳೊಳಗೆ ಊನಷಾಣ್ಮಾಸಿಕವು ಸಪ್ತಮ ಮಾಸಿಕಕ್ಕೆ ಹತ್ತು ದಿನಗಳ ಮುಂಚಿನಿಂದಿದೆ.

ಅಬ್ದವಿಮೋಕ–ಆಷಾಢ ಶುಕ್ಲ ಷಷ್ಠೀ

ಆಷಾಢ ಶುಕ್ಲ-ಸಪ್ತಮಿ ಪ್ರಥಮಾಬ್ದಿಕ

ಆಷಾಢ ಶುಕ್ಲ-ಅಷ್ಟಮಿ ವೈಕುಂಠ

ಮಲಮಾಸ ಶ್ರಾದ್ಧಂ

ಮಾತಾಪಿತೃಗಳು ಸತ್ತ ವರುಷದ ಮಧ್ಯದಲ್ಲಿ ಅಧಿಕಮಾಸವು ಬಂದರೆ ಪಾರ್ವಣ ಶ್ರಾದ್ಧವನ್ನೇ ಕ್ರಮವಾಗಿ ಮಾಡಬೇಕು. ಸಂಕಲ್ಪ ಶ್ರಾದ್ಧವನ್ನು ಮಾಡಬಾರದು.

ಪ್ರೇತಸ್ಯ ತಾತೋ ಯದಿ ಜೀವತಿಸ್ಯಾತ್ ಪ್ರೇತಾರ್ಘ್ಯ ಪಿಂಡಸ್ಯ ಕಥಂ ವಿಧಿಃ ಸ್ಯಾತ್ । ಭಾಗದ್ವಯಂ ಸ್ಯಾತ್ತು ಪಿತಾಮಹೇನ ಭಾಗೈಕಶೇಷಂ ಪ್ರಪಿತಾಮಹೇನ ।

ದೇವದತ್ತನೆಂಬುವನು ಸತ್ತರೆ ಅವನ ತಂದೆಯು ಬದುಕಿರುತ್ತಾನೆ. ಯಾವ ರೀತಿಯಾಗಿ ನಾಮೋಚ್ಚಾರಣೆ ಮಾಡಿ ಅರ್ಘ್ಯ ಪಿಂಡಾದಿಗಳನ್ನು ಕೊಡಬೇಕೆಂದರೆ ಸತ್ತವನ ಹೆಸರನ್ನೇ ಎರಡಾವರ್ತಿ ಉಚ್ಚರಿಸಿ ಪ್ರಪಿತಾಮಹನ ಹೆಸರನ್ನು ಒಂದು ಸಲ ಉಚ್ಚರಿಸಬೇಕು. ಉದಾಹರಣೆಗೆ ಸತ್ತವನು ದೇವದತ್ತ ಇವನ ತಂದೆ ಶ್ರೀಧರ ದೇವ, ಶ್ರೀಧರ ದೇವನ ತಂದೆ ಗುರುದತ್ತದೇವ ಈ ರೀತಿಯಾಗಿ ಹೆಸರುಗಳನ್ನು ಉಚ್ಚರಿಸುತ್ತಾ ಅರ್ಘ್ಯ ಪಿಂಡಾದಿಗಳನ್ನು ಕೊಡಬೇಕು.

ಪೈತೃಕಾದಿಷು ನಾಮಾನಿ ಕಥ ಮೇ ವೋಚ್ಚರೇದಿತಿಃ ದ್ವಿವಾರಂ ಪಿತೃನಾಮ್ನೈವ ಪೈತೃಕಾದಿಷು ವೈ ಯತಃ। ಪ್ರಪಿತಾಮಹನಾಮಸ್ಯೈಕವಾರ ಮಿತೀಹತು। ಅನೇನ ವಿಧಿನಾ ಶ್ರಾದ್ಧಂ ಕುರ್ಯಾಜ್ಜೀವತ್ಪಿತಾಮಹಃ। ದದ್ಯಾತ್ಪಿಂಡದ್ವಯಂ ಪಿತ್ರೇಹ್ಯಥೈಕಂ ಪ್ರಪಿತಾಮಹೇ ॥

ಸಂಕಲ್ಪ ಶ್ರಾದ್ಧಂ

ಆವಾಹನಾರ್ಘ್ಯ ಪಿಂಡಾಶ್ಚವಿಕಿರೋಚ್ಛಿಷ್ಟ ಪಿಂಡಕೌ । ಸ್ವಧೋಚ್ಯತಾಽಗ್ನೌ ಕರಣಂ ಸಂಕಲ್ಪೇ ಸಪ್ತವರ್ಜಯೇತ್ ॥

ಸಂಕಲ್ಪಶ್ರಾದ್ಧವೆಂದರೆ ಆವಾಹನೆ, ಅರ್ಘ್ಯ ಪಿಂಡಪ್ರದಾನ, ವಿಕಿರ, ಉಚ್ಛಿಷ್ಟಪಿಂಡ, ಸ್ವದೋಚ್ಯತಾ ಋಗ್ವೇದಿಗಳಿಗೆ ಪಾಣಿಹೋಮ ಉಳಿದವರಿಗೆ ಅಗ್ನೌಕರಣ ಈ ಏಳು ಭಾಗಗಳನ್ನು ಬಿಟ್ಟು ಶ್ರಾದ್ಧಮಾಡಬೇಕು.

ಶ್ರಾದ್ಧವಿಘ್ನಂ

ಶ್ರಾದ್ಧಕಾಲದಲ್ಲಿ ಕರ್ತೃ ಭೋಕ್ತೃಗಳ ಮಧ್ಯೆ ಬೆಕ್ಕು ಹೋದರೂ, ಭೋಜನ ಮಾಡುತ್ತಿರುವ ಬ್ರಾಹ್ಮಣನು ವಾಂತಿಯನ್ನು ಮಾಡಿದರೂ ಆ ಶ್ರಾದ್ಧವನ್ನು ಅಷ್ಟಕ್ಕೇ ನಿಲ್ಲಿಸಿ ಬ್ರಾಹ್ಮಣ ಭೋಜನವನ್ನು ಮಾತ್ರ ಮಾಡಿಸಿದ್ದು ಕರ್ತನು ಉಪೋಷ್ಯವಿದ್ದು ಮಾರನೇ ದಿನ ಶ್ರಾದ್ಧ ಮಾಡಬೇಕು. ಅದೇ ಬ್ರಾಹ್ಮಣರಿಗೆ ಹೇಳಬೇಕು. ಈ ಕಾಲದಲ್ಲಿ ಶುದ್ಧೋಪೋಷ್ಯ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಕರ್ತನು ಕ್ಷೀರ ಫಲಾಹಾರಗಳನ್ನು ತೆಗೆದುಕೊಳ್ಳುವದು ಉತ್ತಮ.

ಶಾಸ್ತ್ರೋಕ್ತವಾದ ಚೌಲ, ಉಪನಯನ, ವಿವಾಹಗಳಲ್ಲಿ ನಾಂದಿಯಾದ ಮೇಲೆ ಆಶೌಚವು ತಿಳಿದರೆ ಅನುಷ್ಠಾನ ಮಾಡಬೇಕಾಗಿಲ್ಲ. ಅನುಷ್ಠಾನವು ಕಳೆದು ಕಂಕಣ ವಿಸರ್ಜನೆಯಾದ ನಂತರ ಆಶೌಚಾನುಷ್ಠಾನ ಮಾಡಬೇಕು.

ಪಾದಪ್ರಕ್ಷಾಳನಂ

ನಗ್ನಶ್ರಾದ್ಧೇ ನವಶ್ರಾದ್ಧೇ ಸಪಿಂಡೀ ಪ್ರೇತಕರ್ಮಸು ।
ತಿಷ್ಠತಃ ಕ್ಷಾಳನಂ ಕುರ್ಯಾದನ್ಯತ್ರೋಪ ವಿಶೇದ್ಭುವಿ ॥

ಶ್ರಾದ್ಧೇ ಯಜ್ಞೇ ವಿವಾಹೇ ಚ ದೀಕ್ಷಾಯಾಮಾಗತೇ ಗುರೌ ।
ತಿಷ್ಠತಃ ಕ್ಷಾಳನಂ ಕುರ್ಯಾನ್ನಿರಾಶಾಃ ಪಿತರೋ ಗತಾಃ ॥

ನಗ್ನ ಶ್ರಾದ್ಧ, ನವಶ್ರಾದ್ಧ ಸಪಿಂಡೀಕರಣಗಳ ಶ್ರಾದ್ಧಗಳಲ್ಲಿ ಬ್ರಾಹ್ಮಣರನ್ನು ನಿಲ್ಲಿಸಿಯೇ ಕಾಲುಗಳನ್ನು ತೊಳೆಯಬೇಕು.

ಕಾಲ ಶ್ರಾದ್ಧ, ಯಜ್ಞ, ವಿವಾಹ ದೀಕ್ಷಾಬದ್ಧನಾದ ಗುರು ಇಲ್ಲಿ ಬ್ರಾಹ್ಮಣರನ್ನು ಕೂಡಿಸಿಯೇ ಕಾಲುಗಳನ್ನು ತೊಳೆಯಬೇಕು. ಇದಕ್ಕೆ ವ್ಯತ್ಯಾಸವಾದರೆ ಪಿತೃಗಳು ನಿರಾಶರಾಗಿ ಹೊರಟುಹೋಗುತ್ತಾರೆ.

ಮಾತಾಪಿತೃಗಳು ಮೃತರಾದ ವರ್ಷ ಮಧ್ಯದಲ್ಲಿ ಅಧಿಕ ಮಾಸವು ಬಂದಾಗ ಆ ತಿಂಗಳ ಮಾಸಿಕವನ್ನು ಅಧಿಕ ಮತ್ತು ನಿಜಮಾಸಗಳೆರಡರಲ್ಲಿಯೂ ಆ ತಿಂಗಳ ಮಾಸಿಕದ ಹೆಸರನ್ನೇ ಹೇಳಿ ಕ್ರಮವಾಗಿಯೇ ಶ್ರಾದ್ಧಮಾಡಬೇಕು. ಸಂಕಲ್ಪ ಮಾತ್ರ ಕೂಡದು.

ಸಪಿಂಡೀಕರಣ ಶ್ರಾದ್ಧದ ದಿನ ಮೃತನಿಗೆ ಎಷ್ಟು ಜನ ಮಕ್ಕಳಿದ್ದರೂ (ಕರ್ತೃಗಳಾಗಿ) ಅವರ ಹೆಂಡತಿಯರು ಬಹಿಷ್ಠರಾದಲ್ಲಿ ಆ ಕರ್ಮವನ್ನು ನಿಲ್ಲಿಸಿದ್ದು ಆ ಸ್ತ್ರೀಯರ ಬಹಿಷ್ಠಾದಿನದ ಐದನೇ ದಿನ ಸಪಿಂಡಿಯನ್ನು ಮಾಡಬೇಕು. ನಾಲ್ಕನೇ ದಿನ ಅಂದರೆ ಬಹಿಷ್ಠಾಸ್ನಾನದ ದಿನವೇ ಪುನಃ ಐದನೇ ನೀರನ್ನು ಹಾಕಿ ಶ್ರಾದ್ಧ ಮಾಡಬಹುದೆಂದು ಕೆಲವರ ಮಾತು (ಮುಖ್ಯಪಕ್ಷವಲ್ಲ).

ಪ್ರಥಮಾಬ್ದಿಕ ಶ್ರಾದ್ಧದ (ವರ್ಷ ಶ್ರಾದ್ಧ) ಸಮಯದಲ್ಲಿ ಆಶೌಚಾದಿಗಳು ಪ್ರಾಪ್ತವಾದಲ್ಲಿ ಮೊದಲನೇ ಊನಾಬ್ದಿಕ ಮತ್ತು ಆಬ್ದವಿಮೋಕಶ್ರಾದ್ಧಗಳೆರಡೂ ನಿಂತು ಹೋಗಿ ಸ್ನಾನದ ದಿನವೇ ಪ್ರಥಮಾಬ್ದಿಕಶ್ರಾದ್ಧವನ್ನು ಮಾತ್ರ ಮಾಡಬೇಕು.

ಸಪ್ತ ಮಾಸಿಕದ ಸಮಯದಲ್ಲಿ ಅಧಿಕ ಮಾಸವು ಬಂದರೆ ಅಧಿಕದಲ್ಲಿ ಸಪ್ತಮ ಮಾಸಿಕವನ್ನು ಮಾಡಿದ್ದು ಪುನಃ ಶುದ್ಧ ಮಾಸದಲ್ಲಿ (ನಿಜಮಾಸ) ಸಪ್ತಮ ಮಾಸಿಕಾತ್ಪೂರ್ವದಲ್ಲಿ ಹತ್ತು ದಿನಗಳೊಳಗೆ ತ್ರಿಪಾದಿ ಮತ್ತು ಧನಿಷ್ಠಾ ಪಂಚಕ ಶುಕ್ರವಾರ ಮಂಗಳವಾರಗಳನ್ನು ಬಿಟ್ಟು ಊನಷಾಣ್ಮಾಸಿಕವನ್ನು ಮಾಡಿ ನಂತರ ಸಪ್ತಮ ಮಾಸಿಕವನ್ನು ಮಾಡಬೇಕು. ಕಾಲವು ಸಿಕ್ಕದಿದ್ದರೆ ಸಪ್ತಮ ಮಾಸಿಕದ ಹಿಂದಿನ ದಿನವೇ ಮಾಡಬೇಕು. ಮಾತಾಪಿತೃಗಳಲ್ಲಿ ಯಾರಾದರೂ ಮೃತರಾಗಿದ್ದು, ಕರ್ಮವು ನಡೆಯುತ್ತಿರುತ್ತದೆ. ಇವರಲ್ಲಿ ಯಾರೊಬ್ಬರು ಮುತರಾಗಿದ್ದರೂ ೧೧ನೇ ದಿನದ ಕರ್ಮಗಳನ್ನೆಲ್ಲಾ ಮುಗಿಸಿ ಪೂರ್ವಮೃತರ ಶ್ರಾದ್ಧವನ್ನು ಹೊರಗೆಲ್ಲಾದರೂ ಶ್ರಾದ್ಧ ಮಾಡಬೇಕು.

ಸೊಂಟಕ್ಕೆ ಬಟ್ಟೆ ಕಟ್ಟಬಾರದು.

ಯತ್ಕಿಂಚಿತ್ಕುರುತೇ ಕರ್ಮ ವೈದಿಕಂ ವಾಽಥ ತಾಂತ್ರಿಕಮ್ ।
ಕಟಿ ಬಂಧೇನ ಸಂಯುಕ್ತಃ ತತ್ಸರ್ವಂ ನಿಷ್ಫಲಂ ಭವೇತ್ ॥

ಶುಭಾಽಶುಭ ಕರ್ಮಗಳನ್ನು ಮಾಡುವಾಗ ಹೊದ್ದಿರುವ ವಸ್ತ್ರವನ್ನು ಉಪವೀತ ದಂತೆಯೇ ನಿವೇತಿ ಪ್ರಾಚೀನಾವೀತೀ ಅಥವಾ ಸವ್ಯ ಕ್ರಮಗಳಿಗೆ ಬದಲಾಯಿಸುತ್ತಿರಬೇಕು. ಸೊಂಟಕ್ಕೆ ಕಟ್ಟಿ ಕರ್ಮ ಮಾಡಿದರೆ ಮಾಡಿದ ಕರ್ಮವೆಲ್ಲವೂ ನಿಷ್ಫಲವಾಗುತ್ತದೆ (ವಂದನೇ ತರ್ಪಣೇ ಶ್ರಾದ್ಧೇ ಜಪಾದೌ ಚ ಸುರಾರ್ಚನೇ। ಕಟ್ಯಾಂ ವೈಧಾರಯೇದ್ವಸ್ತ್ರಂ ವರ್ಜಯೇದಾಶ್ವಲಾಯನಃ)

ಪಿಂಡಪ್ರದಾನ: ಏತತ್ತೇ ಮಾತಃ ದೇವಿದೇ ಗೋತ್ರೇ ವಸುರೂಪೇ ಯೇ ಚ ತ್ವಾಮತ್ರಾನು ಏತತ್ತೇ ಮಾತ್ರೇ ದೇವಿದಾಯ್ಯೈ ಗೋತ್ರಾಯ್ಯೈ ವಸುರೂಪಾಯ್ಯೈ ಯೇ ಚ ತಾಮನುಗಚ್ಛಂತಿ ತೇಭ್ಯಶ್ಚಾಯಂ ಪಿಂಡಃ, ತಸ್ಯೈತೇ ಸ್ವಧಾ ನಮಃ ಗಯಾಯಾಂ ದತ್ತಮ್ ॥ ಇದು ಶಾಸ್ತ್ರ. ಎಂದು ಪಿಂಡಪ್ರದಾನ (ತಾಯಿ) ಮಾಡುವಾಗ ಯಶ್ಚತ್ವಾಮತ್ರಾನು...... ಯಶ್ಚತ್ವಾಮನುಗಚ್ಛಂತಿ ತಾಭ್ಯಶ್ಚಾಯಂ ಪಿಂಡಃ ಎಂಬುದಾಗಿ ಊಹೆಗಳನ್ನು ಮಾಡುತ್ತಾರೆ. ಇದು ಶಾಸ್ತ್ರವಿರುದ್ಧ.

ಮತ್ತೊಂದು ವಿಷಯ: "ಇದಾನೀಂ ಪ್ರಾಚೀನಾವೀತೀ, ಗಂಧ, ಪುಷ್ಪ, ಧೂಪ, ದೀಪಾಚ್ಛಾದನಾನಾಂ ಪ್ರದಾನಂ" ಎಂದು ಹೇಳಿರುತ್ತಾರೆ. ಹಿಂದುಮುಂದು ತಿಳಿಯದೇ ತಿಳಿದವರನ್ನೂ ಕೇಳದೆ ಸವ್ಯದಿಂದಲೇ ಎಲ್ಲವನ್ನೂ ಮಾಡಿಸುತ್ತಾರೆ. ಇದು ನಮ್ಮ ಸಂಪ್ರದಾಯವೆಂದು ಹೇಳುತ್ತಾರೆ. ಇದು ತಪ್ಪು.

ಶ್ರಾದ್ಧದಲ್ಲಿ ಪಿತೃಸ್ಥಾನೀಯ ಬ್ರಾಹ್ಮಣನ ಎಡಭಾಗದಲ್ಲಿ ಪಾತ್ರತ್ರಯಗಳನ್ನು ಆಸಾದನೆ ಮಾಡಿ ಅವುಗಳಲ್ಲಿ ತಿಲವನ್ನು ಹಾಕುವಾಗ 'ತಿಲೋಽಸಿ ಸೋಮ ದೇವತ್ಯೋ ಗೋಸವೇ ದೇವ ನಿರ್ಮಿತಃ। ಪ್ರತ್ನವದ್ಭಿಃ ಪ್ರತ್ತಸ್ವಧಯಾ ಪಿತೃ ನಿಮಾನ್ ಲೋಕಾನ್ ಪ್ರೀಣಯಾಹಿ ನ ಸ್ವಧಾ ನಮಃ' ಎಂದೇ ಮೂರು ಪಾತ್ರೆಗಳಿಗೂ ಹಾಕಬೇಕು. ಇದನ್ನು ಬಿಟ್ಟು ಮಾತೃಶ್ರಾದ್ಧದಲ್ಲಿ ಮಾತೄರಿಮಾನ್, ಲೋಕಾನ್, ಪಿತಾಹೀಮಾನ್, ಪ್ರಪಿತಾ ಮಹೀಮಾನ್ ಎಂದೂ, ಪಿತೃಶ್ರಾದ್ಧದಲ್ಲಿ ಪಿತೄನ್, ಇರ್ಮಾ, ಪಿತಾಮಹೀರ್ಮಾ, ಪ್ರಪಿತಾಮಹೀರ್ಮಾ ಇತ್ಯಾದಿಯಾಗಿ ಊಹೆಗಳನ್ನು ಮಾಡುತ್ತಾ ಶ್ರಾದ್ಧವನ್ನು ನಡೆಸು ತ್ತಾರೆ. ನಮ್ಮ ಆಶ್ವಾಲಾಯನರಿಗೆ ಈ ಊಹೆಯು ಕೂಡದೆಂದು ನಮ್ಮ ಸೂತ್ರಕಾರರು ನಿಷೇಧಿಸಿರುತ್ತಾರೆ. ಪಿತೃವಾಗಲೀ ಮಾತೃವಾಗಲೀ ಯಾರೇ ಆದರೂ ಊಹೆ ಮಾಡಲೇಬಾರದು. ತಿಲಾವಪನಕ್ಕೂ ಪಿಂಡಪ್ರದಾನಕ್ಕೂ ಮಾತ್ರ ಈ ನಿಯಮವು.

ಪಿಂಡದ ವಿಷಯ: ಯದ್ಯದನ್ನ ಮುಪಭುಕ್ತಂ ತತ್ತತ್ ಸ್ಥಾಲಿಪಾಕೇನ ಸಹ ಪಿಂಡಾರ್ಥ ಮುದ್ಧೃತ್ಯ ಇತ್ಯಾದಿ (ಬ್ರಾಹ್ಮಣರಿಗೆ ಭೋಜನಾರ್ಥವಾಗಿ ಮಾಡಿರುವ

ಪಾಕದಲ್ಲಿ ಸ್ವಲ್ಪಸ್ವಲ್ಪವಾಗಿ ಎಲ್ಲವನ್ನೂ ಸೇರಿಸಿಕೊಂಡು ಅದರಿಂದ ಪಿಂಡವನ್ನು ಕಟ್ಟಬೇಕೆಂದು ಶಾಸ್ತ್ರೋಕ್ತಿಯಿದೆ.)

ವಿಕಿರ: ಪಿಂಡದಾನ ಪಕ್ಷೇ ಅನುಚಾಂತೇಷು ಪಿಂಡಂದತ್ವಾ ತತಃ ಉಚ್ಛಿಷ್ಟಾನಾಂ ಸಮೀಪೇ ಅನ್ನಂ ಪ್ರಕಿರೇತ್, ಸಾರ್ವವರ್ಣಿಕ ಮನ್ನಾದ್ಯ ಮಾನೀಯಾಽ ಪ್ಲಾವ್ಯ ವಾರಿಣಾ। ಸಮುತ್ಸೃಜೇದ್ಭುಕ್ತವತಾಮಗ್ರತೋ ವಿಕಿರನ್ ಭುವಿ। ಎಂದು ಹೇಳಿರುವುದರಿಂದ ಬ್ರಾಹ್ಮಣರ ಭೋಜನದ ಎಲೆಯ ಮುಂದೆ ನೀರನ್ನು ಸೇರಿಸಿ (ದಧಿಯನ್ನು ಸೇರಿಸ ಬೇಕಾಗಿಲ್ಲ) ವಿಕಿರವನ್ನು ಹಾಕಬೇಕು. ಪಿಂಡದ ಸುತ್ತಲೂ ವಿಕಿರವನ್ನು ಹಾಕುವುದೂ ಒಂದು ಪಕ್ಷವಿದೆ.

ಗ್ರಹಣದ ಸಮಯವನ್ನು ಬಿಟ್ಟರೆ ಉಳಿದ ಅಮಾವಾಸ್ಯೆ, ಸಂಕ್ರಮಣಗಳು ಅಂದರೆ ತರ್ಪಣದ ದಿನಗಳಲ್ಲಿ ರಾತ್ರೆ ಹೊತ್ತು ಸೂರ್ಯಸ್ತಮಯಾನಂತರ ತರ್ಪಣಗಳನ್ನು ಮಾಡಬಾರದು.

ಗಯಾ, ಬ್ರಹ್ಮಕಪಾಲಗಳಲ್ಲಿ ಶ್ರಾದ್ಧ ಮಾಡಿದವರು ಪುನಃ ಶ್ರಾದ್ಧವನ್ನು ಮಾಡಬೇಕಾಗಿಲ್ಲವೆಂದು ಕೆಲವರು ಹೇಳುತ್ತಾರೆ. ಅದು ತಪ್ಪು ನಾವು ಪುಣ್ಯ ಸಂಪಾದನೆ ಗಾಗಿ ಪುಣ್ಯ ಕ್ಷೇತ್ರಗಳಲ್ಲಿ ಶ್ರಾದ್ಧಮಾಡುತ್ತೇವೆ. ಆದರೆ ನಾವು ಜೀವಂತರಾಗಿರುವವರೆಗೂ ಕರ್ಮಭೂಮಿಯಾದ ನಮ್ಮ ಊರುಗಳಲ್ಲಿ ಶ್ರಾದ್ಧ ಮಾಡಲೇಬೇಕು. ಪುಣ್ಯಕ್ಷೇತ್ರಗಳಿಗೆ ಹೋಗಿ ಯಾವಾಗಲೂ ಮಾಡುವುದಿಲ್ಲ. ಉದಾಹರಣೆ.

ಪ್ರತಿಯೊಂದು ವ್ರತದಲ್ಲಿಯೂ "ವ್ರತನಾಮುತ್ತಮಂ ವ್ರತಂ" ಎಂದೂ ಹೇಳಿದೆ. ಆದರೆ ಯಾವುದನ್ನು ಮಾಡಬೇಕು? ಯಾವುದನ್ನು ಬಿಡಬೇಕು ಎಂದು ಯೋಚಿಸಬೇಕಾಗು ತ್ತದೆ. ಯೋಚಿಸಿದರೆ ಆ ದಿನಕ್ಕೆ ಆ ವ್ರತದ ಮಹಿಮೆ ಆ ವ್ರತದಲ್ಲಿ ಹೇಳಿದೆಯೆಂದು ಬೇರೆ ವ್ರತಗಳನ್ನು ಬಿಡಬಾರದು. ಆದ್ದರಿಂದ ಆ ಕ್ಷೇತ್ರದಲ್ಲಿ ಆ ದಿನ ಪುಣ್ಯಕರ್ಮಗಳನ್ನು ಮಾಡಿದ ಮಾತ್ರಕ್ಕೆ ಬಿಡಬಾರದು. ಈ ನಮ್ಮ ಊರುಗಳಲ್ಲಿ ನಮ್ಮ ಪಿತೃಕರ್ಮಗಳನ್ನು ಮಾಡಲೇ ಬೇಕು.

ಧರ್ಮಶಾಸ್ತ್ರಗಳು ಹೇಳಿರುವ ಉಕ್ತಿಗಳನ್ನು ಬಿಟ್ಟು ಕೇವಲ ತಾತ್ಪರ್ಯಗಳನ್ನು ಮಾತ್ರ ಬರೆದಿರುತ್ತೇನೆ. ಇದರಿಂದ ಗ್ರಾಹಕರು ಅನುಮಾನ ಪಡಬಾರದಾಗಿ ಪ್ರಾರ್ಥನೆ.

ಕರ್ತನ ಪತ್ನಿಯು ಮೃತಳಾದಲ್ಲಿ ಅವಳ ಮಕ್ಕಳ ಹೆಸರಿನಲ್ಲಿ ಕ್ರಿಯಾದಿಗಳನ್ನು ಮಾಡತಕ್ಕದ್ದು. ಮಗನ ಪಿತಾಮಹಿ ಪ್ರಪಿತಾಮಹಿಯರಿಬ್ಬರೂ ಜೀವಂತರಾಗಿದ್ದಲ್ಲಿ ಪ್ರಪಿತಾಮಹಿಯ ಹೆಸರನ್ನೇ ತ್ರಿರುಚ್ಚಾರಣೆ ಮಾಡಿ ವೃದ್ಧಪ್ರಪಿತಾಮಹಿಗೆ ಪಾಥೆಯ ಶ್ರಾದ್ಧವನ್ನು ಮಾಡಿಸಿ ನಿವೃತ್ತಿ ಮಾಡತಕ್ಕದ್ದು. ಇದೇ ವರ್ಷದಲ್ಲಿ ಕರ್ತನ ತಾಯಿಯು ಮೃತಳಾದಲ್ಲಿ ಅಬ್ದವಿಮೋಕ ಪರ್ಯಂತವಾದ ಮಾಸಿಕಗಳನ್ನೆಲ್ಲಾ ಪೂರ್ತಿಮಾಡಿ ಊನಾಬ್ದಿಕವನ್ನು ೮ ಅಥವಾ ೧೦ ದಿನಗಳ ಮುಂಚಿತವಾಗಿ ಮಾಡಿಬಿಟ್ಟು

ಅಬ್ದವಿಮೋಕದ ಹಿಂದಿನ ದಿನ ಕ್ರಮಪಾರ್ವಣ ಶ್ರಾದ್ಧವನ್ನು ಮಾಡಿ ನಂತರ ಅಬ್ದವಿಮೋಕ ಪ್ರಥಮಾಬ್ದಿಕಗಳನ್ನು ಮಾಡತಕ್ಕದ್ದು. ಪಿತಾಮಹಿಯು ಗತಿಸಿದರೂ ಕೂಡ ಇದೇ ರೀತಿ ಮಾಡತಕ್ಕದ್ದು.

ವಿಭಕ್ತಿಗಳ ಉಚ್ಚಾರಣೆ

ಮಾತೃಶಬ್ದ


ಪ್ರಥಮಾ ವಿಭಕ್ತಿ = ಮಾತಾ (ದೇವಿದಾ) ನಾಮ್ನೀ-ಗೋತ್ರಾ ಪ್ರೇತಾ
ಸಂ. ಪ್ರ. ವಿಭಕ್ತಿ = ಮಾತಃ ನಾಮ್ನೀ ಗೋತ್ರೇ ಪ್ರೇತೇ
ದ್ವಿತೀಯಾ ವಿಭಕ್ತಿ = ಮಾತರಂ. ನಾಮ್ನೀಂ ಗೋತ್ರಾಂ. ಪ್ರೇತಾಂ.
ತೃತೀಯಾ ವಿಭಕ್ತಿ = ಮಾತ್ರಾ ನಾಮ್ನ್ಯಾ ಗೋತ್ರಯಾ ಪ್ರೇತಯಾ
ಚತುರ್ಥೀ ವಿಭಕ್ತಿ = ಮಾತ್ರೇ ನಾಮ್ನ್ಯೈ ಗೋತ್ರಾಯೈ ಪ್ರೇತಾಯೈ
ಷಷ್ಠೀವಿಭಕ್ತಿ = ಮಾತುಃ ನಾಮ್ನ್ಯಾಃ ಗೋತ್ರಾಯಾಃ ಪ್ರೇತಾಯಾಃ

ಪಿತೃಶಬ್ದ

ಪಿತಾ ದೇವಶರ್ಮಾ ಗೋತ್ರಃ ಪ್ರೇತಃ
ಪಿತಃ. ದೇವಶರ್ಮ ಗೋತ್ರಾ. ಪ್ರೇತಾ
ಪಿತರಂ ದೇವಂ ಶರ್ಮಾಣಂ ಗೋತ್ರಂ ಪ್ರೇತಂ
ಪಿತ್ರಾ. ದೇವ ಶರ್ಮಣಾ. ಗೋತ್ರೇಣ. ಪ್ರೇತೇನ
ಪಿತ್ರೇ ದೇವ ಶರ್ಮಣೇ. ಗೋತ್ರಾಯ. ಪ್ರೇತಾಯ
ಪಿತುಃ ದೇವ ಶರ್ಮಣಃ. ಗೋತ್ರಸ್ಯ. ಪ್ರೇತಸ್ಯ

ನಮ್ಮ ಕೆಲವು ಪ್ರಕಟಣೆಗಳು

- ಮಹಾವಿಷ್ಣು ಮತ್ತು ಅವನ ವಿವಿಧ ರೂಪಗಳು
- ಶಿವ—ಒಂದು ಚಿಂತನೆ
- ದೇವಿ ಮತ್ತು ಅವಳ ರೂಪಗಳು
- ಉಪನಯನ
- ಆಧುನಿಕ ಸಮಸ್ಯೆಗಳು—ಪ್ರಾಚೀನ ಪರಿಹಾರಗಳು
- ಗಂಗಾ—ಒಂದು ಕಿರುಪರಿಚಯ
- ಜಾತಿ ಪದ್ಧತಿ—ಒಂದು ವಿವೇಚನೆ
- ತಂತ್ರಗಳು—ಒಂದು ವಿಹಂಗಮ ನೋಟ
- ಆದಿತ್ಯಹೃದಯಮ್
- ಶ್ರಾದ್ಧ
- ಧ್ಯಾನ—ಒಂದು ಸಂಕ್ಷಿಪ್ತ ಕೈಪಿಡಿ
- ದೇವರ ಪೂಜೆ
- ಶೀಲ–ಶಕ್ತಿಯ ಮೂಲ
- ಆಲೋಚನೆ–ಪ್ರಚೋದನೆ
- ತಪಸ್ಸು–ಯಶಸ್ಸು
- ಹೀಗೊಂದು ಕಥೆ
- ಕಗ್ಗಕ್ಕೊಂದು ಕೈಪಿಡಿ
- ಜೀವ ಸಾರ್ಥಕ್ಯ ದೀಪಿಕೆ
- ಶ್ರೀಮದಾಂಜನೇಯಸ್ವಾಮಿ
- ಸದ್ಯಕ್ಕೆ ಇಷ್ಟು ಸಾಕು!—ಕನ್ನಡ ಶಬ್ದಸಂಪತ್ತು
- Śrāddha
- The Philosophy of Viśiṣṭādvaita



ವೇ॥ ಬ್ರ॥ ಶ್ರೀ॥ ಧಾಳೀಲಕ್ಷ್ಮೀನರಸಿಂಹಭಟ್ಟ

ಮೈಸೂರು ಅರಮನೆಯ ಧರ್ಮಾಧಿಕಾರಿಗಳೂ, ಆಸ್ಥಾನ ವಿದ್ವಾಂಸರೂ ಹಾಗೂ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಋಗ್ವೇದ ಪ್ರಾಧ್ಯಾಪಕರೂ ಆಗಿದ್ದ ದಿ॥ ವೇ॥ ಬ್ರ॥ ಶ್ರೀ ಧಾಳೀಭೀಮಭಟ್ಟರ ಸುಪುತ್ರರಾಗಿ ದಿನಾಂಕ 28-5-1927 ರಂದು ಜನಿಸಿ, ಗುರುಕುಲ ಪರಂಪರೆಯಂತೆ ಸಾಂಪ್ರದಾಯಿಕವಾಗಿ ತಮ್ಮ ತಂದೆಯವರಿಂದಲೇ ಸಲಕ್ಷಣಘನಾಂತ ಸಾಂಗ ವೇದಾಧ್ಯಯನವನ್ನು ಮಾಡಿರುತ್ತಾರೆ. ಇದರ ಜೊತೆಗೆ ಬ್ರಾಹ್ಮಣ, ಆರಣ ಮತ್ತು ಸಾಹಿತ್ಯವನ್ನುಅಧ್ಯಯನ ಮಾಡಿದ್ದಾರೆ.

ರಾಜ್ಯ ಪ್ರಶಸ್ತಿ ವಿಜೇತರಾದ ಇವರು ಋಗ್ವೇದ ವಿಶಾರದ, ಋಗ್ವೇದ ರತ್ನ, ಋಗ್ವೇದ ಭೂಷಣ, ವಿದ್ಯಾಸಾಗರ ಇತ್ಯಾದಿ ಬಿರುದುಗಳನ್ನು ಪಡೆದಿದ್ದು, ಬೆಂಗಳೂರಿನ ಶ್ರೀ ಶಂಕರಮಠ, ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ, ಮಾಗಡಿ ಕರಣಿಕರ ಪಾಠಶಾಲೆ, ಶ್ರೀ ಶೇಷಮಹಾಗಣಪತಿ ದೇವಾಲಯ ಮುಂತಾದ ಕಡೆ ವೇದಪಾಠಗಳನ್ನು ನಡೆಸಿ, ಈಗ ಬಸವಣ್ಣನ ಗುಡಿ ರಸ್ತೆಯಲ್ಲಿರುವ "ನವಮಂತ್ರಾಲಯ ಮಂದಿರ"ದ ಪಾಠಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ವೇದಾಧ್ಯಯನವನ್ನು ಮಾಡಿಸುತ್ತಾ ಅಪಾರ ಶಿಷ್ಯವೃಂದವನ್ನು ಹೊಂದಿರುತ್ತಾರೆ.

ಬೆಲೆ: ರೂ. 70/-

ಶ್ರೀ ನಿತ್ಯಾನಂದ ಪ್ರಿಂಟರ್ಸ್, ಬೆಂಗಳೂರು 560 050